# ಭಾರತದಲ್ಲಿ
# ಪ್ರಸ್ತುತ ವಿಜ್ಞಾನದ ಮೀಮಾಂಸೆ

# ಅಥವಾ

# “ಶ್ರೀ ಸಾಮಾನ್ಯರಿಂದ ವಿಜ್ಞಾನ”

ಶಿ. ರಾ. ಗಾರವಾಡ

# “ಭಾರತದಲ್ಲಿ ಪ್ರಸ್ತುತ ವಿಜ್ಞಾನದ ಮೀಮಾಂಸೆ”

**ಅರ್ಪಣೆ**
**ತಳಮಟ್ಟದ ಸಂಶೋಧಕರಿಗೆ**
**ಮತ್ತು**
**ಜಿಲ್ಲಾ ಮಟ್ಟದ ಆಡಳಿತಗಾರರಿಗೆ**

: ಲೇಖಕರು :
ಶಿ. ರಾ. ಗಾರವಾಡ

:: ಪ್ರಕಟಣೆ ::
~~~~~~~~~~~~~~~~
ಕರ್ನಾಟಕ ಸರ್ಕಾರ
ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ ಕೃಪೆಯಿಂದ
~~~~~~~~~~~~~~~~

ಮೊದಲ ಮಾತು :

೧೯೮೮-೮೯ನೇ ಸಾಲಿನಲ್ಲಿ ನಾನು "ಭಾರತದಲ್ಲಿ ವೈಜ್ಞಾನಿಕ ಸಂಶೋಧನೆಗಳು ಮತ್ತು ಸಂವಿಧಾನಿಕ ಅಡತಡೆಗಳು" ಎಂಬ ಒಂದು ಕಿರು ಲೇಖನವನ್ನು ಬರೆದೆನು ನನ್ನ ಕುತೂಹಲಕ್ಕಾಗಿ ಅದನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ನಾನು ಸೇವೆ ಸಲ್ಲಿಸುತ್ತಿರುವಾಗ ಮುದ್ರಿಸಿ ಕೆಲವು ಜನರಿಗೆ ವಿವರಿಸಿದೆನು. ಅದರ ಹಿಂದಿ ಅನುವಾದವನ್ನು ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿಯ ಮಾಸಿಕ ಪತ್ರಿಕೆಯಲ್ಲಿ ಶ್ರೀಮತಿ ಬಿ.ಎಸ್. ಶಾಂತಾಬಾಯಿ ಅವರು ಪ್ರಕಟಿಸಿದರು.

ನಂತರ ನಾನು ೨೦೦೨ನೇ ಸಾಲಿನಲ್ಲಿ ಕರ್ನಾಟಕ ಭವನಕ್ಕೆ ಆಗಮಿಸಿದಾಗ ದಿನಾಂಕ ೧೮.೧೨.೨೦೦೨ನೇ ದಿನದಂದು ಸ್ಥಳೀಯ ಹಿಂದುಸ್ಥಾನ್ ಟೈಮ್ಸ್ ಪತ್ರಿಕೆಯಲ್ಲಿ ರಾಷ್ಟ್ರಪತಿ ಡಾ: ಎ.ಪಿ.ಜೆ. ಅಬ್ದುಲ ಕಲಾಂ ಅವರ ಭಾವಚಿತ್ರವಿರುವ ಸುದ್ದಿ ಪ್ರಕಟವಾಗಿತ್ತು. ಅದರ ತಲೆಬರಹ "Grass Root talents gets its due" ಎಂದಿತ್ತು. ಅದು ನನ್ನನ್ನು ಆಕರ್ಷಿಸಿತು. ಅದನ್ನು ವಿವರವಾಗಿ ಓದಿದಾಗ ನನ್ನ ವಿಚಾರಗಳು ಪುನ: ಚಿಗುರು ಒಡೆಯಲು ಪ್ರಾರಂಭವಾಯತು. ಡಾ: ಅನೀಲ ಕೆ. ಗುಪ್ತಾ, ಪ್ರೊಫೆಸರ್, I.I.M, ಅಹ್ಮದಾಬಾದ್ ಮತ್ತು ಸಂಪಾದಕರು ಹನಿ ಪತ್ರಿಕೆ ಅವರು ನನ್ನ ವಿಚಾರವನ್ನು ೧೦೦% ಅನುಮೋದಿಸಿದರು ಈ ಬಗ್ಗೆ ಚಿಂತನೆ ಮಾಡಿದ ತರುವಾಯ ನಾನು ಭಾರತ ಸಂವಿಧಾನಕ್ಕೆ ಒಂದು ತಿದ್ದುಪಡಿ ತರಲು, ವಿಚಾರ ಮಾಡಿದೆ. ಒಮ್ಮೆ ಆಕಸ್ಮಿಕವಾಗಿ ಕರ್ನಾಟಕ ಭವನದ ನನ್ನ ಸಹೋದ್ಯೋಗಿಯಾದ ಶ್ರೀಮತಿ ವಿಜಯಲಕ್ಷ್ಮಿ ವಾರದ್ ಅವರ ಪತಿಯವರಾದ ಶ್ರೀ ನರೇಂದ್ರ ಬಾಬು ಅವರ ಪರಿಚಯವಾಯಿತು. ಅವರು ಬಹಳ ಪರಿಶ್ರಮದ ತರುವಾಯ ಒಂದು ಕರಡು ಮಸೂದೆಯನ್ನು ನನಗಾಗಿ ಸಿದ್ದಪಡಿಸಿ ನೀಡಿದರು. ಅದನ್ನು ಮಾಜಿ ಸಂಸತ್ ಸದಸ್ಯರಾದ ಶ್ರೀ ಐ.ಜಿ. ಸನದಿ ಅವರ ಹೆಸರಿನಲ್ಲಿ ಖಾಸಗಿ ಮಸೂದೆ ರೂಪದಲ್ಲಿ ಸಂಸತ್ತಿನಲ್ಲಿ ಮಂಡಿಸಲಾಯಿತು. ಆದರೆ ಈ ಮಧ್ಯೆ ಲೋಕಸಭೆ ವಿಸರ್ಜನೆಯಾದುದರಿಂದ ಅದು ಅಲ್ಲಿಗೆ ಬಿದ್ದುಹೋಯಿತು. ನಂತರ ಹೊಸದಾಗಿ ಲೋಕಸಭೆ ರಚಿತವಾದ ಮೇಲೆ ಕರ್ನಾಟಕದ ನಾಲ್ಕು ಸಂಸತ್ ಸದಸ್ಯರು ಕೇಂದ್ರ ಸಂಪುಟದಲ್ಲಿ ಮಂತ್ರಿಗಳಾದರು ಅವರಲ್ಲಿ ಭಾರತದಲ್ಲಿ ವಿಜ್ಞಾನ ಪ್ರಗತಿಗೆ ಸಂಬಂಧಿಸಿದಂತೆ ಸಂವಿಧಾನ ತಿದ್ದುಪಡಿ ವಿಷಯ ಪ್ರಸ್ತಾಪ ಮಾಡಿದಾಗ ಅವರು ಅದಕ್ಕೆ ಸ್ಪಂದಿಸಿ ಸಹಕರಿಸುವುದಾಗಿ ತಿಳಿಸಿದರು, ಶ್ರೀ ಕೆ. ಹೆಚ್. ಮುನಿಯಪ್ಪ, ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ತಮ್ಮ ಶಿಫಾರಸ್ಸನ್ನು ಕೇಂದ್ರ ವಿಜ್ಞಾನ ಮಂತ್ರಿಗಳಿಗೆ ಸಂತೋಷದಿಂದ ನೀಡಿದರು.

ಸದರಿ ಸಂವಿಧಾನ ತಿದ್ದುಪಡಿ ಪ್ರಸ್ಥಾವನೆಯು ಕೇಂದ್ರ ಸರ್ಕಾರದ ವಿಜ್ಞಾನ, ತಂತ್ರಜ್ಞಾನ ಇಲಾಖೆಯಲ್ಲಿ ಇರುತ್ತದೆ. ಕೇಂದ್ರ ವಿಜ್ಞಾನ ತಂತ್ರಜ್ಞಾನ ಇಲಾಖೆಯ ಹಿರಿಯ ವಿಜ್ಞಾನಿಗಳಾದ ಶ್ರೀ ಆರ್. ಸಹಾ ಅವರೂ ಕೂಡಾ ನನ್ನ ಅಭಿಪ್ರಾಯವನ್ನು ಅನುಮೋದಿಸಿದರು. ಶ್ರೀ ಎಂ. ವಿ. ರಾಜಶೇಖರರವರು ಈ ಬಗ್ಗೆ ಶ್ರೀ ದಂಡಿನ್, ಕೇಂದ್ರ ರೇಶ್ಮೆ ಸಂಶೋಧನಾ ಕೇಂದ್ರ ಮಂಡಳಿ, ಮೈಸೂರು ಇದರ ನಿರ್ದೇಶಕರಾದ ಅವರನ್ನು ಸಂಪರ್ಕಿಸಲು ತಿಳಿಸಿದರು ಶ್ರೀ ದಂಡಿನ್ ಅವರು ನನ್ನ ವಿಚಾರವನ್ನು ಮನ:ಪೂರ್ವಕವಾಗಿ ಅನುಮೋಧಿಸಿದರು. ವೈಯಕ್ತಿಕವಾಗಿ ನನ್ನಲ್ಲಿ ಆಗಮಿಸಿ ಅಭಿನಂದಿಸಿದರು. ರಾಷ್ಟ್ರಮಟ್ಟದಲ್ಲಿ ಪ್ರಸಿದ್ದ ವಿಜ್ಞಾನಿಗಳಾದ ಮತ್ತು ಕನ್ನಡಿಗರೇ ಆದ ಶ್ರೀ ಸಿ.ಎನ್.ಆರ್. ರಾವ್ ಅವರಲ್ಲಿ ಪತ್ರ ಮುಖೇನ ಸಂಪರ್ಕ ಮಾಡಿದಾಗ ಅವರು ಈ ವಿಷಯ ಪರಿಶೀಲನೆಗೆ ಯೋಗ್ಯವಾಗಿದೆ. ರಾಷ್ಟ್ರ ಮಟ್ಟದಲ್ಲಿ ಈ ಬಗ್ಗೆ ಸೂಕ್ತ ಕ್ರಮಜರುಗಿಸುವುದಾಗಿ ಭರವಸೆ ನೀಡಿದರು.

ಈ ದಿಶೆಯಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವ ವಿಚಾರ ಮುಂದುವರೆದುಕೊಂಡುಬಂದಿದೆ. ಈ ದಿನಾಂಕ ೩೦.೦೪.೨೦೦೫ ರಂದು ಮಾನ್ಯ ಶ್ರೀ ಬಸವರಾಜ ಹೊರಟ್ಟಿ ಕರ್ನಾಟಕ ಸರ್ಕಾರದ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಮಂತ್ರಿಗಳು ಕರ್ನಾಟಕ ಭವನಕ್ಕೆ ಆಗಮಿಸಿದ್ದರು. ಅವರು ನನ್ನ ಊರಿನವರೇ ಆಗಿರುತ್ತಾರೆ. ಅವರಲ್ಲಿ ನಾನು ಭಾರತದಲ್ಲಿ ವಿಜ್ಞಾನ ತಂತ್ರಜ್ಞಾನದ ಕುಂದುಕೊರತೆಗಳ ಬಗ್ಗೆ ಪ್ರಸ್ಥಾಪ ಮಾಡಿದಾಗ ಅವರು ನನ್ನ ವಿಚಾರಗಳನ್ನು ಬಹಳ ತಾಳ್ಮೆ ಮತ್ತು ಆಸಕ್ತಿಯಿಂದ ಆಲಿಸಿದರು ಮತ್ತು ಈ ಬಗ್ಗೆ ನಮ್ಮ ಚರ್ಚೆಯಲ್ಲಿ ಉಲ್ಲೇಖಿಸಲಾದ ಎಲ್ಲ ಅಂಶಗಳನ್ನು ಸೇರಿಸಿ ಒಂದು ಲೇಖನ ಸಿದ್ದಪಡಿಸಲು ಸೂಚಿಸಿದರು. ಹೀಗಾಗಿ ನನ್ನ ಈ ಲೇಖನ ಮೂಡಿ ಬರಲು ಮಾನ್ಯ ಶ್ರೀ ಬಸವರಾಜ ಹೋರಟ್ಟಿ ಅವರ ಭರವಸೆಯ ಸ್ಪೂರ್ತಿಯೆ ಕಾರಣವೆಂದು ಈ ಮೂಲಕ ಹೇಳುತ್ತೇನೆ.

ನನ್ನ ಈ ವಿಚಾರಗಳನ್ನು ಕಾಲಕಾಲಕ್ಕೆ ಕರ್ನಾಟಕ ಭವನಕ್ಕೆ ಆಗಮಿಸಿದ ಕರ್ನಾಟಕ ಸರ್ಕಾರದ ಕೆಲವು ಉನ್ನತ ಅಧಿಕಾರಿಗಳಲ್ಲಿ ಪ್ರಸ್ತಾಪ ಮಾಡಿರುತ್ತೇನೆ. ಅವರೆಲ್ಲರೂ ಅದನ್ನು ಅನುಮೋದಿಸಿರುತ್ತಾರೆ. ಈ ವಿಜ್ಞಾನ ಪ್ರಚಾರ ಕಾರ್ಯಕ್ಕೆ ಕರ್ನಾಟಕ ಭವನದ ಉಪ ನಿವಾಸಿ ಆಯಕ್ತರಾದ ಶ್ರೀ ಬಿ. ಎಸ್. ಕೃಷ್ಣಪ್ರಸಾದ್ ಅವರು ಸ್ವಯಂ ಸ್ಪೂರ್ತಿಯಿಂದ ಸಹಕರಿಸಿರುತ್ತಾರೆ ಮತ್ತು ಕಾಲಕಾಲಕ್ಕೆ ಸೂಕ್ತವಾದ ಮನೋಬಲವನ್ನು ನೀಡಿರುತ್ತಾರೆ. ಆದರೆ ಈ ವಿಚಾರಗಳು ಸರಿಯಾಗಿದ್ದರು ಅವುಗಳನ್ನು ಅನುಷ್ಟಾನಗೊಳಿಸುವ ಬಗ್ಗೆ ಕೆಲವು ಅಧಿಕಾರಿಗಳು ಸ್ವಲ್ಪ ಅನುಮಾನ ಹೊಂದಿರುತ್ತಾರೆ. ಯಾವುದೇ ಕಾರ್ಯ ಒಂದೇ ಬಾರಿಗೆ ಅನುಷ್ಟಾನಗೊಳ್ಳಲಾರದು ವಿಜ್ಞಾನದಂತ: ವಿಷಯದಲ್ಲಿ Trial & Error System ನಂತೆ ಇದರ ಅನುಷ್ಟಾನಕ್ಕಾಗಿ ನಾವು Trial & Error ಪದ್ದತಿ ಅಳವಡಿಸಬೇಕು. ಕರ್ನಾಟಕದಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ವಿಜ್ಞಾನ, ತಂತ್ರಜ್ಞಾನ ಅಕಾಡೆಮಿಯಲ್ಲಿ ಕೆಳಮಟ್ಟದ ವಿಜ್ಞಾನಿಗಳಿಗೆ ಸೂಕ್ತ ಅವಕಾಶದೊರಕಬೇಕೆಂಬ ಕಾರ್ಯಕ್ಕಾಗಿ ನಾನು ಈ ನನ್ನ ಲೇಖನ ಸಿದ್ದಪಡಿಸಿರುತ್ತೇನೆ. ೦ ದಿಂದ ೧ಕ್ಕೆ ತಲುಪುವುದೇ ಅತೀ ಕಠಿಣ ಕೆಲಸವಾಗಿದೆ. ಒಂದು ಸಲ ೧ನ್ನು ತಲುಪಿದ ಮೇಲೆ ೨, ೩, ೪ ಹೀಗೆ ಮೇಲೆ ಏರುವುದು ಸುಲಭ ನಾವು ೦ ಮತ್ತು ೧ರ ನಡುವೆಯಲ್ಲಿಯೇ ಇದ್ದೇವೆ.

ಅತೀ ಮುಖ್ಯವಾಗಿ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀ ಸುಧೀರ್ ಕುಮಾರ್, ಭಾ.ಆ.ಸೇ ಅವರು ತಮ್ಮ ವೈಯಕ್ತಿಕ ಪ್ರಭಾವದಿಂದ ಕಚೇರಿ ಕೆಲಸದೊಂದಿಗೆ ಈ ಹೆಚ್ಚುವರಿ ಕಾರ್ಯಕ್ಕಾಗಿ ನನಗೆ ಅವಶ್ಯಕವಾಗಿ ಬೇಕಾದ ವಾತಾವರಣವನ್ನು ನಿರ್ಮಿಸಿಕೊಟ್ಟಿರುತ್ತಾರೆ ಮತ್ತು ಅವರ ದೂರದೃಷ್ಟಿ, ಉದಾರತೆ ಅವರ ವೈಯಕ್ತಿಕ ಪರಿಶ್ರಮ, ಕಾರ್ಯವೈಖರಿಯು ನನಗೆ ದಾರಿ ದೀಪವಾಗಿದೆ ಎಂದು ಸಂತೋಷದಿಂದ ಹೇಳುತ್ತೇನೆ. ತಮ್ಮ ನಿತ್ಯ ಕೆಲಸದೊಂದಿಗೆ ದಿನವೂ ಹೆಚ್ಚುವರಿ ಸಮಯದಲ್ಲಿ ಈ ಲೇಖನವನ್ನು ಸಂತೋಷದಿಂದ ಬೆರಳಚ್ಚು ಮಾಡಿದ ಶ್ರೀ ವಸಂತ್ ಕುಮಾರ್, ಶೀಘ್ರಲಿಪಿಗಾರರು ಅವರಿಗೆ ಮತ್ತು ಲೇಖನದಲ್ಲಿ ಕಾಗುಣಿತಗಳನ್ನು ತಿದ್ದಲು ಮತ್ತು ಅಲ್ಪ ಸ್ವಲ್ಪ ಮಾರ್ಪಾಡು ಮಾಡಲು ಸಹಕರಿಸಿದ ಕರ್ನಾಟಕ ಭವನದ ಕಚೇರಿ ಅಧೀಕ್ಷಕರಾದ ಶ್ರೀ ಅಶೋಕ್ ಹೆಚ್. ಬದಾಮಿಯವರನ್ನು ನಾನು ಈ ಮೂಲಕ ಅಭಿನಂದಿಸುತ್ತೇನೆ.

ಕೊನೆಯದಾಗಿ ಈ ಕಿರು ಲೇಖನ ಓದಿದ ತರುವಾಯ ಇದರಲ್ಲಿ ಯಾವದೇ ಒಂದು ವಿಚಾರಕ್ಕೆ ತಮ್ಮ ಒಪ್ಪಿಗೆ ಇದೆ ಎಂದು ಅನಿಸಿದಲ್ಲಿ ಅದು ತಮ್ಮದೇ ಮೂಲ ವಿಚಾರವೆಂದು ಭಾವಿಸಿ ಅದನ್ನು ಸಮಾಜದಲ್ಲಿ ಅನುಷ್ಟಾನಗೊಳಿಸಲು ನಿಮ್ಮ ಕೈಲಾದ ಪ್ರಯತ್ನ ದಯವಿಟ್ಟು ಮಾಡಬೇಕೆಂದು ವಿನಂತಿಸುತ್ತೇನೆ.

ಒಂದು ಪಕ್ಷ ಇದರಲ್ಲಿಯ ಕೆಲವು ವಿಚಾರಗಳ ಬಗ್ಗೆ ನಿಮ್ಮಲ್ಲಿ ಬಿನ್ನಾಭಿಪ್ರಾಯವಿದ್ದಲ್ಲಿ ಅದನ್ನು ದಯವಿಟ್ಟು ನನ್ನ ಗಮನಕ್ಕೆ ತರಲು ವಿನಂತಿಸುತ್ತೇನೆ. ಮತ್ತು ನಿಮ್ಮ ಬಿನ್ನಾಭಿಪ್ರಾಯವು ನನ್ನ ತಿಳುವಳಿಕೆ ವೃದ್ಧಿಸಲು ಸಹಾಯಕವಾಗಲಿ ಎಂದು ಆಶೀಸುತ್ತೇನೆ.

**ಶಿ. ರಾ. ಗಾರವಾಡ**



GOVERNOR OF KARNATAKA
Raj Bhavan, Bangalore

July 26, 2006

**MESSAGE**

I am glad to know that a booklet regaridng development of scientific temper among the general public and some suggestions to reconize and promote local scientific talent at district and local self-Government level is being published by Shri. S.R. Garawada.

Scientific achievements at the local governmental level do not get noticed quickly where there is no State patronage at present. There are a large number of young students and others developing and innovating in the areas of farming techniques, seeds improvement and traditional knowledge in the health and hygiene and several other scientific activities everyday. The young minds deserve institutional support, recognition and promotion of their talent. Appropriate changes in the Eleventh and the Twelfth Schedules that are needed will, I hope, be brought about for the development of institutional mechanism in the hands of local self Governments ans Zilla Panchayats so as to obviate this long felt need at the local level.

The book which deals with all these aspects will attract the attention of book lovers to bring about constructive changes in the min set of people about local self government. I hope the book will be received by the discerning readers with due attention that it deserves. My best wishes for the success of the endeavour. ‘

[T.N. CHATURVEDI]



ಪ್ರಿಯ ಓದುಗರೆ,

"ಭಾರತದಲ್ಲಿ ಪ್ರಸ್ತುತ ವಿಜ್ಞಾನದ ಮೀಮಾಂಸೆ" ಎಂಬ ಈ ಕಿರುಹೊತ್ತಿಗೆ ಬಿಡುಗಡೆಯಾಗುತ್ತಿರುವುದು ಹೆಮ್ಮೆ ಪಡುವ ವಿಷಯವಾಗಿದೆ. ಭಾರತದ ಸಂವಿಧಾನದಲ್ಲಿ ಪ್ರತಿಯೊಬ್ಬ ಪ್ರಜೆಯು ಸ್ವತಂತ್ರವಾಗಿ ತನ್ನ ಪ್ರತಿಭೆಯನ್ನು ಸಮಾಜಕ್ಕೆ ನೀಡಲು ಸಂವಿಧಾನದ ಕರ್ತೃಗಳು ಅವಕಾಶ ಮಾಡಿಕೊಟ್ಟಿದ್ದಾರೆ. ಆದರೂ ಭಾರತದಲ್ಲಿ ವಿಜ್ಞಾನವು ಏಕೆ ಇಚ್ಛಿತ ಗುರಿ ತಲುಪಲಿಲ್ಲ? ಈ ಪುಸ್ತಕದಲ್ಲಿಅತೀ ಸೂಕ್ಷ್ಮವಾಗಿ ಈ ವಿಚಾರವನ್ನು ಅಧ್ಯಯನ ಮಾಡಿ ಜಿಲ್ಲಾ ಮತ್ತು ಸ್ಥಳೀಯ ಸರಕಾರದ ಮಟ್ಟದಲ್ಲಿ ಕೈಗೊಳ್ಳಬೇಕಾದ ಕ್ರಮಗಳನ್ನು ಲೇಖಕರು ವಿವರಿಸಿರುತ್ತಾರೆ. ನಮ್ಮಲ್ಲಿ ವಿಜ್ಞಾನದ ಪ್ರಗತಿಯಾಗಬೇಕಾದರೆ ಪ್ರತಿಭೆಗಳು ಎಲ್ಲೇ ಇದ್ದರೂ ಗುರುತಿಸಿ ಪ್ರೋತ್ಸಾಹಿಸುವುದು ಅವಶ್ಯಕವಾಗಿದೆ.

ಈ ದಿಶೆಯಲ್ಲಿ ಲೇಖಕರು ವಿಮಾನ ಸಂಶೋಧಕರಾದ ರೈಟ್ ಸಹೋದರರು, ಡೈನಾಮೆಟ್ ಸಂಶೋಧಿಸಿದ ನೋಬೆಲ್ ಇವರ ಉದಾಹರಣೆ ನೀಡಿರುತ್ತಾರೆ. ಅದೇ ಪ್ರಕಾರ ಥಾಮಸ್ ಎಡಿಸನ್ ಅವರೂ ಕೂಡಾ ಕ್ರಮಬದ್ಧವಾಗಿ ಶಿಕ್ಷಣ ಪಡೆದಿರಲಿಲ್ಲ. ಭಾರತದಲ್ಲಿ ಇರುವ ಪ್ರತಿಭೆಯನ್ನು ಆಧುನಿಕ ಜಗತ್ತಿಗೆ ಪರಿಚಯಿಸುವ ಮಾರ್ಗೋಪಾಯಗಳನ್ನು ಶ್ರೀ. ಶಿ. ರಾ. ಗಾರವಾಡ ಅವರು ಉಲ್ಲೇಖಿಸಿರುತ್ತಾರೆ. ವಿದ್ಯುತ್ ಕಂಡು ಹಿಡಿದ ವಿಜ್ಞಾನಿ ಶ್ರೀ ನಿಕೊಲಾ ಟೆಸ್ಲಾಗೆ ಸಮಾಜ ನೀಡಿದ ಪ್ರೋತ್ಸಾಹ ಉಲ್ಲೇಖಾರ್ಹವಾಗಿದೆ. ನಮ್ಮ ದೇಶದ ಶಿಕ್ಷಣ ತಜ್ಞರು, ವಿಜ್ಞಾನಿಗಳು, ಆಡಳಿತಗಾರರು ಇವರೆಲ್ಲರೂ ಈ ವಿಷಯಗಳನ್ನು ಗಂಭೀರವಾಗಿ ಚರ್ಚಿಸಿ ಇದಕ್ಕೆ ಒಂದು ಹೊಸ ರೂಪ ನೀಡಿದಲ್ಲಿದೇಶದ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕಬಹುದಾಗಿದೆ ಎಂದು ನನ್ನ ಅನಿಸಿಕೆಯಾಗಿದೆ.

ಶ್ರೀ. ಎಸ್. ಆರ್. ಗಾರವಾಡ್, ಉಪ ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ ಇವರು ಭಾರತದಲ್ಲಿ ವಿಜ್ಞಾನದ ಪ್ರಗತಿಯ ಬಗ್ಗೆ ವೈಯಕ್ತಿಕ ಕಳಕಳಿಯಿಂದ ದೇಶಕ್ಕೆ ಉಪಯುಕ್ತವಾಗುವಂತಹ ಆಡಳಿತ ನೀತಿಯನ್ನು ಪ್ರತಿಪಾದಿಸಿರುತ್ತಾರೆ, ಅವರ ಈ ಪ್ರಯತ್ನ ಅಭಿನಂದನಾರ್ಹ.

ಶುಭ ಹಾರೈಕೆಗಳೊಂದಿಗೆ,

(ಆಸ್ಕರ್ ಫರ್ನಾಂಡಿಸ್)

ಪರಿವಿಡಿ

## ಭಾರತದಲ್ಲಿ ವಿಜ್ಞಾನ ಪ್ರಗತಿಗೆ ಅಡೆತಡೆಗಳು ಮತ್ತು ಪರಿಹಾರಗಳು


* ಮೊದಲ ಮಾತು.
* ರಾಜ್ಯಪಾಲರ ಸಂದೇಶ
* ಕೇಂದ್ರ ಸಚಿವರ ನುಡಿ

| **ಅಧ್ಯಾಯ** | | **ಪುಟ ಸಂಖ್ಯೆ** |
|---|---|---|
| 1 | **ಭಾರತದಲ್ಲಿ ವಿಜ್ಞಾನದ ಪ್ರಗತಿಗೆ ಅಡೆತಡೆಗಳು ಮತ್ತು ಪರಿಹಾರಗಳು.** | [1-4] |
| I | **ಧಾರ್ಮಿಕ ಕಾರಣಗಳು** | |
| i. | ಜಗದ್ಗುರು ಶ್ರೀ ಶಂಕರಾಚಾರ್ಯರು. | 1 |
| ii. | ಅರಿಸ್ಟಾಟಲ್‌ನ ವಿಚಾರ ಮತ್ತು ಬೆನ್ ಹುಕ್. | 1-2 |
| iii. | ವಿಜ್ಞಾನದಲ್ಲಿ ಶ್ರೀಸಾಮಾನ್ಯರ ಆಸಕ್ತಿಯ ಅವಶ್ಯಕತೆ. | 2 |
| II. | **ಐತಿಹಾಸಿಕ ಕಾರಣಗಳು ::** | |
| i. | ವಿದೇಶಿ ದಾಳಿಗಳು ಮತ್ತು ಮಧ್ಯ ಕಾಲೀನ ಪರಾಧೀನತೆ. | 3 |
| ii. | ಬ್ರಿಟೀಷರ ಸಹಾಯಕ ಸೈನ್ಯ ಪದ್ಧತಿ ಒಪ್ಪಂದಗಳು. | 3 |
| iii. | ಸಂವಿಧಾನ ಕರ್ತೃಗಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿಯ ಕೊರತೆ. | 4 |
| 2. | **ವಿಶ್ವವಿದ್ಯಾಲಯಗಳ ಸಮಸ್ಯೆ ::** | [5-9 ] |
| i | ಶ್ರೀ ಹಾ.ಮಾ. ನಾಯಕ್ ಅವರ ಅರಣ್ಯ ರೋಧನ. | 5 |
| ii | ಶ್ರೀ ಪಾಟೀಲ್ ಪುಟ್ಟಪ್ಪನವರ ಅನುಭವ. | 5 |
| iii | ಎರಡು ಬ್ಯಾಂಡ್ ರೇಡಿಯೋ ಅನುಭವ. | 6 |
| iv | ಶಾಲಾ ಕಾಲೇಜುಗಳಲ್ಲಿ ಹೆಚ್ಚು ಅಂಕ ಗಳಿಸುವ ರಹಸ್ಯ. | 6 |
| v | ಚೀನಾ ದೇಶದಲ್ಲಿ ರೈತನೇ ಶಿಕ್ಷಕ. | 7 |
| vi | ಜಪಾನಿನಲ್ಲಿ ಹಿರಿಯ ಕಾರ್ಮಿಕನೇ ಶಿಕ್ಷಕ. | 7 |
| vii | ವಿದೇಶದಲ್ಲಿ ಪಿ.ಎಚ್.ಡಿ. ಮಾಡುವುದು | 7-8 |
| viii | ಭಾರತೀಯ ಪಿ.ಎಚ್.ಡಿಗಳು | 8-9 |
| 3 | **ರಾಜಕೀಯ ಮತ್ತು ಸಾಮಾಜಿಕ ಕಾರಣಗಳು ::** | [10-14] |
| [i] | ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಅವರಿಂದ ವಿಜ್ಞಾನ ಪ್ರಗತಿಯ ಸಂಕಲ್ಪ ಸಂವಿಧಾನದ ವಿಧಿ ೫೧ ಏ [ಹೆಚ್]. | 10 |
| [ii] | ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿಜ್ಞಾನ ಮಂಡಳಿಗಳ ಅಸಹಾಯಕತೆ. | 10-12 |
| [iii] | ಆದರ್ಶ ವಿಜ್ಞಾನಿ – ನಿಕೋಲಾ ಟೆಸ್ಲಾ | 12-14 |
| [iv] | ಪ್ರಾಯೋಗಾಲಯ V/S ದೇವಸ್ಥಾನ ನಿರ್ಮಾಣ, ಹೋಲಿಕೆ. | 14 |
| [v] | ಹಣ, ಹಣ, ಹಣ ಎಲ್ಲಿದೆ? | 14 |

| | | | |
|---|---|---|---|
| 4 | | **ಸ್ಥಳೀಯ ವಿಜ್ಞಾನವನ್ನು ಮತ್ತು ವಿಜ್ಞಾನಿಗಳನ್ನು ಗುರುತಿಸುವುದು ಮತ್ತು ಪ್ರೋತ್ಸಾಹಿಸುವುದು ಹೇಗೆ?** | [15-24] |
| | i | ಡಾ: ಶ್ರೀಮತಿ ಪುಷ್ಪಾ ಜೋಷಿ ಅವರ ಅನುಭವ | 15-16 |
| | ii | ವೈದ್ಯರ ವೃತ್ತಿ ದೋಷ ಮತ್ತು ನಿವಾರಣೆ | 16-18 |
| | iii | ವಂಶಪಾರಂಪಾರಿಕ ವೈದ್ಯರಿಗೆ ಪ್ರೋತ್ಸಾಹಗಳು | 18-19 |
| | iv | ವೈದ್ಯಕೀಯೇತರ ಸ್ಥಳೀಯ ವಿಜ್ಞಾನಿಗಳನ್ನು ಗುರುತಿಸುವುದು | 19-22 |
| | v | ಆರ್ಥಿಕೇತರ ಪ್ರೋತ್ಸಾಹಗಳು | 22-24 |
| 5 | | **ಪ್ರಾರಂಭದಲ್ಲಿ ಜಿಲ್ಲಾ ಪಂಚಾಯ್ತಿ/ತಾಲ್ಲೂಕು ಪಂಚಾಯ್ತಿ ಮತ್ತು ಸ್ಥಳಿಯ ಸರ್ಕಾರಗಳು ಕೈಗೊಳ್ಳಬೇಕಾದ ಕ್ರಮಗಳು :** | 25 |
| 6 | i | **ಪ್ರಚಾರ ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ನ್ಯಾಯೋಚಿತ ಸಲಹೆಗಳು :** | [26-28] |
| | | ಆಹಾರ ಪದ್ದತಿ ಮತ್ತು ಜೀವನ ಪದ್ದತಿ ಬಗ್ಗೆ | 26 |
| | ii | ವೈಜ್ಞಾನಿಕ ಸಂಪ್ರದಾಯಗಳಿಗೆ ಮನ್ನಣೆ | 27-28 |
| 7 | | **ಕೆಲವು ಉತ್ಪ್ರೇಕ್ಷಿತ ವರದಿಗಳ ಬಗ್ಗೆ ಅಧಿಕೃತ ನಿರ್ಣಯಗಳು :** | [29-30] |
| | i | ಈ ಟಿವಿ ಧಾರಾವಾಹಿ – ಭಾನಾಮತಿ | 29 |
| | ii | ಕೆಲವು ಉತ್ಪ್ರೇಕ್ಷಿತ ವರದಿಗಳು | 30 |
| | iii | ಅಸಂಬದ್ದ ವೈಜ್ಞಾನಿಕ ವರದಿಗಳು | 30 |
| 8 | | **ಸಧ್ಯಕ್ಕೆ ಸರಕಾರ ಘೋಷಣೆ ಮಾಡಬಹುದಾದ ಬಹುಮಾನ ಯೋಜನೆಗಳು** | 31 |
| 9 | | **ವಿಷಾದಕರ ಇತಿಹಾಸ** | [32-35] |
| | i | ಟೈಪರೇಟರ್ ಸುಧಾರಣೆ. | 32 |
| | ii | ಭಾರತದಲ್ಲಿ ಬಂದೂಕು ತಯಾರಿಕೆ ಖಾಸಗೀಕರಣ. | 32 |
| | iii | ಉತ್ತರ ಪ್ರದೇಶದ ಟ್ರಾಕ್ಟರ್ ಮಾದರಿ | 33 |
| | iv | ನೋಬೆಲ್ ಬಹುಮಾನದ ಒಂದು ವಿಚಾರ. | 34 |
| | v | ವೈಮಾನಿಕ ಸಂಶೋಧನೆ ಮತ್ತು ಇಂದಿನ ಸ್ಥಿತಿ. | 34-35 |
| 10 | | **ಮನಕುಲದ ಸಂಶೋಧನೆಯ ಮಹತ್ವದ ಹಂತಗಳು** | [36-37] |
| 11 | | **ಎನ್.ಐ.ಎಫ್ ರಾಷ್ಟ್ರೀಯ ಅನುಸಂಧಾನ ಸಂಸ್ಥೆ.** | 38 |
| 12 | | **ಲಂಡನ್ನಿನ ರಾಯಲ್ ಸೊಸೈಟಿ. [ಚಾರ್ಟರ್ ಆಫ್ ರಾಯಲ್ ಸೊಸೈಟಿ]** | 39-40 |
| 13 | | ಅ] ಉದ್ದೇಶಿತ ತಾಲ್ಲೂಕು/ಜಿಲ್ಲಾ ಮಟ್ಟದ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್‌ನ ರೂಪುರೇಷೆಗಳು.<br>ಆ] ಕೊನೆಯ ಮಾತು.<br>ಇ] ಹೆಚ್ಚುವರಿ ಟಿಪ್ಪಣಿ–। | 41-42 |
| 14 | | **ಅನುಬಂಧಗಳು [೧ ರಿಂದ ೧೧ ರವರೆಗೆ] ಭಾಗ–೨ರಲ್ಲಿ ನೋಡಿರಿ** | |

# ಅಧ್ಯಾಯ–೧: ಭಾರತದಲ್ಲಿ ವಿಜ್ಞಾನದ ಪ್ರಗತಿಗೆ ಅಡೆತಡೆಗಳು ಮತ್ತು ಪರಿಹಾರಗಳು:

ಭಾರತ ದೇಶವು ಅತೀ ಪ್ರಾಚೀನ ದೇಶಗಳಲ್ಲಿ ಒಂದು. ಇದಕ್ಕೆ ಭವ್ಯ ಇತಿಹಾಸವಿದೆ. ಭಾರತವು ವರಾಹಮಿಹೀರ, ಆರ್ಯಭಟ, ಚರಕ, ಶುಶ್ರುತ ಎಂಬ ಮಹಾನ್ ವಿಜ್ಞಾನಿಗಳನ್ನು ಹೊಂದಿತ್ತು ಎಂದು ಹೇಳಲಾಗಿದೆ. ಆದರೆ ಇಂದು ಭಾರತವು ವಿಜ್ಞಾನ ಜಗತ್ತಿನಲ್ಲಿ ೪ ಅಥವಾ ೫ನೇ ಸ್ಥಾನ ಅಥವಾ ಅದಕ್ಕೂ ಕೆಳಗಿನ ಸ್ಥಾನದಲ್ಲಿದೆ ಎಂದು ಒಪ್ಪಿಕೊಳ್ಳಬೇಕಾಗಿದೆ ಇದು ಹೀಗೇಕೆ? ಇದಕ್ಕೆ ಧಾರ್ಮಿಕ, ಐತಿಹಾಸಿಕ ಮತ್ತು ರಾಜಕೀಯ ಕಾರಣಗಳು ಇರುತ್ತವೆ.

**<u>ಧಾರ್ಮಿಕ ಕಾರಣಗಳು</u>:**

### [i] ಜಗದ್ಗುರು ಶ್ರೀ ಶಂಕರಾಚಾರ್ಯರು ::

ಕ್ರಿ.ಶ. ೭೦೦ ಸುಮಾರಿಗೆ ಆಗಮಿಸಿದ ಶ್ರೀ ಶಂಕರಾಚಾರ್ಯರು "ಜಗತ್ತು ಮಿತ್ಯ ಬ್ರಹ್ಮ ಸತ್ಯ" ಎಂದು ಭೋಧಿಸಿದರು. ಇತ್ತೀಚಿನ ದಾಸರು "ಅಲ್ಲಿ ಇರುವುದು ನಮ್ಮ ಮನೆ ನಾವು ಇಲ್ಲಿರುವುದು ಸುಮ್ಮನೆ" ಎಂದು ಹಾಡಿದರು ಅಂದರೆ ಜೀವನಕ್ಕೆ ಹೆಚ್ಚಿನ ಬೆಲೆ ಇಲ್ಲ ಹುಟ್ಟಿದ ಮೇಲೆ ಸುಖವಾಗಿ ಸಾಯುವ ಮಾರ್ಗ ಜನರು ತಿಳಿದುಕೊಂಡರೆ ಸಾಕು ಎಂಬ ಉದಾಸೀನತೆಯ ನಮ್ಮ ಧಾರ್ಮಿಕತೆಯ ಜೀವಾಳವಾಗಿದೆ. ಸುಮಾರು ೧೦೦೦ ನೇ ಸಾಲಿನಲ್ಲಿ ಭಾರತಕ್ಕೆ ಆಗಮಿಸಿದ ಇಸ್ಲಾಂ ಧರ್ಮವೂ ಕೂಡಾ ಕಟ್ಟು ಪಾಡಿನಿಂದ ಕೂಡಿದ ಧರ್ಮವಾಗಿದೆ. ಇಂದಿಗೂ ಸೌಧಿ ಅರೇಬಿಯಾ ದೇಶಗಳು ಇಂಧನ ಮಾರಾಟದಿಂದ ಶ್ರೀಮಂತರಾಗಿವೆಯೇ ಹೊರತು ವೈಜ್ಞಾನಿಕವಾಗಿ ಮುಂದುವರೆದಿಲ್ಲ, ಎಂಬುದನ್ನು ಮನಗಾಣಬೇಕಾಗಿದೆ. ಅದೇ ಪ್ರಕಾರ ೧೭ನೇ ಶತಮಾನದಲ್ಲಿ ಆಗಮಿಸಿದ ಯುರೋಪಿಯನ್ನರು ಕೂಡಾ ಮೂಲತ: ಸಂಪ್ರದಾಯವಾದಿಗಳೇ ಆಗಿದ್ದರು ಇದಕ್ಕೆ ಗೆಲಿಲಿಯೋನಿಗೆ ವಿಧಿಸಿದ ಶಿಕ್ಷೆ ಒಂದು ಉತ್ತಮ ಉದಾಹರಣೆಯಾಗಿರುತ್ತದೆ. ಒಟ್ಟಿನಲ್ಲಿ ಎಲ್ಲ ಧರ್ಮಗಳು ವಿಜ್ಞಾನದ ಬೆಳವಣಿಗೆಗಳಿಗೆ ಪ್ರತಿಕೂಲವಾಗಿವೆ ಎಂದು ಹೇಳಬಹುದು. ಗೆಲಿಲಿಯೋನ ನಂತರ ಯೂರೋಪಿನಲ್ಲಿ ಬದಲಾವಣೆಯ ಗಾಳಿ ತೀವ್ರವಾಗಿ ಬೀಸಿತು.

### [ii] ಅರಿಸ್ಟಾಟಲ್‌ನ ವಿಚಾರ ಮತ್ತು ಬೆನ್‌ಹುಕ್:

ಯುರೋಪಿನ ನವೋದಯ ಕಾಲದ ಮೊದಲು ಅರಿಸ್ಟಾಟಲ್ ತನ್ನ ಗ್ರಂಥದಲ್ಲಿ ಮಹಿಳೆಯರಿಗೆ ಕಡಿಮೆ ಹಲ್ಲುಗಳು ಇರುತ್ತವೆ ಪುರುಷರಿಗೆ ಹೆಚ್ಚಿಗೆ ಹಲ್ಲುಗಳು ಇರುತ್ತವೆ ಎಂದು ತಿಳಿಸಿದ್ದನು ಎಲ್ಲರೂ ನಂಬಿದ್ದರು. ಯಾಕೇ? ಏಕೆಂದರೆ ಮಹಿಳೆಯರ ಬುದ್ದಿಶಕ್ತಿ ಕಡಿಮೆ, ಪುರುಷರ ಬುದ್ದಿಶಕ್ತಿ ಹೆಚ್ಚು ಅದಕ್ಕಾಗಿ ಪುರುಷರಲ್ಲಿ ಮಹಿಳೆಯರಿಗಿಂತ ಹೆಚ್ಚು ಹಲ್ಲುಗಳು ಇರುತ್ತವೆ ಎಂಬುದು ಅರಿಸ್ಟಾಟಲ್‌ನ ಸಿದ್ದಾಂತವಾಗಿತ್ತು. ಆದರೆ ಬೆನ್ ಹುಕ್ ಎಂಬ ಒಬ್ಬ ಸಾಮಾನ್ಯನು ಅರಿಸ್ಟಾಟಲ್ ಗ್ರಂಥವನ್ನು ಓದಿದ ಮೇಲೆ ಅರಿಸ್ಟಾಟಲ್‌ನ ಹೇಳಿಕೆಯ ಬಗ್ಗೆ ಸಂಶಯಗೊಂಡನು ಮತ್ತು ತನ್ನ ಮನೆಯಲ್ಲಿ ಇರುವ ಹೆಣ್ಣು ಮಕ್ಕಳ ಹಲ್ಲುಗಳನ್ನು ಎಣಿಸಿದನು ಅವನಿಗೆ ಆಶ್ಚರ್ಯ ಎನ್ನುವ ರೀತಿಯಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಹಲ್ಲುಗಳ ಸಂಖ್ಯೆಯಲ್ಲಿ

ವ್ಯತ್ಯಾಸವಿಲ್ಲದಿರುವುದನ್ನು ಕಂಡುಕೊಂಡನು ಮತ್ತು ಇದನ್ನು ಇತರರಿಗೆ ತಿಳಿಸಿದನು (ಬಾಲ ವಿಶ್ವಕೋಶದಿಂದ) ಇದನ್ನು ತಿಳಿದ ಜನರು ಅಚ್ಚರಿಗೊಂಡರು ನಂತರ ಎಲ್ಲರೂ ತಮ್ಮ ತಮ್ಮ ಮನೆಯಲ್ಲಿಯ ಹೆಣ್ಣು ಮಕ್ಕಳ ಹಲ್ಲುಗಳನ್ನು ಮತ್ತು ತಮ್ಮ ಹಲ್ಲುಗಳನ್ನು ಎಣಿಸಿ ನೋಡಿ ಅವುಗಳಲ್ಲಿ ವ್ಯತ್ಯಾಸವಿಲ್ಲವೆನ್ನುವುದನ್ನು ಕಂಡುಕೊಂಡರು. ನಂತರ ಅರಿಸ್ಟಾಟಲ್ ಮೇಲೆ ಸಂಶಯ ಬಂದು ಅವನ ಸಿದ್ಧಾಂತಗಳಲ್ಲಿ ಎಷ್ಟು ಸರಿ ಎಷ್ಟು ತಪ್ಪು ಎಂಬುದನ್ನು ಅರಿತುಕೊಳ್ಳಲು ಪ್ರಯೋಗಗಳನ್ನು ಮಾಡಿದರು ಇದರಿಂದ ಯೂರೋಪಿನಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯಲು ಕಾರಣವಾಯಿತು. ಆದರೆ ಭಾರತದಲ್ಲಿ ಇಂದು ಅಂತಹ ಅಲೇ ಸೃಷ್ಟಿಯಾಗಲು ಸಾಧ್ಯವಾಗಿಲ್ಲ. ಕನಿಷ್ಟ ಪಕ್ಷ ಈಗಲಾದರೂ ಇಂತಹ ಬದಲಾವಣೆ ನಡೆಯಬೇಕಾಗಿದೆ. ಸಾಮಾನ್ಯ ಜನರಲ್ಲಿ ವೈಜ್ಞಾನಿಕ ಮನೋಭಾವನೆ ಮೂಡಿಬರಬೇಕಾಗಿದೆ. ಅದಕ್ಕಾಗಿ ಪೂರಕ ವಾತಾವರಣ ನಮ್ಮ ಆಡಳಿತಗಾರರು ಸೃಷ್ಟಿ ಮಾಡಬೇಕಾಗಿದೆ.

### [iii] ವಿಜ್ಞಾನದಲ್ಲಿ ಶ್ರೀಸಾಮಾನ್ಯರ ಆಸಕ್ತಿಯ ಅವಶ್ಯಕತೆ:

ಒಂದು ದೇಶದಲ್ಲಿ ಒಂದು ವಿಷಯದಲ್ಲಿ ವಿಜ್ಞಾನ ಬೆಳೆಯಬೇಕಾದರೆ ಶ್ರೀ ಸಾಮಾನ್ಯನು ಅದರಲ್ಲಿ ಆಸಕ್ತಿ ವಹಿಸಬೇಕು ಮತ್ತು ಅವನು ಅದನ್ನು ತನಗೆ ತಿಳಿದಂತೆ ಪ್ರಶ್ನೆ ಮಾಡಬೇಕು. ಹೀಗೆ ಅಸಂಭದ್ದ ಸುಸಂಬದ್ದ ಪ್ರಶ್ನೆಗಳನ್ನು ಮಾಡುತ್ತಿದ್ದರೆ ಮಾತ್ರ ವಿಜ್ಞಾನ ಪ್ರಗತಿಯಾಗುತ್ತದೆ.

**ಉದಾಹರಣೆಗೆ:** ಆಲ್ಬರ್ಟ್ ಐನ್ ಸ್ಟೈನ್ ಅವರು ಸಾಪೇಕ್ಷ ಸಿದ್ದಾಂತವನ್ನು ಪ್ರಕಟಗೊಳಿಸಿದ ಬಳಿಕ ಅದನ್ನು ಅರ್ಥಮಾಡಿಕೊಳ್ಳಲು ಬಹಳ ಜನರು ಪ್ರಯತ್ನಿಸಿದರು. ಅದನ್ನು ತಿಳಿದುಕೊಳ್ಳಲು ಅಂದಿನ ಒಬ್ಬ ಸಿನಿಮಾ ನಟೀ ಕೂಡಾ ಪ್ರಯತ್ನಿಸಿದಳು ಅವಳು ನೇರವಾಗಿ ಐನ್‌ಸ್ಟೈನ್ ಅವರನ್ನು ಕಂಡು "ಸಾಪೇಕ್ಷ ಸಿದ್ಧಾಂತ"ವೆಂದರೆ ಏನು? ತನಗೆ ತಿಳಿಯದು ಎಂದಳು ಅದಕ್ಕೆ ಐನ್‌ಸ್ಟೈನ್ ಅವರು ಬೇಸಿಗೆಯ ಮದ್ಯಾಹ್ನದ ಉರಿ ಬಿಸಿಲಿನಲ್ಲಿ ಅಡುಗೆ ಮನೆಯಲ್ಲಿ ಕುರೂಪಿಯಾದ ಮತ್ತು ನನಗೆ ಬೇಡವಾದ ಒಬ್ಬ ಸ್ತ್ರೀಯೊಡನೆ ೫ ನಿಮಿಷ ಸಂಭಾಷಣೆ ಮಾಡಿದಾಗ ನಾನು ಅವಳೊಂದಿಗೆ ಗಂಟೆಗಟ್ಟಲೇ ಸಂಭಾಷಣೆ ಮಾಡಿದಂತೆ ಭಾಸವಾಗುತ್ತದೆ. ಆದರೆ, ನಿನ್ನಂತಹ ಸುಂದರಿಯೊಡನೆ ಚಳಿಗಾಲದಲ್ಲಿ ಬೆಚ್ಚನೆಯ ಮನೆಯಲ್ಲಿ ಆರಾಮವಾಗಿ ಬೆಳಗಿನಿಂದ ಸಾಯಂಕಾಲದವರೆಗೂ ಸಂಗೀತ / ಸಂಭಾಷಣೆ ಮಾಡಿದಾಗ ಅದು ಕೆಲವೇ ನಿಮಿಷ ನಿನ್ನೊಂದಿಗೆ ಸಂಭಾಷಣೆ ಮಾಡಿದಂತೆ ಆನಿಸುತ್ತದೆ. ಹೀಗೆ ಮನಸ್ಸಿಗೆ ಅನಿಸುವುದೇ ಸಾಪೇಕ್ಷ ಸಿದ್ಧಾಂತವೆಂದು ತಿಳಿಸಿದರು ಎಂದು ಹೇಳಲಾಗುತ್ತಿದೆ.

(II) **ಐತಿಹಾಸಿಕ ಕಾರಣಗಳು:**

[i] ವಿದೇಶಿ ದಾಳಿಗಳು ಮತ್ತು ಮಧ್ಯಕಾಲೀನ ಪರಾಧೀನತೆ:

ಭಾರತವನ್ನು ದಾಳಿಕೋರರ ದೇಶವೆಂದು ಕರೆಯಲಾಗುತ್ತಿದೆ. ಸುಮಾರು ೧೦೦೦ ವರ್ಷಗಳಿಂದಲೂ ಭಾರತವು ವಿದೇಶಿ ಮೂಲದ ರಾಜರ ಆಳ್ವಿಕೆಗೆ ಒಳಪಟ್ಟಿರುತ್ತದೆ. ಈ ಅವದಿಯಲ್ಲಿ ಅಕ್ಬರ್ ನಂತಹ ಕೆಲವು ರಾಜರನ್ನು ಹೊರತುಪಡಿಸಿದರೆ ಕಲ್ಯಾಣ ರಾಜ್ಯದ ಪರಿಕಲ್ಪನೆ ಹೊಂದಿದ ರಾಜರು ವಿರಳ ಈ ವಿದೇಶಿ ರಾಜರು ವಿಜ್ಞಾನದ ಬೆಳವಣಿಗೆಗೆ ಸಂಭಂಧಿಸಿದಂತೆ ತಮ್ಮ ಮೂಲ ದೇಶದಲ್ಲಿರುವ ವಿಜ್ಞಾನಿಗಳಿಗೆ ಪ್ರೋತ್ಸಾಹ ನೀಡಿದರೆ ಹೊರತು ಸ್ಥಳೀಯರನ್ನು ಗುರುತಿಸಿ ಅವರ ವೈಜ್ಞಾನಿಕ ಪ್ರತಿಭೆಗೆ ಪುರಸ್ಕಾರ ನೀಡಲಿಲ್ಲ. ಮದ್ಯಕಾಲೀನ ಇತಿಹಾಸದ ಅವಧಿಯಲ್ಲಿ ನಿರ್ಮಿತವಾದ ಎಲ್ಲ ಕಟ್ಟಡಗಳು ರೋಮನ್ ಮಾದರಿಯ ಗುಮ್ಮಟದ ಕಟ್ಟಡಗಳೇ ಆಗಿವೆ. ಉದಾಹರಣೆ ಬಿಜಾಪುರದ ಗೋಳಗುಮ್ಮಟ ಇತ್ಯಾದಿ. ಔರಂಗಜೇಬನ ನಂತರ ರಾಜಸ್ಥಾನದ ಕೆಲವು ರಾಜರು ಖಗೋಳ ವಿಜ್ಞಾನಕ್ಕೆ ಸಂಭಂಧಿಸಿದಂತೆ ಕೆಲವು ಸಂಶೋಧನೆ ಮಾಡಲು ಸಹಾಯ ನೀಡಿದರು ಅವುಗಳನ್ನು ಜೈಪುರ ಮತ್ತು ದೆಹಲಿ ಜಂತರ್-ಮಂತರ್‌ದಲ್ಲಿ ನೋಡಬಹುದು ಇದನ್ನು ಹೊರತುಪಡಿಸಿದರೆ ಭಾರತೀಯ ರಾಜರಲ್ಲಿ ಸಂಶೋಧನೆಗೆ ಮಹತ್ವ ನೀಡಿದವರಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನ. ಇವರು ರಕ್ಷಣೆಗೆ ಸಂಬಂಧಿಸಿದಂತೆ ಫ್ರೆಂಚರ ಸಹಾಯದಿಂದ ದಿಂಡಿಗಲ್‌ದಲ್ಲಿ ಆಧುನಿಕ ಬಂದೂಕು ಮತ್ತು ಮದ್ದು ಗುಂಡುಗಳನ್ನು ತಯಾರಿಸಲು ಪ್ರಯತ್ನಿಸಿದರು ಆದರೆ ಅದೂ ಕೂಡಾ ಫಲಕಾರಿಯಾಗಲಿಲ್ಲ. ಮರಾಠರು ಮಾತ್ರ ಈ ಕೆಲಸ ಕೊನೆಯವರೆಗೂ ಮಾಡಲಿಲ್ಲ ವಿದೇಶದಿಂದಲೇ ಅಸ್ತ್ರ, ಶಸ್ತ್ರಗಳನ್ನು ಖರೀದಿಸಿದರು.

[ii] ಬ್ರಿಟೀಷರ ಸಹಾಯಕ ಸೈನ್ಯ ಪದ್ದತಿ ಒಪ್ಪಂದಗಳು :

ನಂತರ ಆಗಮಿಸಿದ ಬ್ರಿಟೀಷರು ಧರ್ಮದ ವಿಷಯದಲ್ಲಿ ತಟಸ್ತರಾಗಿದ್ದರೆ ಹೊರತು ಉದ್ದೇಶಪೂರ್ವಕವಾಗಿ ಭಾರತದಲ್ಲಿ ವಿಜ್ಞಾನವು ಬೆಳೆಯದಂತೆ ನೋಡಿಕೊಂಡರು. ಶೀತಲ ದೇಶಕ್ಕೆ ಸೂಕ್ತವಾದ ಅಲೋಪತಿ ವೈದ್ಯ ಪದ್ದತಿಯೇ ಅತೀ ಉತ್ತಮವಾದ ಪದ್ದತಿ ಎನ್ನುವದನ್ನು ಜನರ ಮನಸ್ಸಿನಲ್ಲಿ ಬಿಂಬಿಸಿದರು ಮತ್ತು ಭಾರತೀಯ ವೈದ್ಯ ಪದ್ದತಿ, ಭಾರತೀಯ ಸಂಸ್ಕೃತಿ ವಿಚಾರಧಾರೆಗಳೆಲ್ಲವೂ ಕೆಳಮಟ್ಟದವು ಎಂದು ಬಿಂಬಿಸುವಲ್ಲಿ ಸಫಲರಾದರು ಹೀಗಾಗಿ ನಾವು ಇಂದಿಗೂ ಕೂಡಾ ಮಾನಸಿಕವಾಗಿ ಅವರ ಗುಲಾಮರಾಗಿದ್ದೇವೆ ಯಾವುದೇ ಯೋಜನೆ ರೂಪಿಸುವಾಗ ಚಿಂತಿಸುವಾಗ ಇಂಗ್ಲೆಂಡ್‌ನಲ್ಲಿ ಈ ಬಗ್ಗೆ ಯಾವ ರೀತಿ ಮಾಡಲಾಗಿದೆ ಎಂದು ಚಿಂತನ ಮಾಡುವುದು ನಮ್ಮ ಬುದ್ಧಿಜೀವಿಗಳ ಧುರ್ಬಲತೆಯಾಗಿರುತ್ತದೆ.

ಭಾರತವು ವಿಜ್ಞಾನ ತಂತ್ರಜ್ಞಾನದಲ್ಲಿ ಹಿಂದುಳಿಯಲು ಬ್ರಿಟೀಷರು ಭಾರತೀಯ ರಾಜರೊಂದಿಗೆ ಮಾಡಿಕೊಂಡ ಒಂದು ಐತಿಹಾಸಿಕ ಒಪ್ಪಂದವೇ ಕಾರಣವಾಗಿದೆ ಎಂದು ನಾನು ಭಾವಿಸುತ್ತೇನೆ. ಇತಿಹಾಸದಲ್ಲಿ ಅದಕ್ಕೆ ಸಹಾಯಕ ಸೈನಿಕ ಒಪ್ಪಂದ (subsidiary alliance) ಎಂದು ಕರೆಯಲಾಗಿದೆ. ಈ ಒಪ್ಪಂದದ ಪ್ರಕಾರ ಭಾರತದ ರಾಜರು [ಮೈಸೂರು ಮಹಾರಾಜರು ಸೇರಿದಂತೆ ಎಲ್ಲರೂ] ಬ್ರಿಟೀಷರ ಕೈಗೊಂಬೆ ರಾಜರಾದರು ಈ ಒಪ್ಪಂದದ ಕರಾರುಗಳು ಈ

ಪ್ರಕಾರವಾಗಿದ್ದವು (೧) ಸ್ಥಳೀಯ ರಾಜರು ತಮ್ಮ ದೇಶ ರಕ್ಷಣೆಗಾಗಿ ತಮ್ಮದೇ ಆದ ಸೈನ್ಯವನ್ನು ಇಟ್ಟುಕೊಳ್ಳಬಾರದು. ಆದರೆ ಅವರ ರಕ್ಷಣೆಗಾಗಿ ಅವರ ಪ್ರದೇಶದಲ್ಲಿ ಬ್ರಿಟೀಷರ ಒಂದು ಸೈನ್ಯವನ್ನು ಇಡಬೇಕು. ಅದರ ವೆಚ್ಚವನ್ನು ಮಾತ್ರ ಸ್ಥಳೀಯ ರಾಜರು ನೀಡಬೇಕು ಪ್ರತಿ ವರ್ಷ ವೆಚ್ಚ ನೀಡಲು ತೊಂದರೆಯಾದಲ್ಲಿ ಸದರಿ ವೆಚ್ಚಕ್ಕೆ ಸರಿ ಹೊಂದುವ ಆದಾಯ ಇರುವ ತಮ್ಮ ರಾಜ್ಯದ ಒಂದು ಭಾಗವನ್ನು ಬ್ರಿಟಿಷರಿಗೆ ಬಿಟ್ಟುಕೊಡಬೇಕು. (೨) ಸ್ಥಳೀಯ ರಾಜನು ತನ್ನ ನೆರೆ ಹೊರೆ ರಾಜರೊಂದಿಗೆ ವಿವಾದಗಳು ಇದ್ದಲ್ಲಿ ಅವುಗಳನ್ನು ಬ್ರಿಟೀಷರ ಮಧ್ಯಸ್ಥಿಕೆ ಮೂಲಕವೇ ಇತ್ಯರ್ಥ ಪಡಿಸಿಕೊಳ್ಳಬೇಕು. (೩) ಆಂತರಿಕ ಆಡಳಿತಕ್ಕೆ ಸಂಬಂಧಿಸಿದಂತೆ ಸಲಹೆ ಸೂಚನೆ ನೀಡಲು ಒಬ್ಬ ಬ್ರಿಟೀಷ ರೆಸಿಡೆಂಟ್ (ಪೊಲಿಟಿಕಲ್ ಏಜೆಂಟ್)ನನ್ನು ತಮ್ಮ ಆಸ್ಥಾನದಲ್ಲಿ ಇಟ್ಟುಕೊಳ್ಳಬೇಕು ಎಂದು ಕರಾರು ವಿಧಿಸಲಾಯಿತು. ಹೀಗಾಗಿ ಈ ರಾಜ, ಮಹಾರಾಜರು ಆಡಳಿತ ಯಾವುದೇ ಗುರುತರ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಅವಶ್ಯಕತೆ ಉಂಟಾಗಲಿಲ್ಲ ಮತ್ತು ಯಾವುದೇ ಪ್ರಮುಖ ನಿರ್ಣಯ ಕೈಗೊಳ್ಳುವ ಹಕ್ಕು, ಅದಿಕಾರ ಹೊಂದಿರಲಿಲ್ಲ. ನಮ್ಮ ರಾಜರಿಗೆ ಉಳಿದ ಏಕೈಕ ಹಕ್ಕು ಮತ್ತು ಅಧಿಕಾರಗಳು ಎಂದರೆ ಸಂಗೀತ, ಗಾಯನ, ನೃತ್ಯ, ಕಲೆ ಸಾಹಿತ್ಯ (ಬ್ರಿಟೀಷರನ್ನು ಹೊಗಳುವುದು) ಮತ್ತು ಹೊಗಳು ಭಟ್ಟರ ಗುಂಪಿನೊಂದಿಗೆ ದಿನವೂ ಅರಮನೆಯಲ್ಲಿ ಧಾರ್ಮಿಕ ವಿಧಿವಿಧಾನಗಳ ಹೆಸರಿನಲ್ಲಿ ಸಂತೋಷ ಕೂಟ ಮನೋರಂಜನಾ ಸಭೆಗಳನ್ನು ನಡೆಸುವುದು ಮಾತ್ರವಾಗಿತ್ತು. ಯಾವುದೇ ನೀರಾವರಿ ಯೋಜನೆಯ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕಾದಲ್ಲಿ ಪೊಲಿಟಿಕಲ್ ಏಜೆಂಟನ ಅನುಮತಿ ಪಡೆಯಬೇಕಾಗಿತ್ತು ಅವನು ಅದರಲ್ಲಿ ತನ್ನ ಹಿತವಿದ್ದರೇ ಮಾತ್ರ ಅನುಮತಿ ನೀಡುತ್ತಿದ್ದನು. ಹೀಗಾಗಿ ಅವರಿಂದ ನಮ್ಮ ರಾಷ್ಟ್ರದಲ್ಲಿ ವಿಜ್ಞಾನ ಪ್ರಗತಿ ಸಾಧ್ಯವಾಗಲಿಲ್ಲ ಅದಕ್ಕಾಗಿ ವಿಷಾದಿಸೋಣ.

ಬ್ರಿಟೀಷರ ಕಾಲದಲ್ಲಿ ಶ್ರೀ ಜಗದೀಶ್‌ಚಂದ್ರ ಬೋಸ್ ಅವರು "ರೇಡಿಯೋ ತರಂಗ" ವನ್ನು ಕಂಡುಹಿಡಿದಿದ್ದರು. ಆದರೆ ಬ್ರಿಟೀಷ ಸರ್ಕಾರ ಅವರಿಗೆ ಪ್ರೋತ್ಸಾಹಿಸಲಿಲ್ಲ. ಆದರೆ ಅದೇ ಸಮಯಕ್ಕೆ ವಿದೇಶದಲ್ಲಿ ಮಾರ್ಕೋನಿಗೆ ವ್ಯಾಪಕ ಪ್ರಚಾರ ನೀಡಲಾಯಿತು, ಸೌಲಭ್ಯ ನೀಡಲಾಯಿತು. ಇದು ಒಂದು ಉದಾಹರಣೆ ಇಂತಹ ಇನ್ನೂ ಅನೇಕ ಉದಾಹರಣೆಗಳು ಇವೆ.

[iii] ಸಂವಿಧಾನ ಕತೃಗಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿಯ ಕೊರತೆ:

೧೯೪೭ ರಲ್ಲಿ ನಮಗೆ ಸ್ವಾತಂತ್ರ್ಯ ದೊರಕಿತು. ೧೯೫೦ ರಲ್ಲಿ ಸಂವಿಧಾನವನ್ನು ರಚಿಸಲಾಯಿತು. ಈ ಸಂವಿಧಾನದ ಪ್ರಕಾರ ರಾಜ್ಯ ಸರ್ಕಾರಗಳಿಗೆ ರಾಜ ಮಹಾರಾಜರಿಗೆ ನೀಡಿದ ಅಧಿಕಾರಕ್ಕಿಂತ ಅಲ್ಪ ಸ್ವಲ್ಪ ಹೆಚ್ಚಿನ ಅಧಿಕಾರ ನೀಡಲಾಯಿತು. ಆದರೆ ವೈಜ್ಞಾನಿಕ ಸಂಶೋಧನೆ ಬಗ್ಗೆ ಸಂವಿಧಾನದಲ್ಲಿ ಒಂದು ಶಬ್ದವನ್ನೂ ಉಲ್ಲೇಖಿಸಲಾಗಲಿಲ್ಲ. ಕೃಷಿಗೆ ಸಂಬಂಧಿಸಿದಂತೆ ಸ್ವಲ್ಪ ಸಂಶೋಧನೆ ಮಾಡಲು ರಾಜ್ಯಗಳಿಗೆ ಸ್ವಾತಂತ್ರ್ಯ ನೀಡಲಾಯಿತು. ಆದರೆ ವೈಜ್ಞಾನಿಕ ಸಂಶೋಧನೆ ಬಗ್ಗೆ ಸಂವಿಧಾನದಲ್ಲಿ ಒಂದು ಶಬ್ದವನ್ನು ಉಲ್ಲೇಖಿಸಲಾಗಲಿಲ್ಲ. ಪ್ರಗತಿಯ ಕನಸಿನಲ್ಲಿ ಅನೇಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಯಿತು. ಐಐಟಿ, ಐಐಎಂ ಗಳನ್ನು ಸ್ಥಾಪಿಸಲಾಯಿತು ಮತ್ತು ಧಿಡೀರನೆ ಭಾರತವು ಪ್ರಗತಿ ಹೊಂದುವುದಾಗಿ ಭಾವಿಸಲಾಯಿತು. ಆದರೆ ಹಾಗೆ ಆಗಲಿಲ್ಲ ಕಾರಣ ವಿಶ್ವವಿದ್ಯಾಲಯಗಳು ವೈಜ್ಞಾನಿಕ ಪ್ರಗತಿಯಲ್ಲಿ ಇಚ್ಛಿತ ಗುರಿ ಸಾಧಿಸಲು ವಿಫಲವಾದವು ಅದಕ್ಕೆ ಕಾರಣಗಳನ್ನು ಕಂಡುಕೊಳ್ಳುವುದು ಅವಶ್ಯಕವಾಗಿದೆ.

# ಅಧ್ಯಾಯ–೨: ವಿಶ್ವವಿದ್ಯಾಲಯಗಳ ಸಮಸ್ಯೆ:

## [i] ಶ್ರೀ ಹಾ.ಮಾ. ನಾಯಕ್ ಅವರ ಅರಣ್ಯ ರೋಧನ :

ಶ್ರೀ ಹಾ.ಮಾ. ನಾಯಕ್ ಅವರು ಗುಲಬರ್ಗಾ ವಿಶ್ವವಿದ್ಯಾಲಯ ಉಪಕುಲಪತಿಗಳಾಗಿ ಆ ಅಧಿಕಾರವಹಿಸಿಕೊಂಡಾಗ ಒಂದು ಹೇಳಿಕೆ ನೀಡಿದರು ಅವರ ಹೇಳಿಕೆ ಹೀಗಿತ್ತು. "ಇಂದು ನಮ್ಮ ಶಿಕ್ಷಣ ವ್ಯವಸ್ಥೆ ಕೆಟ್ಟು ಹೋಗಿದೆ, ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟುವ ಬದಲು ಉದ್ದವಾಗಿ ಅಣೆಕಟ್ಟು ಕಟ್ಟಲಾಗುತ್ತಿದೆ" ಎಂದು ಉದ್ಗಾರ ವ್ಯಕ್ತಪಡಿಸಿದರು. ಅದಕ್ಕೆ ಪ್ರತಿಯಾಗಿ ನಾನೊಂದು ಪತ್ರ ಬರೆದೆ. ಮಾನ್ಯರೆ, ನೀವು ಹೇಳುವುದನ್ನು ಸಾಮಾನ್ಯವಾಗಿ ಎಲ್ಲರೂ ಅನುಮೋಧಿಸುತ್ತಾರೆ. ಈ ಮಾತನ್ನು ಯಾರಾದರೂ ಹೇಳಿದರೆ ಅದಕ್ಕೆ ಒಂದು ಅರ್ಥವಿದೆ. ಆದರೆ ನದಿಗೆ ಅಣೆಕಟ್ಟು ಕಟ್ಟುವ ಜವಾಬ್ದಾರಿ ಹೊಂದಿದ ನೀವೆ ಹೀಗೆ ಹೇಳಿದರೆ ಇನ್ನು ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟುವ ಜವಾಬ್ದಾರಿ ಯಾರದು? ವಿಶ್ವವಿದ್ಯಾಲಯದ ಮುಖ್ಯಸ್ಥರಾದ ನೀವು ಅದನ್ನು ಹೇಗೆ ಸರಿಪಡಿಸಬೇಕು ಎಂಬುದನ್ನು ಹೇಳಬೇಕು ಮತ್ತು ಹಾಗೆ ಸರಿಪಡಿಸಲು ಕ್ರಮಜರುಗಿಸಬೇಕು ಅಲ್ಲವೇ? ಈ ಬಗ್ಗೆ ಅವರ ಅಭಿಪ್ರಾಯ ನೀಡುವಂತೆ ಅವರನ್ನು ಕೋರಿದ್ದೆನು. ಆದರೆ ಅವರು ಎಂದಿಗೂ ಅದಕ್ಕೆ ಉತ್ತರ ನೀಡಲಿಲ್ಲ.

ವಿಶ್ವ ವಿದ್ಯಾಲಯಗಳಿಗೆ ಬಿಳಿ ಆನೆಗಳು ಎಂದು ಕೆಲವು ಸಲ ಕರೆಯಲಾಗುತ್ತಿದೆ. ವಾಸ್ತವಿಕವಾಗಿ ಅವು ಬಿಳಿ ಆನೆಗಳಾಗಿಲ್ಲ ಅವು Export Oriented ವಿಜ್ಞಾನಿಗಳನ್ನು ಸಿದ್ಧಪಡಿಸಲು ಪೂರಕವಾಗಿ ಕೆಲಸಮಾಡುತ್ತವೆ ಅವುಗಳ ಪಠ್ಯಕ್ರಮವು ಅಂತರಾಷ್ಟ್ರೀಯ ಮಟ್ಟಕ್ಕೆ ಇರುತ್ತದೆ ಅವು ಸ್ಥಳೀಯ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳಲು ವಿಫಲವಾಗಿವೆ. ಅವುಗಳ ಭೋದನಾ ಮಾಧ್ಯಮವು ಸ್ಥಳೀಯ [ಪ್ರಾದೇಶಿಕ] ಭಾಷೆಯಾಗಿರುವುದಿಲ್ಲ ಹೀಗಾಗಿ ಅವು ಸ್ಥಳೀಯ ವೈಜ್ಞಾನಿಕ ಸಮಸ್ಯೆ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಸ್ಥಳೀಯ ಜನರೊಂದಿಗೆ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಬೆರೆಯುವುದಿಲ್ಲ. ಅವರಿಗೆ ವಿದೇಶಿ ಪದವಿಗಳ ವ್ಯಾಮೋಹವಿದೆ ಮತ್ತು ವಿದೇಶಿ ಪದವಿಗಳಿಂದಲೇ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುವ ಮಾನಸಿಕ ಗೊಂದಲಕ್ಕೆ ಒಳಗಾಗಿದ್ದಾರೆ. ಈ ಬಗ್ಗೆ ಈ ಕೆಳಗಿನ ಉದಾಹರಣೆಗಳನ್ನು ನೋಡಬಹುದು.

## [ii] ಶ್ರೀ ಪಾಟೀಲ್ ಪುಟ್ಟಪ್ಪನವರ ಅನುಭವ :

ಶ್ರೀ ಪಾಟೀಲ್ ಪುಟ್ಟಪ್ಪನವರು ತಮ್ಮ ಪ್ರಪಂಚ ಪತ್ರಿಕೆಯಲ್ಲಿ ನಮ್ಮ ವಿಶ್ವವಿದ್ಯಾಲಯಹ ಪದವೀಧರರ ಸ್ಥಿತಿಯನ್ನು ಈ ಪ್ರಕಾರವಾಗಿ ವಿವರಿಸುತ್ತಾರೆ. ಒಂದು ಸಲ ಅವರು ರಾತ್ರಿ ಪ್ರಯಾಣ ಮಾಡುವಾಗ ರಸ್ತೆ ಮಧ್ಯದಲ್ಲಿ ರಾತ್ರಿ ೧೦.೩೦ ಕ್ಕೆ ಅವರ ಅಂಬಾಸಿಡರ್ ಕಾರು ಕೆಟ್ಟುಹೋಯಿತು. ಆಗ ಅವರ ಪಕ್ಕದಲ್ಲಿ ಒಬ್ಬ ಬಿ.ಇ. ಆಟೋಮೊಬೈಲ್ ಪದವೀಧರನು ಕುಳಿತು ಕೊಂಡಿದ್ದನು, ಶ್ರೀ ಪಾಟೀಲ್ ಪುಟ್ಟಪ್ಪನವರು ಬಿ.ಇ ಪದವೀಧರನಿಗೆ ಕಾರು ಏಕೆ ಕೆಟ್ಟಿದೆ ಸರಿಪಡಿಸಲು ಸಾಧ್ಯವೆ? ಎಂದು ಪದವೀಧರನನ್ನು ಕೇಳಿದಾಗ ಅವರು ಅದನ್ನು ಸರಿಪಡಿಸಲಿಲ್ಲ ಬದಲಾಗಿ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ೧/೨ ಗಂಟೆ ತರುವಾಯ ಎದುರಿನಿಂದ ಒಂದು ಟ್ರ್ಯಾಕ್ಟರ್ ಬರುತಿತ್ತು ಅದರ ಚಾಲಕನು ಸಮೀಪಕ್ಕೆ ಬಂದು ಕಾರು ಏಕೆ ನಿಂತಿದೆ ಎಂದು ಪ್ರಶ್ನೆ ಮಾಡಿದನು ವಿಷಯ ಅರಿತ ಅವನು ತಾನು ಸಹಾಯಮಾಡಬಹುದೆ ಎಂದು ಕೇಳಿದನು ಮತ್ತು ಅದರ ದುರಸ್ತಿಗಾಗಿ ಶ್ರೀ ಪಾಟೀಲ್ ಪುಟ್ಟಪ್ಪ ಅವರ ಒಪ್ಪಿಗೆ ಪಡೆದ ತರುವಾಯ ಅವನು

ಕಾರನ್ನು ಪರೀಕ್ಷಿಸಿ ಸರಿಪಡಿಸಿದನು ಕಾರು ಪ್ರಾರಂಭವಾಯಿತು. ಮುಂದಿನ ವಾರದ ತಮ್ಮ ಪತ್ರಿಕೆಯಲ್ಲಿ "ಈ ದೇಶ ಯಾರು ನಡೆಸುತ್ತಿದ್ದಾರೆ?" ಎಂಬ ತಲೆ ಬರಹದ ಅಡಿಯಲ್ಲಿ ಈ ಘಟನೆ ಪ್ರಕಟಿಸಿದರು ಮತ್ತು ನಮ್ಮ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಮಟ್ಟವನ್ನು ವಿವರಿಸುತ್ತಾ ದೇಶವು ಎಸ್. ಎಸ್.ಎಲ್.ಸಿ. ಫೇಲಾದ ಹುಡುಗನಿಂದ ನಡೆಯುತ್ತಾ ಇದೆ. ಬಿ.ಇ ಆಟೋಮೋಬೈಲ್ ಅವರಿಂದ ಅಲ್ಲವೆಂದು ಅಭಿಪ್ರಾಯಪಟ್ಟರು. ನಮ್ಮ ಶಿಕ್ಷಣದಲ್ಲಿ ಪ್ರಾಯೋಗಿಕತೆ ಕೌಶಲ್ಯದ ಕೊರೆತೆ ಇದೆ ಎಂದು ಬಿಂಬಿಸಿದರು.

### [iii] ಎರಡು ಬ್ಯಾಂಡ್ ರೇಡಿಯೋ ಅನುಭವ :

ನಾನು ಪಿ.ಯು.ಸಿ–೨ನೇ ವರ್ಷದಲ್ಲಿ ಇದ್ದಾಗ ಒಬ್ಬ ಹೊಸ ಶಿಕ್ಷಕರು ನನ್ನ ಕಾಲೇಜಿಗೆ ಬಂದರು ಅವರು Electronics ನಲ್ಲಿ Noise Control ವಿಷಯದಲ್ಲಿ ಪಿ.ಎಚ್ ಡಿ ಮಾಡಿದ್ದರು ಮತ್ತು ವಿಶ್ವವಿದ್ಯಾಲಯಕ್ಕೆ ಗೋಲ್ಡ್ ಮೆಡಲಿಸ್ಟ್ ಆಗಿದ್ದರು. ಅವರ ಮನೆಯಲ್ಲಿ ಒಂದು ೨ ಬ್ಯಾಂಡ್ ರೇಡಿಯೋ ಇತ್ತು ಅವರು ತಮ್ಮ ಪುಸ್ತಕ ಪಾಂಡಿತ್ಯದಿಂದ ಅದನ್ನು ದುರಸ್ತಿ ಮಾಡಲು ಪ್ರಯತ್ನಿಸಿ ಸೋತರು ನಂತರ ಪಿ.ಯು.ಸಿ–೨ನೇ ವರ್ಷದಲ್ಲಿ ಫೇಲಾದ ಮತ್ತು ರೇಡಿಯೋ ದುರಸ್ತಿಯಲ್ಲಿ ಅಂಗಡಿಯಲ್ಲಿ ೬ ತಿಂಗಳ ತರಬೇತಿ ಪಡೆದ ನನ್ನ ಮಿತ್ರನು ಅದನ್ನು ಸರಿಪಡಿಸಿದರು. ಇದು ನಮ್ಮ ಪಿಎಚ್‌ಡಿ ಯ ಪ್ರಾಯೋಗಿಕತೆ.

### [iv] ಶಾಲೆ–ಕಾಲೇಜುಗಳಲ್ಲಿ ಹೆಚ್ಚು ಅಂಕಗಳಿಸುವ ರಹಸ್ಯ :

ನಾನು ಬಿ.ಎಸ್.ಸಿ. ಕಲಿಯುತ್ತಿರುವಾಗ ಒಂದು ಮಾಸಿಕ ಪರೀಕ್ಷೆಯಲ್ಲಿ ನನ್ನ ಮಿತ್ರನಿಗೆ ೯೪% ಅಂಕ ಬಂತು ನನಗೆ ೫೪% ಅಂಕ ಬಂದಿತು. ನಾನು ನನ್ನ ಮಿತ್ರನಿಗೆ ಈ ಅಂಕದ ರಹಸ್ಯವೇನು? ಎಂದು ಕೇಳಿದೆ ಅದಕ್ಕೆ ಅವನು ತನ್ನ ಉತ್ತರ ಪತ್ರಿಕೆಯನ್ನು ನೀಡಿದನು ನನಗೆ ಆಶ್ಚರ್ಯವಾಯಿತು "Plank constant" ಸಿದ್ಧಾಂತಕ್ಕೆ ಸಂಬಂಧಿಸಿದಂತೆ ನಮ್ಮ ಲೆಕ್ಚರ್ ಬರೆಯಿಸಿದ ೮ ಪುಟಗಳ ಟಿಪ್ಪಣಿಯನ್ನು ಯಥಾವತ್ತಾಗಿ ಬರೆದಿದ್ದನು ಮತ್ತು ಆಗಲೂ ಕೂಡ ಆ ೮ ಪುಟಗಳ ಟಿಪ್ಪಣಿಯನ್ನು ಯಥಾವತ್ತಾಗಿ ಬರೆಯ ಬಲ್ಲೆ ಎಂದು ಹೇಳಿದನು. ಹಾಗಾದರೆ, ಆ ವಿಷಯದ ಬಗ್ಗೆ ನಾನು ಪಾಟೀಸವಾಲು ಮಾಡಿದಾಗ ಅದಕ್ಕೆ ಅವನು ಉತ್ತರಿಸಲು ವಿಫಲನಾದನು ಮತ್ತು ಅದರ ಅರ್ಥ ತಿಳಿಯುವುದು ಅವನ ಉದ್ದೇಶವಲ್ಲ. ಆದರೆ ಹೆಚ್ಚು ಅಂಕಗಳನ್ನು ಪಡೆಯುವುದು ಮಾತ್ರ ನನ್ನ ಗುರಿ ಎಂದು ಅವನು ಒಪ್ಪಿಕೊಂಡನು. ಮುಂದೆ ಅವನು ಆ ವರ್ಷದ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ್ದನು ಮುಂದೆ ಕೇಂದ್ರ ಸರ್ಕಾರವು ವಿಜ್ಞಾನಿಗಳ ಹುದ್ದೆಗೆ ನೇಮಕ ಮಾಡುವಾಗ ಹೆಚ್ಚು ಅಂಕಗಳಿಸಿದವರನ್ನೇ ಆಯ್ಕೆ ಮಾಡಿತು. ಅವನಾದರೂ ಅಗಾಧವಾದ ಜ್ಞಾಪನಶಕ್ತಿಯನ್ನು ಹೊಂದಿದ್ದ ಆದರೆ ವಿಚಾರ ಶಕ್ತಿಯನ್ನು ಹೊಂದಿರಲಿಲ್ಲ. ಹೀಗಾಗಿ ನಮ್ಮ ಸರ್ಕಾರಿ ವಿಜ್ಞಾನಿಗಳಿಂದ ಮಹತ್ತರವಾದ ಸಂಶೋಧನೆ ಮಾಡಿಸುವುದು ಕಷ್ಟಕರ.

ರಾಮಾಯಣ, ಮಹಾಭಾರತಗಳನ್ನು ಬಾಯಿಪಾಠ ಮಾಡಬಹುದು ಆದರೆ ಅಲ್ಲಿರುವ ತತ್ವಗಳನ್ನು "ಅನುಭಾವ" ಮಾಡಿಕೊಳ್ಳುವುದು ಮುಖ್ಯ "ಅನುಭಾವ" ಹೊಂದಿದ ವ್ಯಕ್ತಿಗೆ ಕೆಲವು ಸಲ ಅಸಾದಾರಣ ಜ್ಞಾಪಕ ಶಕ್ತಿ ಇರದೇ ಇರಬಹುದು ಆನುಬಾವ ಮಾಡಿಕೊಳ್ಳಲು ಜ್ಞಾಪಕ ಶಕ್ತಿಯ ಅವಶ್ಯಕತೆ ಇಲ್ಲ ಇದನ್ನು ಅರ್ಥಮಾಡಿಕೊಳ್ಳಲು ನಮ್ಮ ಶಿಕ್ಷಣ ವ್ಯವಸ್ಥೆ ವಿಫಲವಾಗಿದೆ.

## [v] ಚೀನಾದೇಶದಲ್ಲಿ ರೈತನೇ ಶಿಕ್ಷಕ :

ಶ್ರೀ ಎಂ.ವಿ. ರಾಜಶೇಖರನ್ [ಈಗಿನ ಕೇಂದ್ರ ಯೋಜನಾ ಮಂತ್ರಿಗಳು] ಅವರ ಜೊತೆ ನಮ್ಮ ವಿಜ್ಞಾನ ತಂತ್ರಜ್ಞಾನ ಸ್ಥಿತಿಗತಿಗಳ ಬಗ್ಗೆ ಚರ್ಚೆ ಮಾಡುತ್ತಿರುವಾಗ ಅವರು ಹೇಳಿದರು ಚೀನಾ ದೇಶದಲ್ಲಿ ಭತ್ತದ ಇಳುವರಿ ಹೆಚ್ಚಿಸಲು ಎಂಎಸ್‌ಸಿ ಅಗ್ರಿ ಕಲಿತವರು ಕಾಲೇಜಿನಲ್ಲಿ ಪಾಠ ಮಾಡುವುದಿಲ್ಲ. ಬದಲಾಗಿ ಆ ಪ್ರದೇಶದಲ್ಲಿ ಯಾವ ರೈತನು ಹೆಚ್ಚು ಇಳುವರಿಯನ್ನು ಪಡೆದಿರುತ್ತಾನೆಯೋ ಅವನೇ ಆ ವಿಷಯಕ್ಕೆ ಸಂಬಂಧಿಸಿದಂತೆ ಕಾಲೇಜಿನಲ್ಲಿ ಪಾಠ ಮಾಡುತ್ತಾನೆ. ನಾವು ಹೆಚ್ಚು ಇಳುವರಿ ಪಡೆದ ರೈತನಿಗೆ ಸನ್ಮಾನ ಮಾಡುತ್ತೇವೆ. ಆದರೆ ಅವನು ವಿದ್ಯಾರ್ಥಿಗಳಿಗೆ ನೇರವಾಗಿ ಕಾಲೇಜಿನಲ್ಲಿ ಆ ಪಾಠಮಾಡುವ ಸ್ವಾತಂತ್ರ್ಯವನ್ನು ನೀಡುವುದಿಲ್ಲ ಕಾರಣ ರೈತನಿಗೆ ಇಂಗ್ಲೀಷ್ ಬರುವುದಿಲ್ಲ. ಕನ್ನಡದಲ್ಲಿ ಹೇಳಿದರೆ ಎಲ್ಲ ವಿದ್ಯಾರ್ಥಿಗಳಿಗೆ ಅರ್ಥವಾಗುವುದಿಲ್ಲ ಅಥವಾ ಅವನನ್ನು ಗೌಣ್ಯವಾಗಿ ಕಾಣುತ್ತೇವೆ ಇದು ನಮ್ಮ ಸಮಸ್ಯೆ.

## [vi] ಜಪಾನಿನಲ್ಲಿ ಹಿರಿಯ ಕಾರ್ಮಿಕನೆ ಶಿಕ್ಷಕ:

ಜಪಾನ್ ವಿಶ್ವವಿದ್ಯಾಲಯದಲ್ಲಿ ಎಂಇ/ಬಿಇ ಆಟೋಮೊಬೈಲ್ ವಿದ್ಯಾರ್ಥಿಗಳಿಗೆ ಪಾಠಮಾಡುವವರು ವಾಹನ ತಯಾರಿಕಾ ಕಾರ್ಖಾನೆಯಲ್ಲಿ ೧೫–೨೦ ವರ್ಷ ಸೇವೆ ಸಲ್ಲಿಸಿರುವ ಹಿರಿಯ ಕಾರ್ಮಿಕರಾಗಿರುತ್ತಾರೆ (ಫೋರ್ಮನ್) ಮತ್ತು ತಮ್ಮ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಾಲೇಜುಗಳಲ್ಲಿ ಪಾಠಮಾಡುತ್ತಾರೆ. ಭಾರತದಲ್ಲಿ ಇದು ಎಂದಿಗೂ ಸಾಧ್ಯವಿಲ್ಲ ಕಲ್ಪಿಸಿಕೊಳ್ಳಲು ಆಗಲಾರದು.

## [vii] ವಿದೇಶದಲ್ಲಿ ಪಿ.ಎಚ್.ಡಿ ಮಾಡುವುದು:

ವಿದೇಶಿ ಕೈಗಾರಿಕೆಗಳು ತಮ್ಮಲ್ಲಿ ತಾಂತ್ರಿಕ ತೊಂದರೆಗಳು ಉಂಟಾದಾಗ ವಿಶ್ವವಿದ್ಯಾಲಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ತಾಂತ್ರಿಕ ತೊಂದರೆ ನಿವಾರಣೆ ಅಥವಾ ಅಭಿವೃದ್ದಿಗಾಗಿ ನೇಮಿಸಿಕೊಳ್ಳುತ್ತಾರೆ. ಅವರಿಗೆ ೫–೬ ವರ್ಷದ ಅವಧಿಗೆ ಗೌರವಧನ [Scholarship] ನೀಡುತ್ತಾರೆ ಮತ್ತು ಇತರ ಸೌಲಭ್ಯಗಳನ್ನು ನೀಡುತ್ತಾರೆ. ವಿದ್ಯಾರ್ಥಿ ಯಶಸ್ವಿಯಾದಲ್ಲಿ ಅವನ ಉದ್ಯೋಗ ಆ ಕೈಗಾರಿಕೆಯಲ್ಲಿ ಖಾಯಂ ಆಗುತ್ತದೆ, ಅವನಿಗೆ ಪಿ.ಎಚ್‌ಡಿ ಪದವಿ ಸಿಗುತ್ತದೆ. ವಿದ್ಯಾರ್ಥಿ ಯಶಸ್ವಿಯಾಗದೇ ಇದ್ದಲ್ಲಿ ಅವನ ನಿಗದಿತ ಅವಧಿ ಮುಕ್ತಾಯವಾಗುತ್ತಿದ್ದಂತೆ ಅಲ್ಲಿಂದ ಬಿಡುಗಡೆ ಮಾಡಲಾಗುತ್ತದೆ. ಭಾರತದಲ್ಲಿ ಇದು ಎಂದಿಗೂ ಸಾಧ್ಯವಿಲ್ಲ.

ಸಾಮಾನ್ಯವಾಗಿ ನಮ್ಮ ಎಲ್ಲ ಭಾರಿ ಕೈಗಾರಿಕೆಗಳು ವಿದೇಶಿ ಸಹಯೋಗದೊಂದಿಗೆ ಸ್ಥಾಪಿಸಲ್ಪಟ್ಟಿವೆ. ಹೀಗಾಗಿ ಇಲ್ಲಿ ತಾಂತ್ರಿಕ ತೊಂದರೆ ಉಂಟಾದಾಗ ಇಲ್ಲಿಯ ವಿದ್ಯಾರ್ಥಿಗಳಿಗೆ ಅದನ್ನು ಸರಿಪಡಿಸಲು ಅವಕಾಶ ನೀಡಲು ಸಾಧ್ಯವಾಗಲಾರದು (೧) ಇಲ್ಲಿಯ ವಿದ್ಯಾರ್ಥಿಗಳಿಗೆ ತಂತ್ರಜ್ಞಾನದಲ್ಲಿ ತಿಳುವಳಿಕೆ ಇರುವುದಿಲ್ಲ ಎಂಬುದು ಒಂದು ವಿಚಾರವಾಗಿದೆ. (೨) ಈಗಾಗಲೇ ತಾಂತ್ರಿಕ ಸಹಯೋಗ ನೀಡಿದ ಸಂಸ್ಥೆಗೆ ನಮ್ಮ ಕೈಗಾರಿಕೆ ಮಾಲೀಕರು ಋಣಿಯಾಗಿರುವುದರಿಂದ ಅವರು ಆ ಸಂಸ್ಥೆಗೆ ಮನವಿ ಮಾಡಿ ಅಲ್ಲಿಂದ ಒಬ್ಬ ತಂತ್ರಜ್ಞನನ್ನು ಕಳುಹಿಸಲು ಕೋರುತ್ತಾರೆ. (೩) ಇನ್ನೊಂದು ಪ್ರಸಂಗದಲ್ಲಿ ಸ್ಥಳೀಯ ಪ್ರತಿಭಾನ್ವಿತರು ಸ್ಥಳೀಯ ಭಾರಿ ಕಾರ್ಖಾನೆಯ ಆಯಕಟ್ಟಿನ ಸ್ಥಳದಲ್ಲಿ ಯಾವುದಾದರೂ ಸಂಶೋಧನೆ ಮಾಡಲು ಬಯಸಿದಾಗ ಅದಕ್ಕೆ ಅವಕಾಶ ಸಿಗುವುದಿಲ್ಲ ಕಾರಣ, ಅವು Trade Secret ಎಂದು ಭಾವಿಸಲಾಗುತ್ತಿದೆ. ಅದಕ್ಕೆ ಮೂಲ ಸಹಯೋಗ ನೀಡಿದ ಸಂಸ್ಥೆ ವಿರೋಧಿಸುತ್ತದೆ. ಹೀಗಾಗಿ ನಮ್ಮ ತಾಂತ್ರಿಕ ಕಾಲೇಜು ಮತ್ತು ಕೈಗಾರಿಕೆ ನಡುವೆ ಸಮನ್ವಯ ಸ್ವಲ್ಪವೂ ಇರುವುದಿಲ್ಲ.

ಹೀಗಾಗಿ ಭಾರತದಲ್ಲಿ ಪದವಿ ಪಡೆದ ತಾಂತ್ರಿಕರು, ವಿದ್ಯಾರ್ಥಿಗಳು ಸಂಶೋಧನೆ ಮಾಡಬೇಕಾದಲ್ಲಿ ಅವರು ಅವಶ್ಯಕವಾಗಿ ವಿದೇಶಕ್ಕೆ ಹೋಗಬೇಕು. ಅಲ್ಲಿ ಸಂಶೋಧನೆ ಮಾಡುವವರಿಗೆ ಸಹಾಯಕರಾಗಿ ಕಾರ್ಯಮಾಡಬೇಕು ಮತ್ತು ಇವರ ಬುದ್ಧಿಶಕ್ತಿಯ ಬಲದಲ್ಲಿ ವಿದೇಶಿಯರು ಪೇಟೆಂಟ್ ಮಾಡಿಸಿಕೊಳ್ಳಬೇಕು. ಈ ರೀತಿ ಇರುವಂತಹ ವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಿಲ್ಲ. ಸಧ್ಯಕ್ಕಂತೂ ಸಾಧ್ಯವಿಲ್ಲ. ವಿಶ್ವವಿದ್ಯಾಲಯಗಳು ಉನ್ನತ ಶಿಕ್ಷಣ ಸಂಸ್ಥೆಗಳು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಅವರಿಂದ ಇಲ್ಲಿಯ ಸ್ಥಳಿಯ ಜನರ ಅವಶ್ಯಕತೆಗೆ ಅನುಗುಣವಾಗಿ ಸಂಶೋಧನೆ ನಡೆಸಲು ಸಾಧ್ಯವಿಲ್ಲ ಎಂಬುದು ವಾಸ್ತವಿಕ ಅಂಶವಾಗಿದೆ.

ಎರಡನೇಯದಾಗಿ ಮಂತ್ರಕ್ಕಿಂತ ಉಗುಳು ಹೆಚ್ಚು ಎಂಬಂತೆ ವಿಶ್ವವಿದ್ಯಾಲಯದಲ್ಲಿ ಕಾರ್ಯಕ್ಕಿಂತಲೂ ಶಿಷ್ಟಾಚಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಯಾವುದೇ ವಿಷಯದ ಬಗೆ ಸಂಶೋಧನೆ ಮಾಡುವುದಾದಲ್ಲಿ ಅದಕ್ಕೆ ಒಂದು ಯೋಜನೆ ರೂಪಿಸಬೇಕು. ಸಿಬ್ಬಂದಿಗಳನ್ನು ಗುರುತಿಸಬೇಕು. ಅವರ ಟಿಎ/ಡಿಎ ಮೊದಲು ನಿಗದಿಯಾಗಬೇಕು ಕಾರ್ಯವಿಧಾನ ನಿಗದಿಯಾಗಬೇಕು. ಅವರಿಗೆ ವಿದೇಶದಿಂದ ಯಂತ್ರ ಸಾಮಗ್ರಿಗಳನ್ನು ಪೂರೈಸಬೇಕು [ತಮ್ಮಗೆ ಬೇಕಾದ ಯಂತ್ರ ಸಾಮಗ್ರಿ ಅವರೇ ತಯಾರಿಸಿಕೊಳ್ಳಲು ಸಾಧ್ಯವಿಲ್ಲ] ಇತರ ಮೂಲಭೂತ ಸೌಲಭ್ಯ ದೊರಕಿಸಬೇಕು ಇದು ನಡೆಯಲು ೪–೫ ವರ್ಷಗಳಾದರೂ ಬೇಕಾಗಬಹುದು ಆಗ ಯಾವ ಉದ್ದೇಶಕ್ಕಾಗಿ ಸಂಶೋಧನೆ ಮಾಡಬೇಕಾಗಿದೆಯೋ ಅದು ತನ್ನ ಪ್ರಾಮುಖ್ಯತೆಯನ್ನೇ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಉದಾಹರಣೆಗೆ (1) Arjun Battle Field Tank, (2) LCA (3) Helicopter ಇತ್ಯಾದಿಗಳು ಹೀಗಾಗಿ ಉನ್ನತ ಮಟ್ಟದ ಸಂಶೋಧನೆ ನಮ್ಮ ವಿಶ್ವವಿದ್ಯಾಲಗಳಿಂದ ಸಾಧ್ಯವಿಲ್ಲ ಅದೇ ಸಮಯಕ್ಕೆ ಜನ ಸಾಮಾನ್ಯರಿಗೆ ಬೇಕಾಗಬಹುದಾದ ಕೆಳಮಟ್ಟದ ಸಂಶೋಧನೆ ಮಾಡುವುದು ವಿಶ್ವವಿದ್ಯಾಲಯಗಳಿಂದ ಸಾಧ್ಯವಿಲ್ಲ ಕಾರಣ ಇಂದಿನ ನಮ್ಮ ಪದವೀಧರರು ಸಾಮಾನ್ಯ ಸಂಶೋಧಕರಿಗಿಂತಲೂ ಅಸಾಧಾರಣ ಜ್ಞಾಪಕ ಶಕ್ತಿಹೊಂದಿದವರಾಗಿರುತ್ತಾರೆ. ಆದರೆ ಕೇವಲ ಜ್ಞಾಪನಶಕ್ತಿಯಿಂದ ಸಂಶೋಧನೆಯಾಗಲಾರದು. ಪ್ರಶ್ನೆ ಮಾಡುವ ಸ್ವಭಾವ, ಸತ್ಯ ಮತ್ತು ನಿಷ್ಟುರ ಸ್ವಭಾವ ಕುತೂಹಲ, ಸಾಹಸ ಸ್ವಭಾವ ಬೆಳೆಸಿಕೊಂಡಾಗ ಮಾತ್ರ ಸಂಶೋಧನೆ ಸಾಧ್ಯವಿದೆ. ಅದಕ್ಕಾಗಿ ಕೆಳಮಟ್ಟದ ಸಂಶೋಧನೆಗಳಿಗಾಗಿ ವಿಶ್ವವಿದ್ಯಾಲಯಗಳಿಂದ ಸಧ್ಯಕ್ಕೆ ದೂರ ಇರುವುದೇ ಒಳಿತು ವಿಶ್ವವಿದ್ಯಾಲಯಗಳು ಈಗ ಮಾಡುತ್ತಿರುವ ಅಲ್ಪ ಸ್ವಲ್ಪ ವಿದೇಶಿ ಪ್ರಭಾವದ ಸಂಶೋಧನೆಗಳನ್ನು ಅವರು ಮುಂದುವರಿಸಿಕೊಂಡು ಹೋಗಲಿ.

## [viii] ಭಾರತೀಯ ಪಿ.ಎಚ್.ಡಿ.ಗಳು:

ಭಾರತೀಯ ಪಿ.ಎಚ್.ಡಿ.ಯ ಬಗ್ಗೆ ದಿನಾಂಕ ೦೪.೦೭.೨೦೦೫ ರಂದು ಪ್ರಜಾವಾಣಿಯಲ್ಲಿ "ಸಂಶೋಧನಾ ಚೋಬದ್ರರಿಗೆ ತಕ್ಕ ಶಾಸ್ತಿ" ಎಂಬ ಲೇಖನ ಪ್ರಕಟವಾಯಿತು. ಈ ಲೇಖನದ ಮೇಲೆ ಡಾ: ಲಕ್ಷ್ಮೀ ಪೃಥ್ವಿರಾಜ್, ಬಳ್ಳಾರಿ ಅವರ ವಿಮರ್ಷಾತ್ಮಕ ಪತ್ರ "ಅರ್ಥಗರ್ಭಿತ" ಲೇಖನವನ್ನು ದಿನಾಂಕ ೧೮.೦೭.೨೦೦೫ ರಂದು ಪುನ: ಪ್ರಜಾವಾಣಿಯುಲ್ಲಿ ಪ್ರಕಟಿಸಲಾಯಿತು. ಅದು ಭಾರತೀಯ ಪಿ.ಎಚ್.ಡಿ.ಗಳ ಇನ್ನೊಂದು ಕಪ್ಪು ಮುಖವನ್ನು ಬಿಂಬಿಸುತ್ತದೆ. (ಅನುಬಂಧ–೧) ಹೀಗಿರುವಾಗ ನಮ್ಮ ವಿಶ್ವವಿದ್ಯಾಲಯಗಳಿಂದ ಸಂಶೋಧಕರನ್ನು ಪಡೆಯುವುದು ಇಂದಿನ ಸ್ಥಿತಿಯಲ್ಲಿ ಅತ್ಯಂತ ಕಷ್ಟಸಾಧ್ಯವಾದ ಕೆಲಸವಾಗಿರುತ್ತದೆ.

ಇನ್ನು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳನ್ನು ಕೈಬಿಟ್ಟ ಮೇಲೆ ಭಾರತದ ಶ್ರೀಸಾಮಾನ್ಯನಿಗೆ ಬೇಕಾಗುವ ಸಂಶೋಧನೆಯನ್ನು ಯಾರು ಮಾಡಬೇಕು? ಹೈಸ್ಕೂಲುಗಳು ಪ್ರಾಥಮಿಕ ಶಾಲೆಗಳೇ? ಇದು ಸಾಧ್ಯವಿಲ್ಲ. ಇಂತಹ ಸ್ಥಿತಿಯಲ್ಲಿ ಆಶಾದಾಯಕ ಕಿರಣವೆಂದರೆ ಉನ್ನತ ಶಿಕ್ಷಣ ಪಡೆಯದ ಮತ್ತು ಸಮಾಜದಲ್ಲಿ ಜನರ ಕಷ್ಟಗಳಿಗೆ ಸ್ಪಂದಿಸುವಂತಹ ಎಲೆ ಮರೆಯ ಕಾಯಿಗಳನ್ನು ಗುರುತಿಸುವುದು ಮತ್ತು ಅವರ ಅವಶ್ಯಕತೆಗಳನ್ನು ಪೂರೈಸುವುದೆ ನಮಗೆ ಇರುವ ಏಕೈಕ ದಾರಿಯಾಗಿದೆ. ಈ ಗುರಿ ಸಾಧನೆಗೆ ಸೂಕ್ತವಾದ ಆಡಳಿತ ವ್ಯವಸ್ಥೆಯ ಕೊರತೆ ಎದ್ದು ಕಾಣುತ್ತದೆ. ಆಡಳಿತದಲ್ಲಿ ಈ ಕೊರತೆಯನ್ನು ಸರಿಪಡಿಸುವುದೇ ನಮ್ಮ ಗುರಿಯಾಗಿದೆ.

# ಅಧ್ಯಾಯ–೩: ರಾಜಕೀಯ ಮತ್ತು ಸಾಮಾಜಿಕ ಕಾರಣಗಳು:

## [i] ಮಾಜಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರಿಂದ ವಿಜ್ಞಾನ ಪ್ರಗತಿಯ ಸಂಕಲ್ಪ :: ಸಂವಿಧಾನದ ವಿಧಿ ೫೧ ಏ [ಹೆಚ್]

ಭಾರತವು ಸ್ವಾತಂತ್ರ್ಯ ಹೊಂದಿದಾಗ ಸಂವಿಧಾನ ನಿರ್ಮಾತೃಗಳು ಸಾಮಾಜಿಕ ನ್ಯಾಯಕ್ಕಾಗಿ ಹೆಚ್ಚಿನ ಮಹತ್ವ ನೀಡಿದರು ವಿಜ್ಞಾನ ತಂತ್ರಜ್ಞಾನದ ಬಗ್ಗೆ ಯೋಚಿಸಲೇ ಇಲ್ಲ, ೧೯೮೦ ರ ನಂತರ ಶ್ರೀಮತಿ ಇಂದಿರಾಗಾಂದಿ ಯವರು ಸಂವಿಧಾನಕ್ಕೆ ತಿದ್ದುಪಡಿ ತಂದು ದೇಶದ ಹಿತದೃಷ್ಟಿಯಿಂದ ಪ್ರಜೆಗಳು ಹಕ್ಕಿಗಾಗಿ ಹೇಗೆ ಹೊರಾಡುತ್ತಾರೋ ಅದರಂತೆ ರಾಷ್ಟ್ರದ ಪ್ರಗತಿಗಾಗಿ ತಮ್ಮ ಕರ್ತವ್ಯಕ್ಕಾಗಿಯೂ ಹೋರಾಡಬೇಕು ಎಂದು ಹೇಳಿದರು ಅದಕ್ಕಾಗಿ ಪ್ರಜೆಗಳ ಮೂಲಭೂತ ಕರ್ತವ್ಯಗಳು ಎಂಬ ವಿಷಯವನ್ನು ಸಂವಿಧಾನದಲ್ಲಿ ಸೇರ್ಪಡೆ ಮಾಡಿದರು. ಸಂವಿಧಾನದ ವಿಧಿ **೫೧** ಏ [ಹೆಚ್] ರಲ್ಲಿ ಪ್ರತಿಯೊಬ್ಬ ಪ್ರಜೆ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಆದರೆ ವೈಜ್ಞಾನಿಕ ಮನೋಭಾವನೆ ಸಮಾಜದಲ್ಲಿ ಸಹಜವಾಗಿ ಅಭಿವೃದ್ದಿ ಹೊಂದಲು ಪೂರಕವಾದ ಆಡಳಿತದ ವ್ಯವಸ್ಥೆಯನ್ನು ರೂಪಿಸಲಿಲ್ಲ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬಹುದಾದ ವಾಸ್ತವಿಕ ಸ್ಥಿತಿಯಾಗಿದೆ. ಇಂದಿಗೂ ದಿನ ಪತ್ರಿಕೆಯಲ್ಲಿ ಅಲ್ಲೊಬ್ಬ ಇಲ್ಲೊಬ್ಬರು ಸಣ್ಣಪುಟ್ಟ ಸಂಶೋಧನೆಯನ್ನು ಮಾಡಿದ ಬಗ್ಗೆ ವರದಿ ಬರುತ್ತದೆ ಅವರು ಸರ್ಕಾರವು ತಮಗೆ ಸಹಾಯ ನೀಡಬೇಕು ಎಂದು ಪತ್ರಿಕೆಗಳ ಮೂಲಕ ಬೇಡಿಕೆ ಸಲ್ಲಿಸುತ್ತಾರೆ. ನಂತರ ಅವರ ಪಾಡು ಏನಾಯಿತು ಎಂಬುದು ತಿಳಿದುಬರುವುದಿಲ್ಲ. ಅವರ ಮನವಿಗಳು ಅರಣ್ಯರೋಧನವಾಗಿವೆ. ಈ ಸಮಸ್ಯೆಗಳನ್ನು ಪರಿಹರಿಸುವುದೆ ಈಗ ನಮ್ಮ ಗುರಿಯಾಗಬೇಕಾಗಿದೆ.

[ii] ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿಜ್ಞಾನ ಮಂಡಳಿಗಳ ಅಸಹಾಯಕತೆ:

ಈ ಬಗ್ಗೆ ಸ್ಥಳೀಯ ಸರ್ಕಾರಗಳು ನಿರ್ಲಿಪ್ತವಾಗಿದೆ. ರಾಜ್ಯ ಸರ್ಕಾರಗಳು ವಿಜ್ಞಾನ ಮಂಡಳಿಯನ್ನು ಪ್ರಾರಂಭಿಸಿವೆ ಆದರೆ ಆ ಮಂಡಳಿಗಳು ಆಡಳಿತ ಮುಗ್ಗಟ್ಟಿನಿಂದ / ಆರ್ಥಿಕ ಮುಗ್ಗಟ್ಟಿನಿಂದ ಅವು ತತ್ತರಿಸುತ್ತವೆ. ಅವುಗಳ ಕಾರ್ಯ ವ್ಯಾಪ್ತಿ ಆಯಾ ರಾಜ್ಯದ ರಾಜಧಾನಿಗೆ ಮಾತ್ರ ಸೀಮಿತವಾಗಿವೆ. ಈ ಸಂಸ್ಥೆಗಳಾದರೂ ಈಗಾಗಲೇ ಮಾಡಲಾದ ಸಂಶೋಧನೆಗಳನ್ನೇ ಪುನ: ಪುನ: ಪ್ರಚಾರ ಮಾಡುತ್ತವೆ ಹೊರತು, ಹೊಸ ಸಂಶೋಧನೆಗಳನ್ನು ಗುರುತಿಸುವ ಮತ್ತು ಪ್ರೋತ್ಸಾಹಿಸುವ ಕಾರ್ಯವ್ಯಾಪ್ತಿಯನ್ನು ಹೊಂದಿರುವುದಿಲ್ಲ.

ಅನೇಕ ಸಲ ತಮ್ಮ ಕಚೇರಿ ಸಿಬ್ಬಂದಿಗೆ ವೇತನ ಪಾವತಿಸಲು ಹೆಣಗಾಡಬೇಕಾಗಿದೆ. ಆದರೆ ಕಾನೂನು ಬದ್ದವಾಗಿ ಈ ಸಂಶೋಧನೆ ಕೆಲಸವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಸೇರಿದೆ. ರಾಜ್ಯಗಳಿಗೆ ಈ ಬಗ್ಗೆ ಸಂವಿಧಾನ ಬದ್ದವಾಗಿ ಅಧಿಕಾರ ನೀಡಲಾಗಿಲ್ಲ. ಹೀಗಾಗಿ ಯಾವ ರಾಜ್ಯ ಸರ್ಕಾರಗಳು ಯಾವುದೇ ಮಹತ್ತರ ಸಂಶೋಧನೆಗೆ ಚಾಲನೆ ನೀಡದೆ ಕೇವಲ ನೆಪ ಮಾತ್ರಕ್ಕೆ ಕೆಲ ವಿಜ್ಞಾನ ಮಂಡಳಿಗಳನ್ನು ಸ್ಥಾಪಿಸಿವೆ ಮತ್ತು ವಿಜ್ಞಾನ ತಂತ್ರಜ್ಞಾನ ಇಲಾಖೆಗಳನ್ನು ಹೊಂದಿರುತ್ತವೆ. ಇನ್ನು ಕೇಂದ್ರ ಸರ್ಕಾರದ ವಿಜ್ಞಾನ ತಂತ್ರಜ್ಞಾನ ಇಲಾಖೆ ಒಂದು ಯೋಜನೆಗಳನ್ನು ರೂಪಿಸಿದೆ. ಉದಾಹರಣೆಗೆ, ಒಬ್ಬ ವ್ಯಕ್ತಿಯು ಸಂಶೋಧನೆಯನ್ನು ಮಾಡಬೇಕೆಂದು ಬಯಸುತ್ತಾನೆ ಮತ್ತು ತನ್ನ

ವಿಚಾರವನ್ನು ಇದಕ್ಕಾಗಿ ರಚಿಸಿದ ಸಮಿತಿ ಮುಂದೆ ಮಂಡಿಸುತ್ತಾನೆ. ಸಮಿತಿ ಅವನ ವಿಚಾರದಲ್ಲಿ ಸತ್ವ ಇದೆ ಎಂದು ಭಾವಿಸಿದಲ್ಲಿ ಮತ್ತು ಅದರಿಂದ ಆರ್ಥಿಕ ಲಾಭ ಬರುವುದೆಂದು ಕಂಡುಬಂದಲ್ಲಿ ಮಾತ್ರ ಆ ಸಂಶೋಧನೆಗೆ ರೂ. ೨೫,೦೦೦/– ದಿಂದ ರೂ. ೫.೦೦ ಲಕ್ಷದವರೆಗೆ ಗರಿಷ್ಟ ರೂ. ೧೦ ಲಕ್ಷದವರೆಗೆ ಆರ್ಥಿಕ ಸಹಾಯವನ್ನು ನೀಡುತ್ತದೆ. ಇದಕ್ಕಾಗಿ ದೆಹಲಿಯಲ್ಲಿ ಒಂದು ಕಚೇರಿ ಇರುತ್ತದೆ. ಇಲ್ಲಿ ಈ ಬಗ್ಗೆ ವಿಚಾರಿಸಿದಾಗ ಹಣದ ಕೊರತೆ ಇಲ್ಲವೆಂದು ತಿಳಿದು ಬಂದಿದೆ. ಆದರೆ ಇಲ್ಲಿ ಇರುವ ಸಮಸ್ಯೆಯೆಂದರೆ ಭಾರತದಂತಹ ವಿಶಾಲ ದೇಶಗಳಲ್ಲಿ ಪ್ರತಿ ಮೂಲೆಯಿಂದ ಈ ಅಲ್ಪ ಸಹಾಯಕ್ಕಾಗಿ ದೆಹಲಿಗೆ ಗ್ರಾಮೀಣ ಭಾಗದ ವಿಜ್ಞಾನಿಗಳು ಬರಲು ಸಾಧ್ಯವೇ? ಇಂಗ್ಲೀಷ್ ಬಾರದ ವ್ಯಕ್ತಿಯನ್ನು ಇವರು ವಿಜ್ಞಾನಿ ಎಂದು ಒಪ್ಪಿಕೊಳ್ಳುವರೆ ಉತ್ತರ: ಇಲ್ಲ, ಸಾಧ್ಯವಿಲ್ಲ, ಎಂದಿಗೂ ಸಾಧ್ಯವಿಲ್ಲ, ಒಂದು ಪಕ್ಷ ಒಪ್ಪಿದರೂ ವಿವಿಧ ಭಾಷಾ ಸಮಸ್ಯೆ, ಊಟ, ವಸತಿ ಸಮಸ್ಯೆ ಮತ್ತು ಈ ಸಹಾಯಕ್ಕಾಗಿ ಪತ್ರ ವ್ಯವಹಾರ ಮಾಡಿದರೂ ಅದು ಸರಿಯಾಗಿ ಅರ್ಥವಾಗಲಾರದು ಅರ್ಥವಾದರೂ ಸಮಯಕ್ಕೆ ಸರಿಯಾಗಿ ಅವರಿಗೆ ಸಹಾಯ–ಸಹಕಾರ ಕೇಂದ್ರ ಸರ್ಕಾರದಿಂದ ಸಿಗಲಾರದು. ಆದರೆ ಇಲ್ಲಿಯೂ ಕೂಡಾ ಕೇಂದ್ರ ಸರ್ಕಾರವು ತಪ್ಪು ನೀತಿಯನ್ನು ಅನುರಿಸಿದೆ ಎಂದು ಹೇಳಲು ವಿಷಾಧಿಸುತ್ತೇನೆ. ಸಂಶೋಧನೆಗಾಗಿ ಸಹಾಯ ಮಾಡುವಾಗ ಅದರಿಂದ ಆರ್ಥಿಕ ಲಾಭ ಇದೆ ಎಂದು ಕಂಡು ಬಂದರೆ ಮಾತ್ರ ಸಹಾಯ ನೀಡುವ ನೀತಿ ಅನುಸರಿಸಲಾಗಿದೆ. ಇದು ತಪ್ಪು "ಹಣಗಳಿಸುವುದಕ್ಕಾಗಿ ಸಂಶೋಧನೆ ಎನ್ನುವ ನೀತಿಯೇ ತಪ್ಪು". ನಾವು ಸಂಶೋಧನೆ ಮಾಡುತ್ತಾ ಹೋಗಬೇಕು ಜ್ಞಾನವನ್ನು ಶಾಸ್ತ್ರೀಯವಾಗಿ ಸಂಗ್ರಹಿಸುತ್ತಾ ಹೋಗಬೇಕು. ಒಂದು ಹಂತದಲ್ಲಿ ಆರ್ಥಿಕ ಲಾಭ ಉಂಟಾಗುತ್ತದೆ. ಆರ್ಥಿಕ ಲಾಭವು ವಿಜ್ಞಾನದ ಉಪ ಉತ್ಪತ್ತಿ (ಬೈಪ್ರಾಡಕ್ಟ್) ಯಾಗಿರುತ್ತದೆ. ಮೈಕಲ್ ಫ್ಯಾರಡೆ ಲೋಹ ಚುಂಬಕ ಮತ್ತು ವಿದ್ಯುತ್ ತಂತಿಗಳ ಘರ್ಷಣೆ ಆದಾಗ ವಿದ್ಯುತ್ ಉತ್ಪಾದನೆಯಾಗುತ್ತದೆ ಎಂದು ಕಂಡು ಹಿಡಿದಾಗ ಅದನ್ನು ಆರ್ಥಿಕ ಲಾಭಕ್ಕಾಗಿ ಮಾಡಲಿಲ್ಲ. ಕೇವಲ ಕುತೂಹಲದಿಂದಲೇ ಮಾಡಿದನು. ಗೆಲಿಲಿಯೋ ಪೃಥ್ವಿ ಚಲನೆ ಬಗ್ಗೆ ಸಂಶೋಧನೆ ಮಾಡಿದಾಗ ಆರ್ಥಿಕ ಲಾಭಕ್ಕಾಗಿ ಮಾಡಲಿಲ್ಲ ಎಂಬುದನ್ನು ಆಡಳಿತಗಾರರು ಅರ್ಥಮಾಡಿಕೊಳ್ಳಬೇಕು.

ಒಂದು ಗಿಡದಲ್ಲಿ ಲಕ್ಷಾವಧಿ ಹೂಗಳು ಅರಳುತ್ತವೆ. ಆದರೆ ಅದರಲ್ಲಿ ಹಣ್ಣಾಗಿ ಪ್ರಯೋಜನಕ್ಕೆ ಬರುವ ಹಣ್ಣುಗಳು ನೂರಾರು ಮಾತ್ರ ಹಾಗೆ ಜನ ಸಮುದಾಯದಲ್ಲಿ ವೈಜ್ಞಾನಿಕ ಮನೋಭಾವನೆ ಬೆಳಸಿದಾಗ ಮಾತ್ರ ಸಮಾಜದಲ್ಲಿ ಶಿಸ್ತು, ಶಾಂತಿ, ನೆಮ್ಮದಿ ಬರಲು ಅನುಕೂಲವಾಗುತ್ತವೆ. ಹೀಗಾಗಿ ಕೇಂದ್ರ ಸರ್ಕಾರವು ವಿಜ್ಞಾನ ಪ್ರಗತಿಗೆ ಯೋಜನೆ ರೂಪಿಸಿದರು. ಅದು ಶ್ರೀಸಾಮಾನ್ಯನಲ್ಲಿ ಅಡಗಿದ ವಿಜ್ಞಾನದ ಸೂಕ್ಷ್ಮತೆಯನ್ನು ಗ್ರಹಿಸಲು ಪ್ರೋತ್ಸಾಹಿಸಲು ವಿಫಲವಾಗಿದೆ. ಸಂಶೋಧನೆಗಳು ಶ್ರೀಸಾಮಾನ್ಯನಿಂದ ನಿರಂತರವಾಗಿ ನಡೆಯುವ ಕ್ರಿಯೆಯಾಗಿರುತ್ತದೆ. ಅದನ್ನು ಕೇಂದ್ರ ಸರ್ಕಾರದಿಂದ ನಿಭಾಯಿಸಲು ಸಾಧ್ಯವಿಲ್ಲ ವೈಜ್ಞಾನಿಕ ವಿಷಯಗಳಿಗೆ ಸಂಭಂಧಿಸಿದಂತೆ ಲೋಕಸಭಾ ಸದಸ್ಯರ ನಿರಾಸಕ್ತಿ ಬಗ್ಗೆ (ದಿನಾಂಕ ೨೨.೦೭.೨೦೦೫ ರ ಹಿಂದುಸ್ತಾನ್ ಟೈಮ್ಸ್ ಪತ್ರಿಕೆಯ ವರದಿ ನೋಡಿರಿ–ಅನುಬಂಧ ೨). ಈ ಕಾರ್ಯವನ್ನು ತೃಪ್ತಿಕರವಾಗಿ ಮಾಡಲು ರಾಜ್ಯ ಸರ್ಕಾರಗಳಿಗೂ ಸಾಧ್ಯವಿಲ್ಲ, ಅದನ್ನು ಕಡ್ಡಾಯವಾಗಿ ತಾಲ್ಲೂಕು ಪಂಚಾಯ್ತಿ / ಜಿಲ್ಲಾ ಪಂಚಾಯ್ತಿ / ಸ್ಥಳೀಯ ಸರ್ಕಾರಗಳೇ ಮಾಡಬೇಕಾಗಿದೆ. ಕಾರಣ ಕೇಂದ್ರ ಸರಕಾರವು ಈ ಯೋಜನೆಯಲ್ಲಿ ಬದಲಾವಣೆ ಮಾಡಿ ಅದನ್ನು ಪ್ರತಿ ಜಿಲ್ಲಾಮಟ್ಟಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಿದೆ. ಇದಕ್ಕಾಗಿ ಎಲ್ಲ ರಾಜ್ಯ ಸರ್ಕಾರಗಳು ಸೂಕ್ತ ಕ್ರಮ ಜರುಗಿಸಬೇಕಾಗಿದೆ.

ಇಲ್ಲಿ ಇನ್ನೂ ಒಂದು ಸೂಕ್ಷ್ಮತೆ ಇರುತ್ತದೆ ಸಾಮಾನ್ಯವಾಗಿ ವಿಜ್ಞಾನಿಗಳು ಹಣಕ್ಕಾಗಿ ಸಹಾಯಕ್ಕಾಗಿ ಇನ್ನೊಬ್ಬರನ್ನು ಕೇಳುವುದಿಲ್ಲ. ಈ ರಹಸ್ಯ ನಮ್ಮ ಸಮಾಜ ಮತ್ತು ಸರ್ಕಾರ ಅರ್ಥ ಮಾಡಿಕೊಳ್ಳುವಲ್ಲಿ ವಿಫಲವಾಗಿದೆ. ಹೀಗಾಗಿ ನಮ್ಮ ಆಡಳಿತ ವ್ಯವಸ್ಥೆ ಹೇಗಿರಬೇಕೆಂದರೆ ವಿಜ್ಞಾನಿಗಳು ಕಚೇರಿಗೆ ಆಗಮಿಸಿ ಸಹಾಯಕ್ಕಾಗಿ ಅರ್ಜಿ ಸಲ್ಲಿಸುವ ಬದಲು ಸ್ಥಳೀಯ ಸರ್ಕಾರಗಳು ಹಾಗೂ ತಾಲ್ಲೂಕು ಪಂಚಾಯ್ತಿಗಳು ಅವರ ಮನೆ ಬಾಗಿಲಿಗೆ ಹೋಗಿ ಅವರಿಗೆ ಸಲ್ಲಿಸಬಹುದಾದ ಸಹಾಯವನ್ನು ಸಲ್ಲಿಸುವ ಆಡಳಿತ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ. ಕೆಲವು ಭಾರತೀಯರು ಈ ವ್ಯವಸ್ಥೆ ಎಂದೆಂದಿಗೂ ನಮ್ಮಲ್ಲಿ ಬರಲು ಸಾಧ್ಯವಿಲ್ಲವೆಂದು ಸಾರಾಸಗಟಾಗಿ ಉತ್ತರಿಸುತ್ತಾರೆ ಹಾಗೆ ಉತ್ತರಿಸುವುದೇ ಅವರ ಜಾಯಮಾನ ಆಗಿದೆ. ಹಾಗೇ ಉತ್ತರಿಸಿದರೇ ಮಾತ್ರ ಅವರು ಭಾರತೀಯರು ಎಂದು. ಅವರನ್ನು ಕರೆಯಬಹುದು. ಈ ವಿಚಾರ ಹೊಂದಿದವರು ದಯವಿಟ್ಟು ಎ.ಸಿ ವಿದ್ಯುತ್ ಸಂಶೋದಿಸಿದ ಶ್ರೀ ನಿಕೋಲಾ ಟೆಸ್ಲಾ ಜೀವನ ಕಥೆ ತಿಳಿದುಕೊಂಡರೆ ಒಳ್ಳೆಯದು, ಅದು ಹೀಗಿದೆ.

## [iii] **ಆದರ್ಶ ವಿಜ್ಞಾನಿ ನಿಕೋಲಾ ಟೆಸ್ಲಾ :**

ನಿಕೋಲ ಟೆಸ್ಲಾ ಒಬ್ಬ ಪ್ರತಿಭಾನ್ವಿತ ವಿಜ್ಞಾನಿ ಮೂಲತಹ ನಾರ್ವೆ ದೇಶಕ್ಕೆ ಸೇರಿದವನು. ಇವನು ಬಾಲ್ಯದ ದಿನಗಳಲ್ಲಿ ಗಣಿತದಲ್ಲಿ ಅಪೂರ್ವ ಆಸಕ್ತಿ ಹೊಂದಿದ್ದನು. ಶಾಲೆಯಲ್ಲಿ ಗುರುಗಳು ಗಣಿತದ ಸಮಸ್ಯೆ ನೀಡಿದಾಗ ಅದನ್ನು ಹಂತ ಹಂತವಾಗಿ ಬಿಡಿಸದೆ, ಒಂದೇ ಸಲ ನೇರವಾಗಿ ಉತ್ತರವನ್ನು ಬರೆಯುತ್ತಿದ್ದನು. ದೊಡ್ಡವನಾದಾಗ ಅಮೇರಿಕಾ ದೇಶಕ್ಕೆ ಉದ್ಯೋಗ ಅರಸಿ ಬಂದನು. ಇವನು ವಿಶ್ವವಿದ್ಯಾಲಯದ ಪದವೀಧರನಾಗಿದ್ದರೂ ಪ್ರಾರಂಭದಲ್ಲಿ ನಿರುದ್ಯೋಗಿಯಾಗಿ ಟೆಲಿಫೋನ್ ಕಂಪನಿಯ ಕೇಬಲ್ ಹಾಕುವ ಕೆಲಸದಲ್ಲಿ ಕೂಲಿ ಆಳಾಗಿ ಗುದ್ದಲಿ, ಸಲಿಕೆಗಳಿಂದ ನೆಲ ಅಗೆದು ಕೇಬಲ್ ಹಾಕುವ ಕೆಲಸ ಮಾಡಿದನು ನಂತರ ಥಾಮಸ್ ಎಡಿಸನ್‌ನಲ್ಲಿ ಕೆಲಸ ಮಾಡಿದನು. ಇವನು ಮಾಡಿದ ಸಂಶೋಧನೆಗಳಲ್ಲಿ ಸುಮಾರು ೪೦ ಪೇಟೆಂಟಗಳನ್ನು ಥಾಮಸ್ ಎಡಿಸನ್ ತನ್ನ ಕಂಪನಿ ಹೆಸರಿನಲ್ಲಿ ಮಾಡಿಕೊಂಡನು. ಇವನಿಗೆ ನೀಡುತ್ತೇನೆ ಎಂದು ಹೇಳಿದ ಮೊತ್ತವನ್ನು ಥಾಮಸ್ ಎಡಿಸನ್ ನೀಡದೇ ಇರುವುದರಿಂದ, ಅವನು ಮುನಿಸಿಕೊಂಡು ಥಾಮಸ್ ಎಡಿಸನ್‌ನ ಕಂಪನಿಯ ಕೆಲಸ ಬಿಟ್ಟನು.

ನಂತರ ಅಮೇರಿಕಾ ಸರ್ಕಾರವು ನಯಾಗಾರ ಜಲಪಾತದಲ್ಲಿ ವಿದ್ಯುತ್ ಉತ್ಪಾದಿಸಲು ಸಾರ್ವಜನಿಕರಿಂದ ಟೆಂಡರ್ ಕರೆಯಿತು. ಯಾರು ಹೆಚ್ಚು ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಪ್ರಸ್ತಾವನೆ ಸಲ್ಲಿಸುತ್ತಾರೋ ಅವರಿಗೆ ಅದರ ಕೆಲಸದ ಗುತ್ತಿಗೆಯನ್ನು ನೀಡಲಾಗುವುದು ಎಂದು ತಿಳಿಸಿಲಾಯಿತು. ಶ್ರೀ ನಿಕೋಲಾ ಟೆಸ್ಲಾ, ವಿಜ್ಞಾನಿಯು ನಾರ್ವೆ ದೇಶಕ್ಕೆ ಸೇರಿದ ಒಬ್ಬ ಗುತ್ತಿಗೆದಾರನೊಂದಿಗೆ ಕೂಡಿಕೊಂಡು ತನ್ನ ಯೋಜನಾ ಪ್ರಸ್ತಾವನೆಯನ್ನು ಸಲ್ಲಿಸಿದನು. ಅಮೇರಿಕಾ ಸರ್ಕಾರ ಇವನ ಯೋಜನಾ ಪ್ರಸ್ತಾವನೆಯನ್ನು ಒಪ್ಪಿಕೊಂಡಿತು ಮತ್ತು ವಿದ್ಯುತ್ ಉತ್ಪಾದನೆ ಗುತ್ತಿಗೆಯನ್ನು ನಾರ್ವೆ ದೇಶದ ಗುತ್ತಿಗೆದಾರನಿಗೆ ನೀಡಿತು. ಗುತ್ತಿಗೆ ಪಡೆದ ನಾರ್ವೆ ದೇಶದ ಗುತ್ತಿಗೆದಾರನು ಗುತ್ತಿಗೆ ಕೆಲಸ ಪೂರ್ಣಗೊಳಿಸಲು ಬ್ಯಾಂಕುಗಳಿಗೆ ಸಾಲಕ್ಕಾಗಿ ಅರ್ಜಿ ಹಾಕಿದನು. ಆಗ ಬ್ಯಾಂಕಿನವರು ನಿನ್ನ ಒಪ್ಪಂದದಲ್ಲಿ ಒಂದು ಹಾರ್ಸ್ ಪವರ್ ವಿದ್ಯುತ್‌ಗೆ ೧ ಡಾಲರ್ ರಾಯಲ್ಟಿ ಎಂದು ಒಪ್ಪಂದ ಇರುತ್ತದೆ. ಇಲ್ಲಿ ಒಟ್ಟು ೮ ದಶಲಕ್ಷ (ಜ್ಞಾಪಕದಿಂದ ಬರೆಯಲಾಗಿದೆ ಇದು ಸ್ವಲ್ಪ ಹೆಚ್ಚು ಕಡಿಮೆ ಇರಬಹುದು) ಹಾರ್ಸ್ ಪವರ್ ವಿದ್ಯುತ್ ಉತ್ಪಾದನೆಯಾಗುತಿತ್ತು ೮ ಮಿಲಿಯನ್ ಡಾಲರ್ ವಿಜ್ಞಾನಿಗೆ ನೀಡಬೇಕಾಗುತ್ತದೆ. ಈ ರಾಯಲ್ಟಿ ಮೊತ್ತ ಭಾರಿ ಭಾರಿ ಆಗಿರುತ್ತದೆ. ಇದನ್ನು ಕಡಿಮೆ ಮಾಡಿದರೆ ಮಾತ್ರ ಈ ಯೋಜನೆ ಲಾಭದಾಯಕವಾಗಬಹುದು. ಕಾರಣ ರಾಯಲ್ಟಿಯನ್ನು ಕಡಿಮೆ ಮಾಡಿಕೊಂಡು ಬಂದರೆ ಮಾತ್ರ

ಸಾಲ ನೀಡುವುದಾಗಿ ತಿಳಿಸಿದರು ಪೆಚ್ಚು ಮೋರೆಯೊಂದಿಗೆ ಗುತ್ತಿಗೆದಾರನು ಟೆಸ್ಲಾನಲ್ಲಿ ವಿಷಯ ತಿಳಿಸಿದ, ಒಪ್ಪಂದ ಬದಲಾಗದಿದ್ದರೆ ತಾನು ಈಗಾಗಲೇ ಹಾಕಿದ ಬಂಡವಾಳವೂ ವ್ಯರ್ಥವಾಗುವುದು ಎಂದು ಶ್ರೀ ಟೆಸ್ಲಾ ಅವರ ಮುಂದೆ ಗೋಳಾಡಿದ ಇದನ್ನು ಕೇಳಿ ತಿಳಿದ ವಿಜ್ಞಾನಿಯು ಆತನಿಂದ ಕರಾರು ಪತ್ರ ಪಡೆದ ಮತ್ತು ತನ್ನ ಕರಾರು ಪತ್ರ ಒಟ್ಟಿಗೆ ಸೇರಿಸಿ ಅದನ್ನು ಚೂರು ಚೂರಾಗುವಂತೆ ಹರಿದು ಹಾಕಿದನು ಮತ್ತು ಸಂತೋಷದಿಂದ ಹೇಳಿದ ನಾನು ಹಣಗಳಿಸಲು ಈ ಸಂಶೋಧನೆ / ಯೋಜನೆ ಮಾಡಲಿಲ್ಲ ಬದಲಾಗಿ ಜಗತ್ತಿನಲ್ಲಿ ಎಲ್ಲರೂ ಎ.ಸಿ ವಿದ್ಯುತ್ ಉಪಯೋಗಿಸಲಿ ಜನರ ಜೀವನ ಸುಖವಾಗಲಿ ಎಂದು ಮಾತ್ರ ಮಾಡಿದ್ದೇನೆ. ನೀನು ನನಗೆ ಯಾವುದೇ ರಾಯಲ್ಟಿ ನೀಡಬೇಕಾಗಿಲ್ಲವೆಂದು ತಿಳಿಸಿದನು. ನಂತರ ಆ ಗುತ್ತಿಗೆದಾರನಿಗೆ ಬ್ಯಾಂಕುಗಳು ಸಾಲು ನೀಡಿದವು ಎ.ಸಿ, ವಿದ್ಯುತ್ ಉತ್ಪಾದನಾ ಯಶಸ್ವಿಯಾಯಿತು. ಜಗತ್ತಿಗೆ ಮೊದಲ ಬಾರಿ ಎ.ಸಿ ವಿದ್ಯುತ್ ಬೃಹತ್ ಪ್ರಮಾಣದಲ್ಲಿ ಪರಿಚಯವಾಯಿತು. ಇದು ವಿಜ್ಞಾನಿಯ ಮನೋಧೈರ್ಯಕ್ಕೆ ಉದಾಹರಣೆ. ಇದಕ್ಕೆ ಹೋಲಿಸಿದರೆ ನಮ್ಮಲ್ಲಿ ಎಷ್ಟು ಜನರಿಗೆ ಈ ಧೈರ್ಯ, ತಾಳ್ಮೆ, ತ್ಯಾಗ ಶಕ್ತಿ ಇದೆ. ಇದಕ್ಕೆ ಪ್ರತಿಯಾಗಿ ಅಂದಿನ ಅಮೇರಿಕಾ ಸಮಾಜ [೧೮೮೦ ರಲ್ಲಿ(ಜ್ಞಾಪಕದಿಂದ ಬರೆಯಲಾಗಿದೆ ಇದು ಸ್ವಲ್ಪ ಹೆಚ್ಚು ಕಡಿಮೆ ಇರಬಹುದು)] ಅವನೊಂದಿಗೆ ನಡೆದುಕೊಂಡ ವ್ಯವಹಾರವು ಭಾರತೀಯರಿಗೆ ಮಾದರಿಯಾಗಿದೆ.

ಆತನ ವೈಜ್ಞಾನಿಕ ಪ್ರತಿಭೆಯನ್ನು ಗುರುತಿಸಿ ಅಂದಿನ ಸಮಾಜದ ಗಣ್ಯರು ಅವನನ್ನು ಮನೆಗೆ ಆಹ್ವಾನಿಸಿ ಭೋಜನ ಏರ್ಪಡಿಸುತ್ತಿದ್ದರು. ನಾವು ಗುರುಗಳನ್ನು ಪಾದಪೂಜೆಗೆ ಮನೆಗೆ ಕರೆಯಿಸುವಂತೆ ಭೋಜನಕ್ಕಾಗಿ ಆಹ್ವಾನಿಸುತ್ತಿದ್ದರು. ಭೋಜನದ ತರುವಾಯ ಅವನ ವೈಜ್ಞಾನಿಕ ಚಟುವಟಿಕೆಗೆ ಪ್ರೋತ್ಸಾಹಿಸಲು ತಾವು ಸಹಿ ಮಾಡಿದ ಬ್ಲಾಂಕ್‌ಚೆಕ್‌ನ್ನು ನೀಡುತ್ತಿದ್ದರು. ಇವನು ಬ್ರಹ್ಮಚಾರಿಯಾಗಿದ್ದನು ಸ್ವಂತ ಮನೆಯನ್ನು ಹೊಂದಿರಲಿಲ್ಲ. ಇವನು ಸಾಮಾನ್ಯವಾಗಿ ಹೋಟೆಲ್‌ಗಳಲ್ಲಿ ವಾಸವಾಗಿರುತ್ತಿದ್ದನು, ಕೆಲವು ಸಲ ಹೋಟೆಲ್‌ನವರು ಬಾಡಿಗೆ ಹಣಕ್ಕೆ ಒತ್ತಾಯ ಮಾಡಿದಲ್ಲಿ ಆ ಹೋಟೆಲ್‌ನ್ನು ತೊರೆದು ಮತ್ತೊಂದು ಹೋಟೆಲ್‌ಗೆ ಹೋಗುತ್ತಿದ್ದನು. ಆಗ ಆ ಹೋಟೆಲ್ ಮಾಲೀಕನು ಸ್ಥಳೀಯ ನ್ಯಾಯಾಲಯದಲ್ಲಿ ಅವನಿಂದ ಬಾಡಿಗೆ ವಸೂಲಿ ಮಾಡಲು ಧಾವಾ ಹೂಡುತ್ತಿದ್ದರು. ಅವನ ಹೆಸರಿನಲ್ಲಿ ಹೊರಟ ನೋಟೀಸನ್ನು ಕೋರ್ಟಿನಲ್ಲಿ ನೋಡಿದ ಅವನ ಅಭಿಮಾನಿಗಳು ಸದರಿ ಮೊತ್ತವನ್ನು ನ್ಯಾಯಾಲಯದಲ್ಲಿ ಪಾವತಿ ಮಾಡಿ ಆ ನೋಟೀಸನ್ನು ರದ್ದುಪಡಿಸುತ್ತಿದ್ದರು. ಈ ಒಂದು ವೈಜ್ಞಾನಿಕ ಸಂಸ್ಕೃತಿ ಅಮೇರಿಕಾ ಮತ್ತು ಯೂರೋಪ್ ಖಂಡದಲ್ಲಿ ೧೯ನೇ ಶತಮಾನದ ಅಂತ್ಯದಲ್ಲಿ ಇತ್ತು. ಆದರೆ ಇಂದಿಗೂ ಅದನ್ನು ಭಾರತದಲ್ಲಿ ಕಲ್ಪಿಸಿಕೊಳ್ಳುವುದು ಅಸಾಧ್ಯವಾಗಿದೆ. ಎಲ್ಲಿಯವರೆಗೆ ಈ ಸಂಸ್ಕೃತಿ ಬರುವುದಿಲ್ಲವೋ ಅಲ್ಲಿಯವರೆಗೆ ಭಾರತದಲ್ಲಿ ವೈಜ್ಞಾನಿಕ ಪ್ರಗತಿ ಸಾಧ್ಯವಿರುವುದಿಲ್ಲ. ಕೇವಲ ಸರ್ಕಾರದಿಂದ ವೈಜ್ಞಾನಿಕ ಪ್ರಗತಿ ಆಗಲಾರದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದಲೂ ಸಾಧ್ಯವಾಗಲಾರದು ಸ್ಥಳೀಯ ಜನತೆ ಸ್ಥಳೀಯ ಸರ್ಕಾರಗಳು ಸಂಶೊಧನೆಯಲ್ಲಿ ಆಸಕ್ತಿವಹಿಸಿದಾಗ ಮಾತ್ರ ದೇಶದಲ್ಲಿ ವೈಜ್ಞಾನಿಕ ಪ್ರಗತಿಯಾಗಲು ಸಾಧ್ಯವಿದೆ. ಅಮೇರಿಕಾದಂತಹ ಮುಂದುವರೆದ ರಾಷ್ಟ್ರದಲ್ಲಿ ವಿಜ್ಞಾನ, ತಂತ್ರಜ್ಞಾನ ಸಂಶೋಧನೆ ಸೇರಿದಂತೆ ಯಾವುದೇ ಹೊಸ ವಿಷಯಗಳು ಉತ್ಪತ್ತಿಯಾದಲ್ಲಿ ಅವು ತನ್ನಿಂದ ತಾನೆ ರಾಜ್ಯ ಸರಕಾರಗಳ ವ್ಯಾಪ್ತಿಗೆ ಸೇರುತ್ತದೆ. ರಾಜ್ಯ ಸರಕಾರಗಳು ನೇರವಾಗಿ ಆ ಬಗ್ಗೆ ನಿರ್ಣಯ ಕೈಗೊಳ್ಳುತ್ತವೆ. ಉದಾಹರಣೆಗೆ ''ಕೇಬಲ್ ಆಪರೇಟರ್'' ಇದು ಒಂಡುಮು ಹಂತದಲ್ಲಿ ಹೊಸ ವಿಷಯವಾಗಿರುತ್ತದೆ. ಆಗ ಅಮೇರಿಕಾದಲ್ಲಿ ಈ ಬಗ್ಗೆ ಆಯಾ ರಾಜ್ಯ ಸರಕಾರಗಳು ಪ್ರಾರಂಭದಲ್ಲಿ ಕ್ರಮಕೈಗೊಳ್ಳುತ್ತವೆ. ರಾಜ್ಯ ರಾಜ್ಯಗಳಲ್ಲಿ ಬಿನ್ನಾಭಿಪ್ರಾಯ ಬಂದಾಗ ಮಾತ್ರ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡುತ್ತದೆ. ಭಾರತದಲ್ಲಿ ಎಲ್ಲ ಹೊಸ ವಿಷಯಗಳು ಕೇಂದ್ರ ಸರ್ಕಾರದ ವ್ಯಾಪ್ತಿಗೆ ನೇರವಾಗಿ ಹೋಗುತ್ತದೆ. ಹೀಗಾಗಿ ರಾಜ್ಯಗಳು ಹೊಸ ವಿಷಯಗಳ ಬಗ್ಗೆ ಆಸಕ್ತಿವಹಿಸದಂತೆ ನಮ್ಮ ಈಗಿನ ಸಂವಿಧಾನವು ರಾಜ್ಯ ಸರ್ಕಾರಗಳಿಗೆ ಅಡ್ಡಗೋಡೆಯಾಗಿ ಸ್ಥಳೀಯ ಸಂಶೋಧನೆಗೆ ಆಡಳಿತಾತ್ಮಕ ಅಡೆತಡೆಯಾಗಿರುತ್ತದೆ. ಇಲ್ಲಿ ಸಂವಿಧಾನವು ಬ್ರಿಟೀಷರ ಗುಲಾಮಗಿರಿ ನೀತಿಯನ್ನೇ ಮುಂದುವರಿಸಿಕೊಂಡು

ಬಂದಿದೆ. ರಾಜ್ಯ ಸರ್ಕಾರಗಳಿಗೆ ಹಿಂದಿನ ಮಹಾರಾಜರು ಕಳೆದುಕೊಂಡ ವಿವೇಚನಾ ಅಧಿಕಾರ ಇಂದಿನ ರಾಜ್ಯಗಳಿಗೆ ನೀಡಬೇಕಾಗಿದೆ, ರಾಜ್ಯಗಳು ಈ ಬಗ್ಗೆ ಕೇಳಬೇಕಾಗಿದೆ. ರಾಜ್ಯಗಳಾದರೂ ತಮ್ಮ ಈ ಅಧಿಕಾರ ಕಳೆದುಹೋಗಿದೆ ಈ ಕಳೆದುಹೋದ ಅಧಿಕಾರ ಪುನ: ಪಡೆಯಬೇಕು ಎಂಬ ಪರಿಜ್ಞಾನವನ್ನೇ ಕಳೆದುಕೊಂಡಿವೆ. ಅದೇ ಸಮಯಕ್ಕೆ ಕೇಂದ್ರ ಸರ್ಕಾರವು ಅನಾವಶ್ಯಕವಾದ ಅತೀಯಾದ ಆಡಳಿತ ಕಾರ್ಯಭಾರದಿಂದ ಬಳಲುತ್ತಾ ಇದೆ.

ಅಮೇರಿಕಾದಲ್ಲಿ ಅನೇಕ ಸಂಶೋಧನೆಗಳು ಸರ್ಕಾರದ ಸಹಾಯವಿಲ್ಲದೇ ಖಾಸಗೀ ಮಟ್ಟದಲ್ಲಿ ನಡೆಯುತ್ತವೆ. ಇತ್ತೀಚಿನ ದಿನಗಳಲ್ಲಿ ಮಾನವನ ಡಿ.ಎನ್.ಎ ಮತ್ತು ಆರ್. ಎನ್.ಎ ಗಳನ್ನು ಡಿ-ಕೋಡಿಂಗ್ ಮಾಡುವ ಕೆಲಸವನ್ನು ಅಮೇರಿಕಾ ಸರ್ಕಾರವು ಐದು ವರ್ಷಗಳ ಯೋಜನೆ ರೂಪಿಸಿದಾಗ ಅದನ್ನು ಒಂದೇ ವರ್ಷದಲ್ಲಿ ಖಾಸಗಿ ವಿಜ್ಞಾನಿಗಳು ಪೂರೈಸಿ ಸೈ ಎನಿಸಿಕೊಂಡಿರುತ್ತಾರೆ (ಅನುಬಂದ-೩). ಭಾರತ ದೇಶದಲ್ಲಿ ಅದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ ಕಾರಣವೇನೆಂದರೆ ವಿಜ್ಞಾನ ತಂತ್ರಜ್ಞಾನ ಸೇರಿದಂತೆ ಹೊಸ ವಿಷಯಗಳು ಕೇಂದ್ರ ಸರ್ಕಾರದ ವಿಷಯವಾಗಿರುತ್ತವೆ.

[iv] **ಪ್ರಯೋಗಾಲಯ V/S ದೇವಸ್ಥಾನ ನಿರ್ಮಾಣ ಹೋಲಿಕೆ:**

ಭಾರತದಲ್ಲಿ ಒಂದು ದೇವಸ್ಥಾನವನ್ನು ಕಟ್ಟಬೇಕಾದರೆ ಸರ್ಕಾರದ ಎಲ್ಲ ನಿಯಮಗಳನ್ನು ಮೀರಿ ನಾವು ಒಂದು ದೇವಸ್ಥಾನ ಕಟ್ಟುತ್ತೇವೆ ಮತ್ತು ಪ್ರತಿ ದೇವಸ್ಥಾನಗಳು ಭಿನ್ನವಾಗಿ ಇರುತ್ತವೆ. ಭಾರತದಲ್ಲಿ ಅದೇ ಪ್ರಕಾರವಾಗಿ ಪ್ರಯೋಗಾಲಯಗಳು ಹುಟ್ಟಬೇಕು, ಬೆಳೆಯಬೇಕು ಅದಕ್ಕೆ ಸರ್ಕಾರಕ್ಕಿಂತಲೂ ಸಮಾಜದ ಬೆಂಬಲ ಅಧಿಕವಾಗಿರಬೇಕು ಸಮಾಜದ ಬೆಂಬಲ ಪಡೆಯಬೇಕಾದರೆ ಸಮಾಜದಲ್ಲಿ ಪರಿವರ್ತನೆ ಆಗಬೇಕು ಸಮಾಜದ ನೀತಿ ನಿಯಮಗಳು ಸೂಕ್ಷ್ಮವಾಗಿ ಬದಲಾವಣೆಯಾಗಬೇಕು ಹೀಗೆ ಬದಲಾವಣೆ ಮಾಡುವ ಜವಾಬ್ದಾರಿಯು ಆಡಳಿತದ ಚುಕ್ಕಾಣಿ ಹಿಡಿದ ನೇತಾರರ ಮೇಲೆ ಇರುತ್ತದೆ. ಅದರ ಬದಲು ಆಡಳಿತದ ಚುಕ್ಕಾಣಿ ಹಿಡಿದ ನೇತಾರರು ಸಮಾಜ ಕೆಟ್ಟು ಹೋಗಿದೆ, ಅದಕ್ಕಾಗಿ ನಾನು ಕೆಟ್ಟಿದ್ದೇನೆ ನನ್ನಿಂದ ಏನು ಮಾಡಲು ಸಾಧ್ಯವಿಲ್ಲವೆಂದು ಹೇಳುವ ಕೆಲವು ನೇತಾರರು ನಮ್ಮಲ್ಲಿ ಇರುತ್ತಾರೆ. ಇವರು <u>ಎರಡನೇ ದರ್ಜೆಯ ನೇತಾರರು</u> ಎಂದು ಧೈರ್ಯವಾಗಿ ಹೇಳಬೇಕಾಗುತ್ತದೆ. ಈ ಅಭಿಪ್ರಾಯ ಸ್ವಲ್ಪ ಕಹಿ ಎನಿಸಿದರೂ ವಾಸ್ತವಿಕ ಅಂಶದಿಂದ ಕೂಡಿರುತ್ತದೆ ನಮ್ಮ ನೇತಾರರು ಸಹಿಸಿಕೊಳ್ಳಬೇಕು ಮತ್ತು ಈ ಅಪವಾದದಿಂದ ಮುಕ್ತರಾಗಲು ಶ್ರಮಿಸಬೇಕು.

[v] **ಇನ್ನೊಂದು ಪ್ರಮುಖವಾದ ಅಂಶವೆಂದರೆ ಹಣ, ಹಣ, ಹಣ ಎಲ್ಲಿದೆ? ಹಣ::**

ಅಧಿಕಾರ ಮತ್ತು ಹಣ ಒಂದು ನಾಣ್ಯದ ಎರಡು ಮುಖಗಳು ಆಗಿರುತ್ತವೆ. ಅವು ಒಂದನ್ನೊಂದು ಹಿಂಬಾಲಿಸಿರುತ್ತವೆ. ವೈಯಕ್ತಿಕ ಕೆಲಸಕ್ಕಾಗಿ ಹಣ ಬಲು ಅವಶ್ಯಕ. ಆದರೆ ಸರ್ಕಾರಿ ಕೆಲಸಕ್ಕೆ ಹಣದ ಅವಶ್ಯಕತೆ ಇರಲಾರದು, ಇದ್ದರೂ ಕೂಡಾ ಅತ್ಯಲ್ಪವಾಗಿದೆ. ವೈಯಕ್ತಿಕ ಹಣಕಾಸಿನ ವ್ಯವಸ್ಥೆ ಮತ್ತು ಸಮುದಾಯದ ಹಣಕಾಸಿನ ವ್ಯವಸ್ಥೆಯಲ್ಲಿ ಭಾರಿ ವ್ಯತ್ಯಾಸವಿರುತ್ತದೆ. ಆದರೆ ಸಾಮಾನ್ಯವಾಗಿ ಎಲ್ಲರೂ ವೈಯಕ್ತಿಕ ಹಣಕಾಸಿನ ವ್ಯವಸ್ಥೆಯನ್ನು ಸಮುದಾಯ ಹಣಕಾಸಿನ ವ್ಯವಸ್ಥೆಯೊಂದಿಗೆ ಹೋಲಿಸಿಕೊಂಡಿರುವುದೇ ಇಂದು ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ. ಈ ಹಣದ ಸಮಸ್ಯೆಯನ್ನು ನಮ್ಮ ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿಗಳ ಸ್ಥಳೀಯ ಸರ್ಕಾರಗಳ ಮತ್ತು ಖಾಸಗಿ ವೃತ್ತಿಪರ ಸಂಘಸಂಸ್ಥೆಗಳಿಂದಲೇ ಅತೀ ಸುಲಭವಾಗಿ ನಿಭಾಯಿಸಬಹುದಾಗಿದೆ. ಈ ಹಣದ ಸಮಸ್ಯೆಯನ್ನು ನಮ್ಮ ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಮತ್ತು ಸ್ಥಳೀಯ ಸರ್ಕಾರಗಳೇ ತಮ್ಮ ನಿತ್ಯ ಆದಾಯ ವೆಚ್ಚದ ಆಯವ್ಯಯದಲ್ಲಿ ೦.೫% ಹಣವನ್ನು ಸ್ಥಳೀಯ ವೈಜ್ಞಾನಿಕ ಪ್ರತಿಭೆಗಳನ್ನು ಗುರುತಿಸಲು ಮತ್ತು ಪ್ರೋತ್ಸಾಹಿಸಲು ಕಾಯ್ದಿರಿಸಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ.

# ಅಧ್ಯಾಯ – ೪: ಸ್ಥಳೀಯ ವಿಜ್ಞಾನವನ್ನು ಮತ್ತು ವಿಜ್ಞಾನಿಗಳನ್ನು ಗುರುತಿಸುವುದು ಮತ್ತು ಪ್ರೋತ್ಸಾಹಿಸುವುದು ಹೇಗೆ?

## ಗುರುತಿಸುವುದು :

[i] **ಶ್ರೀಮತಿ ಡಾ: ಪುಷ್ಪಾ ಆರ್. ಜೋಷಿ, ಅವರ ಅನುಭವ**

ಕೆಲ ದಿನಗಳ ಹಿಂದೆ ೨೦೦೩ನೇ ಸಾಲಿನಲ್ಲಿ ನಾನು ಶ್ರೀಮತಿ ಡಾ: ಪುಷ್ಪ ಆರ್. ಜೋಷಿ, ಸ್ತ್ರೀರೋಗ ತಜ್ಞೆಯರು ಮತ್ತು ಶ್ರೀ ಸಿದ್ಧಾರೂಢ ಸ್ವಾಮಿ ಮಠದ ಮಾಜಿ ಛೇರ್‌ಮನ್ ಅವರೊಂದಿಗೆ ಲೋಕಾರೂಢಿಯಾಗಿ ಚರ್ಚಿಸುತ್ತಾ ಇರುವಾಗ ಎಂ.ಬಿ.ಬಿ.ಎಸ್ ವೈದ್ಯರು ಆಯುರ್ವೇದಿಕ್ ವೈದ್ಯರನ್ನು ಏಕೆ ಪ್ರೋತ್ಸಾಹಿಸಬಾರದು ಎಂದು ಪ್ರಶ್ನೆ ಮಾಡಿದೆನು. ಅದಕ್ಕೆ ಅವರು ಈ ಪ್ರಕಾರವಾಗಿ ಹೇಳಿದರು.

ನಾವು ಎಲ್ಲ ಪ್ರಕಾರದ ವೈದ್ಯ ಪದ್ಧತಿಗಳಿಗೂ ಪ್ರೋತ್ಸಾಹ ನೀಡುತ್ತೇವೆ ವಿಜ್ಞಾನದಲ್ಲಿ / ಜ್ಞಾನದಲ್ಲಿ ಯಾವುದೇ ಭೇಧಭಾವ ಮಾಡುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ನಮ್ಮ ನರ್ಸಿಂಗ್ ಹೋಂನಲ್ಲಿ ಕಾಲಿಗೆ ಆಣಿಗಳಾದ ರೋಗಿಗಳು ಬಂದಲ್ಲಿ ಆಣಿಗಳನ್ನು ಆಪರೇಷನ್ ಮಾಡಿ ತೆಗೆಯುತ್ತೇವೆ. ಆದರೆ ಒಂದು ಸಲ ಒಬ್ಬ ಹೋಮಿಯೋಪತಿ ವೈದ್ಯರು ನಮ್ಮಲ್ಲಿ ಆಗಮಿಸಿ ತಾನು ಕಾಲಿನ ಆಣಿಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುವುದಾಗಿ ತಿಳಿಸಿದರು. ಒಂದು ಪ್ರಕರಣದಲ್ಲಿ ಅದನ್ನು ಸಾಬೀತು ಮಾಡಿತೋರಿಸಿದರು. ಇಂದಿಗೆ ೨೫ ವರ್ಷಗಳು ಆಗಿರುತ್ತವೆ. ಅಲ್ಲಿಂದ ಇಲ್ಲಿಯವರೆಗೂ ನಮ್ಮಲ್ಲಿ ಕಾಲಿಗೆ ಆಣಿಗಳಾದ ರೋಗಿಗಳು ಬಂದಲ್ಲಿ ನಾವು ತಪ್ಪದೆ ಅವರನ್ನು ಆ ಹೋಮಿಯೋಪತಿ ವೈದ್ಯರಲ್ಲಿ ಕಳುಹಿಸುತ್ತೇವೆ.

ಇನ್ನೊಂದು ಉದಾಹರಣೆಯಲ್ಲಿ ತಮ್ಮ ಮನೆಯಲ್ಲಿ ಮನೆ ಕೆಲಸದ ಒಬ್ಬ ಮಹಿಳೆಯ ಕೈಗಳ ಮೇಲೆ ಕಪ್ಪು [ನರೋಲಿ] ಚುಕ್ಕೆಗಳು ಏಳುತ್ತಿದ್ದವು. ಪ್ರತಿ ೩ ತಿಂಗಳಿಗೆ ಒಮ್ಮೆ ನಾವು ವಿದ್ಯುತ್‌ನಿಂದ ಅವುಗಳನ್ನು ಸುಡುತ್ತಿದ್ದೆವು ಅವು ಪುನ: ಹುಟ್ಟುತ್ತಾ ಇದ್ದವು. ಒಂದು ಸಲ ನಾನು ಅವಳನ್ನು ಕರೆದು ಈಗ ಬಿಡುವಾಗಿದೆ ನಿನ್ನ ಕೈಮೇಲಿನ ಕಪ್ಪು ಚುಕ್ಕೆಗಳನ್ನು ಸುಟ್ಟು ಹಾಕೋಣ ಬಾ ಎಂದು ಕರೆದೆ ಅವಳು ಬಂದಳು ಅವಳ ಕೈಗಳನ್ನು ನೋಡಿದರೆ ಆಶ್ಚರ್ಯ ಕಾದಿತ್ತು ಅವಳ ಕೈ ಮೇಲೆ ಒಂದು ಕಪ್ಪು ಚುಕ್ಕೆಗಳು ಇರಲಿಲ್ಲ. ಕಪ್ಪು ಚುಕ್ಕೆಗಳು ಹೇಗೆ ಮಾಯವಾದವು? ಎಂದು ಕೇಳಿದಾಗ ಆಗ ಆ ಕೆಲಸದವಳು ಒಬ್ಬನು ಒಂದು ಬೇರನ್ನು ನೀಡಿದನು ಅದನ್ನು ನೀರಲ್ಲಿ ತೇಯಿದು ರಾತ್ರಿ ಮಲಗುವ ಮೊದಲು ಅದನ್ನು ಹಚ್ಚಿಕೊಂಡಿದ್ದೇನು ಬೆಳಗ್ಗೆ ಎದ್ದು ನೋಡಿದಾಗ ಎಲ್ಲ ಚುಕ್ಕೆಗಳು ಉದುರಿ ಹೋಗಿದ್ದವು ಮತ್ತು ನಂತರ ಹೊಸ ಕಪ್ಪು ಚುಕ್ಕೆಗಳು ಕೈ ಮೇಲೆ ಹುಟ್ಟಿಕೊಳ್ಳಲಿಲ್ಲ ಎಂದು ಹೇಳಿದಳು. ಇದು ಅವರಿಗೆ ಆಶ್ಚರ್ಯ ಮತ್ತು ಸಂತೋಷವನ್ನು ಉಂಟು ಮಾಡಿತು ಅವರು ಆ ಬೇರು ನೀಡಿದ ವ್ಯಕ್ತಿಯನ್ನು ಕರೆಯಿಸಲು ಹೇಳಿದರು. ಆ ಪ್ರಕಾರ ಅವನು ಆಗಮಿಸಿದನು, ಅವನಿಗೆ ಆ ಬೇರಿನ ಹೆಸರೇನು ಎಂದು ಕೇಳಿದರು ಅದಕ್ಕೆ ಅವನು ಅದನ್ನು ಹೇಳಲು ಒಪ್ಪಲಿಲ್ಲ. ನಾನು ನನ್ನ ಪ್ರಾಣ ನೀಡಬಹುದು ಆದರೆ ಗುರುಗಳ ಅಪ್ಪಣೆ ಇಲ್ಲದೆ ಅದರ ಹೆಸರು ಯಾರಿಗೂ ತಿಳಿಸಲು ಆಗಲಾರದು ಎಂದು ಹೇಳಿದನು. ಬೇಕಾದಷ್ಟು ಹಣ ನೀಡುವುದಾಗಿ ತಿಳಿಸಿದರು ಒಪ್ಪಲಿಲ್ಲ. ಕೊನೆಗೆ ಊಟ ಮಾಡಲು ಒಪ್ಪಿದನು ಊಟ ಮಾಡಿ ಕೈ ಮುಗಿದು ಹೋದನು. ಅವನು ನೋಡಲು ವೈದ್ಯನಂತೆ ಇರಲಿಲ್ಲ ಕಟ್ಟಿಗೆ ಒಡೆಯುವ ವ್ಯಕ್ತಿಯ ಹಾಗೆ ಗಟ್ಟಿಮುಟ್ಟಾಗಿದ್ದನು. ಈ ಪ್ರಕಾರವಾಗಿ ಆಯುರ್ವೇದದ ವೈದ್ಯರು ಅಸಹಕಾರ ತೋರಿಸುತ್ತಾರೆ. ಹೀಗೆ ಅಸಹಕಾರ ನೀಡುವ ವ್ಯಕ್ತಿಗಳಿಗೆ ನಾವು ಏನು ಮಾಡಲು ಸಾಧ್ಯ ಎಂದು ತಮ್ಮ ಅಸಹಾಯಕತೆ ಕನಿಕರ ಮತ್ತು ವ್ಯಥೆಯನ್ನು ವ್ಯಕ್ತಪಡಿಸಿದರು.

ಆಗ ನಾನು ನೀವು ಇಲ್ಲಿ ತಪ್ಪು ಮಾಡಿದ್ದೀರಿ ಎಂದು ಹೇಳಿದಾಗ ಅವರು ನನ್ನದೇನು ತಪ್ಪು? ಎಂದು ಮರು ಪ್ರಶ್ನೆ ಮಾಡಿದರು. ಹೋಮಿಯೋಪತಿ ವೈದ್ಯನ ಪ್ರಕರಣದಲ್ಲಿ ನೀವು ನಿಮ್ಮ ರೋಗಿಗಳನ್ನು ಆ ವೈದ್ಯನಲ್ಲಿ ಕ್ರಮಬದ್ಧವಾಗಿ ಕಳುಹಿಸುತ್ತಾ ಇದ್ದಿರಿ ಅವನು ಹಣ ಪಡೆದು ಚಿಕಿತ್ಸೆ ನೀಡುತ್ತಾನೆ. ಅವನ ಚಿಕಿತ್ಸಾ ರಹಸ್ಯವನ್ನು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ ಆದರೆ ಕಟ್ಟಿಗೆ ಒಡೆಯುವ ವ್ಯಕ್ತಿಯ ಹಾಗೆ ಕಾಣುವ ನಿರಕ್ಷರಿ ವ್ಯಕ್ತಿಯು ಉಚಿತವಾಗಿ ಚಿಕಿತ್ಸೆ ನೀಡಿರುತ್ತಾನೆ. ಚಿಕಿತ್ಸೆ ನಿಮ್ಮ ಎದುರಿಗೆ ಸಾಭೀತಾಗಿದೆ. ನೀವು ಅವನೊಂದಿಗೆ ಸಮಾನವಾಗಿ ನಡೆದುಕೊಳ್ಳಬೇಕಾಗಿತ್ತು. ಅವನ ವಿಳಾಸವನ್ನು ಪಡೆದು ಇನ್ನು ಮುಂದೆ ಇಂತಹ ಚರ್ಮ ರೋಗಿಗಳು ನಿಮ್ಮಲ್ಲಿ ಬಂದರೆ ಅವನ ವಿಳಾಸಕ್ಕೆ ಅವರನ್ನು ಕಳುಹಿಸಬೇಕಾಗಿತ್ತು. ಇಲ್ಲವೆ ತಿಂಗಳಿಗೆ ಒಂದು ಬಾರಿ ಅವನೇ ನರ್ಸಿಂಗ್ ಹೋಮ್‌ಗೆ ಬಂದು ಉಚಿತ ಔಷಧಿ ನೀಡಲು ಅವಕಾಶ ನೀಡಬೇಕಾಗಿತ್ತು ಅದರ ಬದಲು ಅವನ ಚಿಕಿತ್ಸೆಯ ರಹಸ್ಯವನ್ನು ತಿಳಿದುಕೊಳ್ಳಲು ಒತ್ತಾಯ ಮಾಡಿರಿ ಇದು ತಪ್ಪು, ಅಲ್ಲವೇ? ಎಂದು ಪ್ರಶ್ನೆ ಮಾಡಿದೆ. ಆಗ ಅವರ ಕಣ್ಣಲ್ಲಿ ಮಿಂಚು ಹೊಳೆಯಿತು ಹೌದು ಹಾಗೆ ಮಾಡಬಾರದಾಗಿತ್ತು ಎಂದು ಒಪ್ಪಿಕೊಂಡರು.

ಇಂದು ಈ ಸೂಕ್ಷ್ಮವನ್ನು ನಮ್ಮ ಎಂ.ಬಿ.ಬಿ.ಎಸ್ ವೈದ್ಯರು ಅರ್ಥ ಮಾಡಿಕೊಳ್ಳಬೇಕು. ಇದೇ ಪ್ರಕಾರ ಸರ್ಕಾರವು ಅರ್ಥ ಮಾಡಿಕೊಳ್ಳಬೇಕು ಆಯುರ್ವೇದ ಮತ್ತು ವಂಶಪಾರಂಪಾರಿಕ ವೈದ್ಯರ ಗಿಡಮೂಲಿಕೆಗಳ ರಹಸ್ಯವನ್ನು ಎಂದಿಗೂ ಕೇಳಬಾರದು. ಅದು ಅವರ ಜೀವಾಳ, ಎಂ.ಬಿ.ಬಿ.ಎಸ್ ವೈದ್ಯರು ನೀಡುವ ಔಷಧಿ ಸಿದ್ದಪಡಿಸುವ ವಿಧಿ ವಿಧಾನಗಳನ್ನು ಪೇಟೆಂಟ್ ಮಾಡಿಸಿರುತ್ತಾರೆ. ಪೇಟೆಂಟ್‌ನಿಂದ ಹಣ ಮಾಡುತ್ತಾರೆ. ಆದರೆ ಇವರು ಎಂದಿಗೂ ಪೇಟೆಂಟ್ ಮಾಡುವುದಿಲ್ಲ ಬದಲಾಗಿ ಅವರ ಔಷಧಿಯನ್ನು ಸದುಪಯೋಗ ಮಾಡುವ ವ್ಯಕ್ತಿ ಅವರಿಗೆ ದೊರೆತರೆ ಅದನ್ನು ಅವರಿಗೆ ಉಚಿತವಾಗಿ ಹೇಳಿಕೊಡುತ್ತಾರೆ. ಆ ವ್ಯಕ್ತಿಯಲ್ಲಿ ವಿಶ್ವಾಸವಿಲ್ಲದಿದ್ದರೆ ಹೇಳುವುದಿಲ್ಲ. ಅವರು ವಿಶ್ವಾಸವನ್ನು ಹಣಕ್ಕಾಗಿ ಮಾರಿಕೊಳ್ಳುವುದಿಲ್ಲ. ಕಾರಣ ಅವರಿಗೂ ಅವರ ರಹಸ್ಯಕ್ಕೂ ಗೌರವ ಕೊಡಬೇಕು. ವಂಶಪಾರಂಪಾರಿಕ ವೈದ್ಯರು ಈ ಖಾಯಿಲೆಗೆ ಇಷ್ಟು ಹಣ ಎಂದು ನಿಗದಿ ಮಾಡುವುದಿಲ್ಲ. ಹೀಗಾಗಿ ಅವರಿಗೆ ಹೆಚ್ಚಿನ ಗೌರವ ನೀಡಬೇಕು. ಅವರ ಮಾನವೀಯತೆಗೆ ಗೌರವ ನೀಡಬೇಕು. ವಂಶಪಾರಂಪಾರಿಕ ವೈದ್ಯರಿಗೆ ಸರ್ಕಾರ ಅಧಿಕೃತ ಮನ್ನಣೆ ನೀಡಬೇಕು, ಸ್ಥಳೀಯ ಆಡಳಿತ ಅವರ ಮನೆ ಬಾಗಿಲಿಗೆ ಹೋಗಿ ಅವರನ್ನು ಭೇಟಿಯಾಗಬೇಕು, ಅವರಿಗೆ ಯಾವ ಯಾವ ಮೂಲಭೂತ ಸೌಕರ್ಯ ಬೇಕು ಎಂಬ ಬಗ್ಗೆ ಸ್ಥಳೀಯ ಸರ್ಕಾರಗಳು/ತಾಲ್ಲೂಕು ಪಂಚಾಯ್ತಿಗಳು/ಜಿಲ್ಲಾ ಪಂಚಾಯ್ತಿಗಳು ಚಿಂತಿಸಿ ಅವರ ಮನೆ ಬಾಗಿಲಿಗೆ ಹೋಗಿ ಆ ಸೌಲಭ್ಯವನ್ನು ಅವರಿಗೆ ನೀಡಲು ಪ್ರಯತ್ನಿಸಬೇಕು.

## [ii] <u>ವೈದ್ಯರ ವೃತ್ತಿ ದೋಷ ಮತ್ತು ನಿವಾರಣೆ</u>

ಒಬ್ಬ ವೈದ್ಯನು ತುಂಬಾ ಜಾಣನಿದ್ದಾನೆ. ಅವನು ಎಲ್ಲರ ಆರೋಗ್ಯ ಸರಿಪಡಿಸುತ್ತಾನೆ. ಅವನು ವಾಸವಾಗಿರುವುದು ಒಂದು ಹಳ್ಳಿ, ಅಲ್ಲಿಯ ಜನಸಂಖ್ಯೆ ಸುಮಾರು ೧೦೦೦–೨೦೦೦. ಅವನು ಎಲ್ಲರಿಗೂ ಎಲ್ಲ ರೀತಿಯಿಂದ ಸರಿಯಾದ ತಿಳುವಳಿಕೆ ಹೇಳಿ ಎಲ್ಲರ ಆರೋಗ್ಯ ಸುಧಾರಿಸುತ್ತಾನೆ. ನಾವು ಅವರಿಗೆ ತುಂಬಾ ಕೃತಜ್ಞರಾಗಿದ್ದೇವೆ. ಅವರಿಗಾಗಿ ಒಂದು ಸನ್ಮಾನ ಸಮಾರಂಭವನ್ನು ಮಾಡುತ್ತೇವೆ ಅವರನ್ನು ಹಾಡಿ ಹೊಗಳುತ್ತೇವೆ. ಆ ಸಮಾರಂಭದಲ್ಲಿ ಒಂದು ಸಮಸ್ಯೆ ಪರಿಹಾರವಾಯಿತು ಎಂದು ಸಂತೋಷಪಡುತ್ತೇವೆ ಇಲ್ಲಿ ಇನ್ನೊಂದು ಸಮಸ್ಯೆ ಹುಟ್ಟಿದೆ ಅದನ್ನು ಆಡಳಿತಗಾರರು ಅರಿತುಕೊಳ್ಳಬೇಕು. ಅದು ಏನೆಂದರೆ ಆ ವೈದ್ಯನಿಗೆ ವೈದ್ಯಕೀಯ ವೃತ್ತಿ ಒಂದನ್ನು ಹೊರತುಪಡಿಸಿ ಬೇರೆ ಕೆಲಸ ಕಾರ್ಯ ಮಾಡಲು ಬರುವುದಿಲ್ಲ. ಎಲ್ಲರೂ ಆರೋಗ್ಯವಂತರಾಗಿರುವುದರಿಂದ ಅವನ ವೈದ್ಯನ ಜ್ಞಾನವು ಯಾರಿಗೂ ಬೇಕಾಗಿಲ್ಲ. ಈಗ ಅವನು ಊರಿಗೆ ಉಪಕಾರಿಯಾದರೂ ಅವನು ನಿರುದ್ಯೋಗಿ ಅವನ ಜೀವನ ನಿರ್ವಹಣೆಯು ಅವನಿಗೆ

ಹೊರೆಯಾಯಿತು. ಅದನ್ನು ಪರಿಹರಿಸಲು ಅವನು ಬೇರೆ ಬೇರೆ ಉದ್ಯೋಗಕ್ಕೆ ಹೊಂದಿಕೊಳ್ಳಬೇಕಾಗುತ್ತದೆ, ಆಗ ಅವನ ವೈದ್ಯ ವೃತ್ತಿಯ ಪರಿಣತಿಯು ನಶಿಸಿ ಹೋಗುತ್ತದೆ. ಪುನ: ಆರೋಗ್ಯದ ಸಮಸ್ಯೆ ಬಂದಾಗ ಅವನಲ್ಲಿ ರೋಗ ಪರಿಹರಿಸುವ ಶಕ್ತಿ ಇರಲಾರದು. ಇದು ಕ್ಲಿಷ್ಟಕರ ಸಮಸ್ಯೆ ಅಲ್ಲವೆ?

ಈ ಬಗ್ಗೆ ಆಡಳಿತಗಾರರು ಲಕ್ಷ್ಯವಹಿಸದೇ ಇರುವುದರಿಂದ ಜನರ ಆರೋಗ್ಯ ತುಂಬಾ ಕೆಡುತ್ತಲಿದೆ ಹಾಗೂ ಆರೋಗ್ಯವು ಇಂದು ಉತ್ತಮ ವ್ಯಾಪಾರಿ ವಸ್ತು ಆಗಿರುತ್ತದೆ. ಉದಾಹರಣೆಗೆ ಬೆಂಕಿಯನ್ನು ನಂದಿಸಬೇಕಾದಲ್ಲಿ ಮೊದಲು ಬೆಂಕಿಗೆ ದಹಿಸುವಂತಹ ವಸ್ತುಗಳನ್ನು ಅಲ್ಲಿಂದ ದೂರವಾಗಿಡಬೇಕು. ನಂತರ ಬೆಂಕಿಗೆ ನೀರನ್ನು ಹಾಕಬೇಕು ಅಥವಾ ಎರಡು ಕೆಲಸಗಳನ್ನು ಒಟ್ಟಿಗೆ ಮಾಡಬೇಕು. ಈ ತತ್ವದ ಅಡಿಯಲ್ಲಿ ಆಯುರ್ವೇದ ವೈದ್ಯರು ಮೊದಲು ರೋಗಿಗೆ ಪಥ್ಯ ಹೇಳುತ್ತಾರೆ. ಹೀಗೆ ಪಥ್ಯಮಾಡುವುದರಿಂದ ರೋಗ ಉಲ್ಬಣವಾಗಲಾರದು. ನಂತರ ಔಷಧಿ ನೀಡುತ್ತಾರೆ. ಔಷಧಿಗೆ ಎಷ್ಟು ಮಹತ್ವವಿದೆಯೋ ಅಷ್ಟೇ ಮಹತ್ವ ಪಥ್ಯಕ್ಕೂ ಇದೆ. ಸರಿಯಾಗಿ ಪಥ್ಯ ಮಾಡಿದಲ್ಲಿ ರೋಗ ಕೂಡಲೇ ನಿಯಂತ್ರಣಕ್ಕೆ ಬರುತ್ತದೆ.

ಇದನ್ನು ನಮ್ಮ ಆಧುನಿಕ ವೈದ್ಯರು ತಾತ್ವಿಕವಾಗಿ ಒಪ್ಪಿದರೂ ಪ್ರಾಯೋಗಿಕವಾಗಿ ಒಪ್ಪುವುದಿಲ್ಲ. ಆಯುರ್ವೇದ ವೈದ್ಯನು ಮೆಣಸಿನಕಾಯಿ ತಿನ್ನಲೇ ಬಾರದು ಎಂದು ಹೇಳಿದರೆ ಎಂ.ಬಿ.ಬಿ.ಎಸ್ ವೈದ್ಯನು ಮೆಣಸಿನಕಾಯಿ ತಿನ್ನಬಾರದು. ಆದರೆ ನಿಮಗೆ ಪಥ್ಯಮಾಡಲು ಸಾಧ್ಯವಾಗದಿದ್ದರೆ ಅಲ್ಪ-ಸ್ವಲ್ಪ ತಿನ್ನಿರಿ ಮತ್ತು ತೊಂದರೆಯಾದಾಗ ನಮ್ಮ ಬಳಿಗೆ ಬನ್ನಿರಿ ಎಂದು ಹೇಳುತ್ತಾರೆ. ಹೀಗೆ ಹೇಳದಿದ್ದರೆ ಈ ಆಧುನಿಕ ವೈದ್ಯನು ನಮ್ಮ ಆಯುರ್ವೇದೀಯ ವೈದ್ಯನಂತೆ ತನ್ನನ್ನು ತಾನು ನಾಶ ಮಾಡಿಕೊಳ್ಳಬೇಕಾಗುತ್ತದೆ. <u>ತನ್ನನ್ನು ತಾನು ನಾಶ ಮಾಡಿಕೊಳ್ಳದಿರುವುದೇ ವೃತ್ತಿದೋಷವಾಗಿದೆ, ನಿಜವಾಗಿಯೂ ಸಮಾಜದ ಬಗ್ಗೆ ಕಳಕಳಿ ಇರುವ ವೈದ್ಯನು ತಾನು ನಾಶ ಹೊಂದಿದರೂ ಸರಿ ಸಮಾಜಕ್ಕೆ ಒಳಿತಾಗಲಿ ಎಂದು ಭಾವಿಸುತ್ತಾನೆ.</u> ಅವನೇ ನಿಜವಾದ ಸತ್ಯ ನಿಷ್ಠ ಸಮಾಜ ಸೇವಕ ನಮ್ಮ ಸಂಸ್ಕೃತಿಯಲ್ಲಿ ಈ ವ್ಯಕ್ತಿಗಳಿಗೆ ಸ್ಥಾನಮಾನ ನೀಡಲಾಗಿತ್ತು, ಇಂದಿಗೂ ನೀಡಬೇಕಾಗಿದೆ.

ಇಂದಿಗೂ ಪಾರಂಪಾರಿಕ ವೈದ್ಯರು ಈ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿರುತ್ತಾರೆ. ಆವರು ಔಷಧಿ ನೀಡಿದಾಗ ಅದಕ್ಕೆ ಬೆಲೆ ನಿಗದಿಪಡಿಸುವುದಿಲ್ಲ. ಆದರೆ ಪಥ್ಯವನ್ನು ಕಡ್ಡಾಯವಾಗಿ ಮಾಡಲು ಒತ್ತಾಯಮಾಡುತ್ತಾರೆ. ಪಥ್ಯಮಾಡದಿದ್ದಲ್ಲಿ ತಾನು ಔಷಧಿ ನೀಡುವುದಿಲ್ಲವೆಂದು ಖಡಾಖಂಡಿತವಾಗಿ ಹೇಳುತ್ತಾರೆ ಇವರು ಸತ್ಯನಿಷ್ಠರು. ಇವರಿಗೆ ಹಣದ ಅವಶ್ಯಕತೆ ಇರುವುದಿಲ್ಲ. ಇವರು ತಮ್ಮ ಉಪಜೀವನಕ್ಕಾಗಿ ಬೇರೊಂದು ಉದ್ಯೋಗವನ್ನು ಮಾಡಿಕೊಂಡಿರುತ್ತಾರೆ. ಇವರ ಈ ಮಾನವೀಯತೆಯನ್ನು ನಾವು ಅರ್ಥಮಾಡಿಕೊಳ್ಳಲು ವಿಫಲರಾಗಿದ್ದೇವೆ. ಈ ವಂಶಪಾರಂಪಾರಿಕ ವೈದ್ಯರನ್ನು "ಗೇಲಿ" ಮಾಡಿ ಸಂತೋಷಪಡುತ್ತಿದ್ದೇವೆ. [ಅನುಬಂಧ ೫] ಸರ್ಕಾರ ಇಂದು ಸಾವಿರಾರು ಕೋಟಿ ಕೋಟಿ ಹಣ ಆರೋಗ್ಯಕ್ಕಾಗಿ ವೆಚ್ಚ ಮಾಡುತ್ತಿದೆ. ಸಮಾಜದ ಆರೋಗ್ಯ ಸುಧಾರಿಸಿದೆಯೇ? ಇಲ್ಲ, ನಮ್ಮ ಎಂ.ಬಿ.ಬಿ.ಎಸ್ ವೈದ್ಯರು ಹಳ್ಳಿಯಲ್ಲಿ ಇರಲು ಸಾಧ್ಯವೇ ಇಲ್ಲ, ಎಂದಿಗೂ ಇಲ್ಲ, ಅವರಿಗೆ ಅವರದೇ ಆದ ಸಮಸ್ಯೆಗಳಿವೆಯೇ? ಅದಕ್ಕೆ ಪರಿಹಾರವಿಲ್ಲ. ಅವರ ಸಮಸ್ಯೆ ಪರಿಹರಿಸಬೇಕಾದರೆ ಎಲ್ಲ ಹಳ್ಳಿಗಳನ್ನು ನಗರಗಳನ್ನಾಗಿ ಪರಿವರ್ತಿಸಬೇಕಾಗುತ್ತದೆ. ಅದು ಎಂದಿಗೂ ಸಾಧ್ಯವಾಗಲಾರದು.

ಪ್ರತಿ ಪ್ರದೇಶಕ್ಕೆ ಕೆಲವು ಸೀಮಿತವಾದ ರೋಗಗಳು ಇವೆ. ಇಲ್ಲಿಯ ರೋಗಗಳಿಗೆ ಅಮೇರಿಕಾದಲ್ಲಿ ಸಂಶೋಧನೆ ಮಾಡುವುದು ಸರಿಯಲ್ಲ, ಅಲ್ಲಿಂದ ಔಷಧಿ ತರುವುದು ಎಂದಿಗೂ ಸರಿಯಲ್ಲ, ಅದರ ಬದಲು ನಮ್ಮ ವಂಶಪಾರಂಪಾರಿಕ ವೈದ್ಯನನ್ನು ಈ ರೋಗಗಳಿಗೆ ಪರಿಹಾರ ನೀಡಲು ನಾವು ಪ್ರೋತ್ಸಾಹಿಸಬೇಕು, ***ಹಾಗಾದರೆ ಅವರನ್ನು ಹೇಗೆ ಪ್ರೋತ್ಸಾಹಿಸುವುದು?***

[iii] **ವಂಶ ಪಾರಂಪಾರಿಕ ವೈದ್ಯರಿಗೆ ಪ್ರೋತ್ಸಾಹಗಳು:**

೧. ವಂಶಪಾರಂಪಾರಿಕ ವೈದ್ಯರಿಗೆ ಬೇಕಾಗುವ ಗಿಡಮೂಲಿಕೆಗಳನ್ನು ಬೆಳೆಯಲು ಪ್ರತಿ ನಗರ / ಹಳ್ಳಿಯ ವ್ಯಾಪ್ತಿಯಲ್ಲಿ ಒಂದು ಪ್ರದೇಶ ನಿರ್ಧಿಷ್ಟಗೊಳಿಸಬೇಕು. ಅಲ್ಲಿ ಅವರಿಗೆ ಬೇಕಾಗುವ ಗಿಡಮರಗಳನ್ನು ಬೆಳೆಯಲು ಮತ್ತು ಅವುಗಳನ್ನು ಕಾನೂನು ಬದ್ದವಾಗಿ ಉಚಿತವಾಗಿ ಪಡೆಯುವ ಹಕ್ಕು ನೀಡಬೇಕು.

೨. ಸರ್ಕಾರದ ಆಶ್ರಯದಲ್ಲಿ ೨–೩ ವರ್ಷಕ್ಕೆ ಒಂದು ಬಾರಿ ಜಿಲ್ಲಾ ಮಟ್ಟದಲ್ಲಿ ವಂಶಪಾರಂಪಾರಿಕ ವೈದ್ಯರಿಂದ ೨–೩ ದಿನದ ಸಭೆ ನಡೆಸಿ ಪರಸ್ಪರ ಅವರು ಚರ್ಚಿಸಿ ಆಯಾ ಪ್ರದೇಶದ ಸಾಮಾನ್ಯ ರೋಗಗಳು ಮತ್ತು ಅವುಗಳ ಪರಿಹಾರಕ್ಕೆ ಕ್ರಮಗಳನ್ನು ಅವರಿಂದ ಪ್ರಕಟಿಸಬೇಕು. ಜನರಿಗೆ ಈ ಬಗ್ಗೆ ಸಮಗ್ರ ತಿಳುವಳಿಕೆ ದೊರೆಯುವಂತಾಗಲು ಸಾಮಾನ್ಯ ಜನರು ಈ ಸಭೆಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕು.

೩. ಪ್ರತಿಯೊಬ್ಬ ವಂಶಪಾರಂಪಾರಿಕ ವೈದ್ಯನು ಎಷ್ಟು ಜನರಿಗೆ ಯಾವ ರೋಗಕ್ಕೆ ಔಷಧಿ ನೀಡಿದರು ಅದರಲ್ಲಿ ಎಷ್ಟು ಜನರು ಗುಣಮುಖರಾದರು ಎಂಬ ಬಗ್ಗೆ ದಾಖಲೆಗಳನ್ನು ಇಡಲು ಅವರಿಗೆ ಕಡ್ಡಾಯಗೊಳಿಸಬೇಕು. ಅವರ ವೈದ್ಯ ಪದ್ದತಿಯನ್ನು ಅವರದೇ ಆದ ವಿಧಾನದ ಮೂಲಕ ಅವರೇ ಸಂಶೋಧನೆ ಮಾಡಿಕೊಳ್ಳಲು ಅವರಿಗೆ ಸಹಾಯ ನೀಡಬೇಕು. ಅವರ ಸಂಶೋಧನೆಗಳನ್ನು ಎಂ.ಬಿ.ಬಿ.ಎಸ್‌ದೊಂದಿಗೆ ಹೋಲಿಸಬಾರದು, ಅಲೋಪತಿಕ್ ವಿಧಾನದಲ್ಲಿ ಸಂಶೋಧನಾತ್ಮಕ ಪ್ರಯೋಗಗಳನ್ನು ಮಾಡುವಾಗ ಕೆಲವು ಜನರು ಪ್ರಾಣ ತ್ಯಾಗಮಾಡಿದ್ದಾರೆ. ಅದೇ ಪ್ರಕಾರ ಇಲ್ಲಿಯೂ ಆಗಬಹುದು ಆಗ ಅವರನ್ನು ಕೊಲೆಗಾರರು ಎಂದು ಪಟ್ಟ ಕಟ್ಟಿ ಅವರನ್ನು ಅವಹೇಳನ ಮಾಡಬಾರದು.

೪. ಇವರು ತಮ್ಮದೇ ಆದ ವೃತ್ತಿಪರ ತ್ರೈಮಾಸಿಕ ಪತ್ರಿಕೆಯನ್ನು ಹೊಂದಿರಬೇಕು ಆಗ ವೃತ್ತಿ ದೋಷ ನಿವಾರಣೆಯಾಗುತ್ತದೆ. ನಮ್ಮ ಸಂಸ್ಕೃತಿಯ ಹಿರಿಮೆ ನಮಗೆ ಆಗುತ್ತದೆ. ನಾವು ನಮ್ಮ ಯಾವುದೇ ಗಿಡಮೂಲಿಕೆಯನ್ನು ಪೇಟೆಂಟ್ ಮಾಡಿಸುವುದು ಬೇಡ ಮತ್ತು ಮಾರಾಟ ಮಾಡುವುದು ಬೇಡ. ಬೇರೆಯವರ ಔಷಧಿ ಖರೀದಿಸುವುದು ಬೇಡ, ನಮ್ಮ ಈ ಜೀವನ ವಿಧಾನವನ್ನು ಹೊರಗಿನವರು ಅಳವಡಿಸಿಕೊಂಡರೆ ಅದೇ ನಮ್ಮ ಭಾಗ್ಯ.

೫. ಇನ್ನು ಸಂಶೋಧನೆಗಳನ್ನು ಪ್ರಾರಂಭಿಸುವ ಮೊದಲು ನಾವು ನಮ್ಮನ್ನು ಪರಿಶೀಲಿಸಬೇಕು (ಸೆಲ್ಫ್ ಅಸ್ಸೆಸ್‌ಮೆಂಟ್) ನಾವು ನಮ್ಮನ್ನು ಹೇಗೆ ಪರಿಶೀಲಿಸಿಕೊಳ್ಳಬೇಕು ಸಧ್ಯಕ್ಕೆ ನಮ್ಮಲ್ಲಿ ಬುದ್ಧಿಶಕ್ತಿ ಯಾವ ಯಾವ ಮಟ್ಟದಲ್ಲಿ ಇದೆ ಎಂಬುದನ್ನು ಕಂಡುಕೊಳ್ಳಬೇಕು. ಇದಕ್ಕಾಗಿ ೪–೫ ವರ್ಷ ಸಮಯ ಹಿಡಿಯಬಹುದು.

೬. ಉದಾಹರಣೆಗೆ ಅರ್ಧಾಂಗವಾಯು: ಕೆಲವು ಹಳ್ಳಿಗಳಲ್ಲಿ ಅರ್ಧಾಂಗವಾಯುಗೆ ಔಷಧಿ ನೀಡುವವರು ಇದ್ದಾರೆ. ಹೀಗೆ ಎಷ್ಟು ಅವಧಿಯಲ್ಲಿ ಎಷ್ಟು ಜನರು ಔಷಧಿ ಪಡೆದರು ಅವರಲ್ಲಿ ಎಷ್ಟು ಮಂದಿ ಗುಣಮುಖರಾದರು ಎಂಬುದರ ಬಗೆ ದಾಖಲೆ ಇಡುವಂತೆ ವ್ಯವಸ್ಥೆ ಮಾಡಬೇಕು. ಹೀಗೆ ಸಾಮಾನ್ಯ ಜನರು ದಾಖಲೆ ಇಟ್ಟು ತರುವಾಯ ಔಷಧಿ ಪಡೆದವರಲ್ಲಿ ೫೦%ಕ್ಕಿಂತ ಹೆಚ್ಚಿಗೆ ಜನ ರೋಗಿಗಳು ಗುಣಮುಖರಾಗಿರುವರು ಕಂಡುಬಂದಲ್ಲಿ ಆಗ ಸ್ವಲ್ಪ ಬುದ್ದಿವಂತರು ಅದನ್ನು ವೈಜ್ಞಾನಿಕವಾಗಿ ಪರಿಶೀಲಿಸಬೇಕು. ಪ್ರತಿ ಹಂತದಲ್ಲಿ ಸಾಮಾನ್ಯ ಜನರು ಭಾಗವಹಿಸುವುದರಿಂದಲೇ ವಿಜ್ಞಾನ ಪ್ರಗತಿಯಾಗುತ್ತದೆ. ಅರ್ಧಾಂಗವಾಯುನಲ್ಲಿ ೧, ೨, ೩ ಹಂತಗಳು ಇವೆ ಇವುಗಳಲ್ಲಿ ಯಾವ ಹಂತದವರಿಗೆ ಈ ಔಷದಿ ಪರಿಣಾಮಕಾರಿ ಎನ್ನುವುದನ್ನು ನಂತರ ತಜ್ಞರು ಕಂಡುಕೊಳ್ಳಬೇಕು. ಆದರೆ ಅವರ ಔಷದಿಯ ರಹಸ್ಯ ಎಂದಿಗೂ ಕೇಳಬಾರದು ಕೇಳಬಾರದು ಕೆಲವು ಹಂತದಲ್ಲಿ ಅದು ಪರಿಣಾಮಕಾರಿ ಎಂದು ಕಂಡು ಬಂದಲ್ಲಿ ಅವರಿಗೆ ಆರ್ಥಿಕೇತರ ಪ್ರೋತ್ಸಾಹ ನೀಡಬೇಕು.

೭. ಉದಾಹರಣೆಗೆ ನಮ್ಮಲ್ಲಿ ಇರುವ ಸ್ಥಳಿಯ ವಿಜ್ಞಾನಿಗಳು ಹಾವು ಕಡಿದವರಿಗೆ ಔಷಧಿ ನೀಡಿ ಅಥವಾ ಮಂತ್ರ ಹೇಳಿ ಗುಣಪಡಿಸುವುದಾಗಿ ಹೇಳುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಇದರಲ್ಲಿ ಎಷ್ಟು ಸತ್ಯ ಎಷ್ಟು ಮಿತ್ಯ ಎಂಬುದನ್ನು ನಮ್ಮ ಸ್ಥಳೀಯ ಜನರು ತಮಗೆ ತಿಳಿದಂತೆ ಪರೀಕ್ಷಿಸಬೇಕು. ಅದಕ್ಕಾಗಿ ಯಾವುದೇ ವಿಶೇಷ ತಜ್ಞರು, ಪರಿಣಿತರು, ವಿದೇಶಿ ಸಹಾಯಕರು ಬೇಕಾಗಿಲ್ಲ. ಜನ ಸಾಮಾನ್ಯರು ಮೊದಲು ಕುರಿ, ನಾಯಿ, ಮೊಲ ಇತ್ಯಾದಿಗಳಿಗೆ ಹಾವಿನ ವಿಷವನ್ನು ನೀಡಿ ಸ್ಥಳೀಯರ ಔಷದಿ ಅಥವಾ ಮಂತ್ರದಿಂದ ವಿಷ ಪರಿಣಾಮಕಾರಿ ಕಡಿಮೆಯಾಗಿದೆ ಎಂದು ಪರೀಕ್ಷೆ ಮಾಡಿನೋಡಲು ಅವಕಾಶವಿರಬೇಕು. ಈ ಸ್ಥಳೀಯ ವ್ಯಕ್ತಿಯ ಔಷಧಿಯಲ್ಲಿ/ಮಂತ್ರ ಶಕ್ತಿಯಲ್ಲಿ ಸತ್ವ ಇದೆ ಎಂದು ಶ್ರೀಸಾಮಾನ್ಯರ/ದಡ್ಡರ ೫-೬ ಜನರ ಗುಂಪು ಹೇಳಿದ ನಂತರವೇ ಬುದ್ಧಿವಂತರು ಅದನ್ನು ಪರೀಕ್ಷಿಸಬೇಕು. ಆದರೆ ಬುದ್ಧಿವಂತರು ಮುಂದುವರೆದು ತಮ್ಮ ಅತೀ ಬುದ್ಧಿಯಿಂದ ನಮ್ಮ ಸ್ಥಳೀಯ ವಿಜ್ಞಾನಿಗಳನ್ನು ಭೇಟಿಯಾಗಿ ನೀನು ಹೇಗೆ ಮಾಡಿದೆ? ಈ ಔಷಧಿ ಎಲ್ಲಿಂದ ಬಂದಿತು? ಯಾವ ವಸ್ತು ಉಪಯೋಗಿಸುತ್ತೀಯಾ? ಇತ್ಯಾದಿ ಪ್ರಶ್ನೆಗಳನ್ನು ಮಾಡಿ ಅವರನ್ನು ಅಪಮಾನ ಮಾಡಿ ಅವರ ಮನೋಶಕ್ತಿಯನ್ನು ನಾಶಮಾಡಬಾರದು ಬದಲು ಹಾವು ಕಚ್ಚಿದವನ ಮೇಲೆ ಔಷಧಿಯಿಂದ ಪರಿಣಾಮ ಉಂಟಾಯಿತೋ ಇಲ್ಲವೋ ಎಂಬುದನ್ನು ಮಾತ್ರ ಪ್ರಥಮ ಹಂತದಲ್ಲಿ ಸಾಕ್ಷಿಯಾಗಿ ನೋಡಬೇಕು.

೮. ಗದಗ ಜಿಲ್ಲೆಯಲ್ಲಿ ಸುಮಾರು ೬೦ ವರ್ಷಗಳ ಹಿಂದೆ ವಾಸವಾಗಿದ್ದ ಶ್ರೀ ಚನ್ನಬಸಪ್ಪನವರು, ಯಾತಾಳಿ ಶ್ರೀ ಚನ್ನಬಸಪ್ಪ ಎಂದು ಪ್ರಸಿದ್ದರಾಗಿದ್ದರು ಅಂದು ಅವರು ಅನೇಕ ಹಳ್ಳಿಗಳಲ್ಲಿ ನಾಗರ ಕಟ್ಟೆಗಳನ್ನು ನಿರ್ಮಿಸಿರುತ್ತಾರೆ. ಹಾವು ಕಡಿದವರು ಆ ಕಟ್ಟೆಗೆ ಸುತ್ತು ಹಾಕಿದರೆ ಅದರ ವಿಷ ಇಳಿಯುತ್ತದೆ ಎಂದು ಈಗಲೂ ಹೇಳಲಾಗುತ್ತದೆ. ಅದು ಹಾಗಿದ್ದರೆ ಎಷ್ಟು ಜನರು ಹಾವಿನ ಕಡಿತದ ತರುವಾಯ ಹಾವಿನ ವಿಷವನ್ನು ಕಡಿಮೆ ಮಾಡುವ ಸಲುವಾಗಿ ಈ ಕಟ್ಟೆಗಳಿಗೆ ಸುತ್ತು ಹಾಕಿದರು ಅವರಲ್ಲಿ ಎಷ್ಟು ಜನ ಬದುಕಿದರು ಎಂಬುದನ್ನು ಅಲ್ಲಿಯ ಶ್ರೀ ಸಾಮಾನ್ಯನ ಅಂದರೆ ತಲಾಠಿ / ಗ್ರಾಮ ಪಂಚಾಯ್ತಿ ಕಾರಕೂನರು ಸದಸ್ಯರು ಆಸಕ್ತಿ ಇರುವ ಖಾಸಗಿ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಈ ಬಗ್ಗೆ ದಾಖಲೆ ಇಡಬೇಕು ಹೀಗೆ ಇವರು ದಾಖಲೆ ಇಟ್ಟ ತರುವಾಯ ಒಂದು ಪಕ್ಷ ೫೦-೬೦% ಜನರು ಹಾವು ಕಡಿತದ ನಂತರ ಈ ಕಟ್ಟೆಗಳಿಗೆ ಪ್ರದಕ್ಷಿಣೆ ಹಾಕಿದ ತರುವಾಯ ಬದುಕಿದ್ದಾರೆ ಎಂದು ಶ್ರೀಸಾಮಾನ್ಯರು ವರದಿ ಮಾಡಿದರೇ ತಜ್ಞರು ಅವುಗಳನ್ನು ಪುನ: ಪರೀಕ್ಷಿಸಿ ದೃಢಪಡಿಸಬೇಕು, ಇಲ್ಲವೆ ನಿರಾಕರಿಸಬೇಕು. ನಂತರ ಇತರ ಪ್ರಾಣಿಗಳಿಗೂ ವಿಷದ ಇಂಜಕ್ಷನ್ ಚುಚ್ಚಿ ಅವುಗಳನ್ನು ಆ ನಾಗರಕಟ್ಟೆಗೆ ಸುತ್ತು ಹಾಕಿಸಿದರೆ ಅವು ಕೂಡ ವಿಷದ ಪ್ರಭಾವದಿಂದ ಮುಕ್ತವಾಗಬಹುದೇ? ಎಂಬ ಬಗ್ಗೆ ಸಂಶೋಧಿಸಿ ಪ್ರಕಟಪಡಿಸಬೇಕು.

೯. ಇದೇ ಪ್ರಕಾರವಾಗಿ ಕಾಮಾಲೆ, ಏಡ್ಸ್, ಹಲ್ಲುನೋವು ಇತ್ಯಾದಿಗಳಿಗೆ ಔಷಧಿ ನೀಡುವ ಸ್ಥಳೀಯ ವೈದ್ಯರ ಸತ್ಯಾಸತ್ಯತೆಯನ್ನು ಇಂದು ಪರೀಕ್ಷಿಸ ಬೇಕಾಗಿದೆ. ಅವರಲ್ಲಿ ಸತ್ಯ ಇದ್ದರೆ ಅವರಿಗೆ ಪ್ರೋತ್ಸಾಹ ನೀಡಬೇಕಾಗಿದೆ ಅವರಿಂದ ೧೦%, ೧೫% ಪ್ರಯೋಜನವಿದ್ದಲ್ಲಿ ಅವರನ್ನು ನಿರ್ಬಂಧಿಸಬೇಕಾಗುತ್ತದೆ. ಇಲ್ಲವೆ ಅವರು ನೀಡುವ ಉಪಚಾರ ಪದ್ಧತಿಯಲ್ಲಿ ಸುಧಾರಣೆ ಉಂಟಾಗಲು, ವಿಧಿವಿಧಾನಗಳನ್ನು ಕಂಡುಹಿಡಿಯಲು ಅವರಿಗೆ ಸಹಾಯ ಸಹಕಾರ ನೀಡಬಹುದಾಗಿದೆ ಒಂದು ಪಕ್ಷ ಈ ವಂಶಪರಂಪರಾಗತ ವೈದ್ಯರಿಂದ ಔಷದಿ ಪಡೆದವರಲ್ಲಿ ಗುಣಮುಖಹೊಂದಿದ ಜನರು ೫% ಅಥವಾ ಕಡಿಮೆ ಎಂದು ಈ ಅಧ್ಯಯನದಿಂದ ಕಂಡುಬಂದರೆ ಆಗ ಆ ವೈದ್ಯಪದ್ಧತಿಯನ್ನು ಕಡ್ಡಾಯವಾಗಿ ನಿರ್ಬಂಧಿಸಬೇಕಾಗುತ್ತದೆ.

ಇದೇ ಪ್ರಕಾರವಾಗಿ ಪ್ರಾಣಿ ಪಕ್ಷಿಗಳ ಆರೋಗ್ಯವನ್ನು ಸಂರಕ್ಷಿಸುವ (veternary service) ಸಂಪ್ರದಾಯಿಕ ವಿಧಿವಿಧಾನಗಳನ್ನು ಮತ್ತು ಸಸ್ಯಗಳ ಪಾಲನೆ ಮಾಡುವ, ಅರಣ್ಯವನ್ನು ಸಂರಕ್ಷಿಸುವ ಸಾಂಪ್ರದಾಯಿಕ ವಿಧಿವಿಧಾನಗಳ ಬಗ್ಗೆ ಗುರುತಿಸುವ ಪ್ರೋತ್ಸಾಹಿಸುವ ಕಾರ್ಯ ನೆಡೆಯಬೇಕಾಗಿದೆ.

[iv] **ವೈದ್ಯಕೀಯೇತರ ಸ್ಥಳೀಯ ವಿಜ್ಞಾನಿಗಳನ್ನು ಗುರುತಿಸುವುದು:**

**(೧)** ಪ್ರತಿಭೆಯುಳ್ಳ ವ್ಯಕ್ತಿಗಳು : ಉದಾಹರಣೆಗೆ (ಅ) ೨೫ ಟೆಲೆಫೋನ್ ನಂಬರನ್ನು ಒಮ್ಮೆ ಓದಿ ಹೇಳಿದಾಗ ತಕ್ಷಣವೇ ಅದನ್ನು ನೆನೆಪಿನಿಂದ ಹೇಳುವವರು. (ಆ) ಒಂದು ವಸ್ತುವನ್ನು ಮುಟ್ಟದೆ ದೂರದಿಂದ ಅದರ ಸುತ್ತಳತೆ ಕರಾರುವಕ್ಕಾಗಿ ಹೇಳುವವರು ಇತ್ಯಾದಿ ಇತ್ಯಾದಿ.

**(೨)** ಇತ್ತಿಚೆಗೆ ಬೆಂಗಳೂರು ಗ್ಯಾರೇಜಿನ ಒಬ್ಬ ಶ್ರೀ ಸಾಮಾನ್ಯನು ಒಂದು ಸೋಲಾರ್ ಕಾರ್ ಸಿದ್ದಪಡಿಸಿ ಪ್ರಚಾರಗಿಟ್ಟಿಸಿದ. ನಿಜವಾಗಿಯೂ ಅವನಿಗೆ ಈ ಬಾರಿಯ ರಾಜ್ಯ ಸರ್ಕಾರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕಾಗಿತ್ತು ಮತ್ತು ಅವನಿಗೆ ಮುಂದಿನ ೫ ವರ್ಷಗಳವರೆಗೆ ಸೋಲಾರ್ ಕಾರ್ ಸಿದ್ದಪಡಿಸಿದರೆ ಎಲ್ಲ ಬಗೆಯ ಕರಗಳಿಂದ ವಿನಾಯ್ತಿ ನೀಡಬೇಕಾಗಿತ್ತು.

**(೩)** ತೆಂಗಿನ ಗಿಡ ಹತ್ತುವ ಯಂತ್ರವನ್ನು ಒಬ್ಬನು ಕಂಡು ಹಿಡಿದಿದ್ದಾರೆ ಅದಕ್ಕೆ ವ್ಯಾಪಕ ಪ್ರಚಾರ ನೀಡಬೇಕಾಗಿತ್ತು.

**(೪)** ಅಣ್ಣಿಗೇರಿಯ ಶ್ರೀ ನಡಕಟ್ಟಿನ್ ಎಂಬುವವರು ಕುಂಟೆಯ ಕುಡವನ್ನು ಹದ ಮಾಡುವ ನವೀನ ತಂತ್ರ ಕಂಡುಹಿಡಿದಿದ್ದಾರೆ ಅವರಿಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕಾಗಿತ್ತು. [ಅನುಬಂದ–೬]

**(೫)** ಕಾಲೇಜು ಶಿಕ್ಷಣ ಪಡೆಯದ ಶ್ರೀ ರತ್ನಾಕರ್ ಇವರು ವಿದ್ಯುತ್ ಜನಕಯಂತ್ರವನ್ನು ಕಂಡುಹಿಡಿದಿದ್ದಾರೆ. ಅವರಿಗೆ ರಾಜ್ಯ ಪ್ರಶಸ್ತಿ ನೀಡಬೇಕಾಗಿತ್ತು ಮತ್ತು ಅವರಿಗೆ ಮುಂದಿನ ಸಂಶೋಧನೆಗೆ ಸಹಾಯ ಸಹಕಾರ ನೀಡಬೇಕಾಗಿತ್ತು [ಅನುಬಂಧ–7].

**(೬)** ಕೆಲವರು ನೆಲದಲ್ಲಿ ನೀರು ಇರುವುದನ್ನು ಪತ್ತೆಹಚ್ಚಿ ಹೇಳುತ್ತಾರೆ. ನನ್ನ ತಾತನೂ ಕೂಡಾ ನಮ್ಮ ಹೊಲದಲ್ಲಿ ನೀರು ಬರುತ್ತದೆ ಎಂದು ಹೇಳಿದ ಅವನ ಮಾತನ್ನು ನಂಬಿ ಅದೇ ಸ್ಥಳದಲ್ಲಿ ಬಾವಿ ತೆಗೆದಾಗ ಅಲ್ಲಿ ನೀರು ಬಂದಿತು ಇದು ನಿಜ ಆದರೆ ಇಷ್ಟರಿಂದಲೇ ನನ್ನ ತಾತನನ್ನು ವಿಜ್ಞಾನಿ ಎಂದು ಹೇಳಲು ಬರುವುದಿಲ್ಲ. ಕಾರಣ ನೆಲದಲ್ಲಿ ಜಲ ಪತ್ತೆ ಹಚ್ಚುತ್ತೇವೆ ಎನ್ನುವವರು ತಮ್ಮಲ್ಲಿ ಎಷ್ಟು ಜನ ನೀರು ಪತ್ತೆ ಹಚ್ಚಲು ವಿನಂತಿಮಾಡುತ್ತಾರೆ. ಅವರ ವಿವರಗಳನ್ನು ಅನುಕ್ರಮವಾಗಿ ಬರೆಯಬೇಕು. ಅದಕ್ಕೆ ಸಾಕ್ಷಿ ಪಡೆಯಬೇಕು ನಂತರವೇ ನೀರು ಲಭ್ಯವಾಗುವ ಸ್ಥಳ ತೋರಿಸಬೇಕು. ಹಾಗೆ ಸ್ಥಳ ತೋರಿಸಿದ ತರುವಾಯ ಅವರು ಹೇಳಿದ ಸ್ಥಳದಲ್ಲಿ ಅವರು ಹೇಳಿದ ಆಳದಲ್ಲಿ, ಅವರು ಹೇಳಿದ ಪ್ರಮಾಣದಲ್ಲಿ ನೀರು ಲಭ್ಯವಾಯಿತೇ? ಎನ್ನುವುದನ್ನು ಸಾಕ್ಷಿಗಳ ಸಹಿತ ಧಾಖಲೆ ಮಾಡಬೇಕು. ಹೀಗೆ ದಾಖಲೆ ಮಾಡಿದಾಗ ಕನಿಷ್ಟ ೧೦೦ ಸ್ಥಳಗಳಲ್ಲಿ ಅವರ ಭವಿಷ್ಯವಾಣಿ ೮೦–೯೦% ಯಶಸ್ವಿಯಾಗಿದ್ದಲ್ಲಿ ಸರ್ಕಾರವು ಅವರನ್ನು ಅಧಿಕೃತ ನೀರು ಪತ್ತೆದಾರರು ಎಂದು ಮನ್ನಣೆ ನೀಡಬೇಕು ಮತ್ತು ಅವರು ತಮ್ಮ ವಿದ್ಯೆಯನ್ನು ಅಭಿವೃದ್ದಿ ಪಡಿಸಲು ತಮ್ಮದೇ ಆದ ಸಂಘ ಸಂಸ್ಥೆ ಕಟ್ಟಿಕೊಳ್ಳಲು ಪ್ರೋತ್ಸಾಹಿಸಬೇಕು. ಮುಂದೆ ಅವರು ನೀರಿನೊಂದಿಗೆ ನೆಲದಲ್ಲಿರುವ ಇತರ ಅಮೂಲ್ಯ ವಸ್ತುಗಳನ್ನು ಪತ್ತೆಮಾಡಿ ತಿಳಿಸಲು ಸಮರ್ಥರಾಗಲು ಪ್ರಯತ್ನಿಸಬೇಕು ಅದಕ್ಕಾಗಿ ಅವರು ತಮ್ಮ ಯಂತ್ರ ಸಾಮಗ್ರಿಗಳನ್ನು ಅವರೇ ಸಿದ್ದಪಡಿಸಿಕೊಳ್ಳಬೇಕು ಅವರು ನೆಲದಲ್ಲಿ ಪೆಟ್ರೋಲ್ ಎಲ್ಲಿ ದೊರೆಯುತ್ತದೆ ಎಂಬುದನ್ನು ಕಂಡುಹಿಡಿದು ತಿಳಿಸಿದರೆ ತುಂಬಾ ಸಂತೋಷ.

(೭) **ಲೆಕ್ಕ ಮಾಡುವ ಜೀವಂತ ಯಂತ್ರಗಳು:** ಕೆಲವೊಬ್ಬರು ಲೆಕ್ಕ ಮಾಡುವುದರಲ್ಲಿ ನಿಪುಣರಾಗಿರುತ್ತಾರೆ. ಸಾಮಾನ್ಯವಾಗಿ ಕ್ಯಾಲ್ಕುಲೇಟರ್‌ದಿಂದ ಮಾಡುವ ಲೆಕ್ಕಗಳನ್ನು ಬಾಯಿಪಾಠದಿಂದ ಅತೀ ಶೀಘ್ರವಾಗಿ ಮಾಡುತ್ತಾರೆ. ಈ ಬಗ್ಗೆ ಆಗಾಗ ದಿನ ಪತ್ರಿಕೆಯಲ್ಲಿ ಬರುತ್ತದೆ [ಅನುಬಂದ-೮] ಅವರನ್ನು ಮೊದಲು ಗುರುತಿಸಿ ಸನ್ಮಾನಿಸಬೇಕು. ನಂತರ ಅವರ ಕಾರ್ಯದಕ್ಷತೆ ಎಷ್ಟು ಇದೆ ಎಂದು ಪರೀಕ್ಷಿಸಿ ನೋಡಬೇಕು ನಿಜವಾಗಿಯೂ ಅವರು ಕ್ಯಾಲ್ಕುಲೇಟರ್‌ದಿಂದ ಲೆಕ್ಕ ಮಾಡುವವರಿಗಿಂತಲೂ ೧/೨ ಸಮಯದಲ್ಲಿ ಅವರು ಕ್ಯಾಲ್ಕುಲೇಟರ್ ಇಲ್ಲದೆ ಲೆಕ್ಕ ಮಾಡುತ್ತಾರೆ ಎಂದು ಖಚಿತವಾದಲ್ಲಿ ಕ್ರೀಡಾಪಟುಗಳಿಗೆ ಬ್ಯಾಂಕ್ ನೌಕರಿಗಳಲ್ಲಿ ಆಧ್ಯತೆ ನೀಡುವಂತೆ ಅವರಿಗೂ ಬ್ಯಾಂಕ್ ನೌಕರಿಗಳಲ್ಲಿ ಅವರಿಗೆ ಆಧ್ಯತೆ ನೀಡಬೇಕು. ಇಲ್ಲವೆ ಅವರಿಗೆ ಗಣಿತದಲ್ಲಿ ಇನ್ನು ಹೆಚ್ಚಿನ ತರಬೇತಿ ನೀಡಿ [ಶ್ರೀ ರಾಮಾನುಜಂ ಅವರಿಗೆ ನೀಡಿದಂತೆ] ಅವರಿಂದ ಗಣಿತದಲ್ಲಿ ಸಂಶೋದನೆಗಳನ್ನು ಮಾಡಿಸುವ ಬಗ್ಗೆ ವಿಶ್ವವಿದ್ಯಾಲಯಗಳು ಪ್ರಯತ್ನಿಸಬೇಕು. ಜ್ಞಾ.ವಿ.ತ ಸಂಘಗಳು ಪ್ರಯತ್ನಿಸಬೇಕು. [ಜ್ಞಾನ ವಿಜ್ಞಾನ, ತಂತ್ರಜ್ಞಾನ ಸಂಘ].

(೮) ನಮ್ಮ ಸಂಸ್ಕೃತಿಯಲ್ಲಿ ಅವದಾನಿಗಳು ಎಂದುಕೊಂಡವರು ಇರುತ್ತಾರೆ. ಅವರಲ್ಲಿ ಪಂಚಾವಧಾನಿಗಳು, ಅಷ್ಟಾವಧಾನಿಗಳು ಎಂದು ಇರುತ್ತಾರೆ. ಅವರು ಒಂದೇ ಸಮಯಕ್ಕೆ ನಡೆಯುವ ೫-೬ ಘಟನೆಗಳನ್ನು ಕರಾರುವಕ್ಕಾಗಿ ದಾಖಲೆ ಮಾಡುವ ಸಾಮರ್ಥ್ಯ ಹೊಂದಿರುತ್ತಾರೆ. ಅಂತವರನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸಬೇಕಾಗಿದೆ.

(೯) ಇದೇ ಪ್ರಕಾರ ಕೆಲವೊಬ್ಬರು ಜೀವಂತ ಟೇಪ್ ರೆಕಾರ್ಡ್ ಎಂದು ಕರೆಯಲಾಗುತ್ತದೆ. ಅವರು ಮಹಾಭಾರತ / ರಾಮಾಯಣವನ್ನು ಬಾಯಿಪಾಠ ಹೇಳುತ್ತಾರೆ. ಒಂದು ಬಾರಿ ಕೇಳಿದ ಪದ್ಯವನ್ನು ಚಾಚು ತಪ್ಪದೇ ಪುನ: ಹಾಡುತ್ತಾರೆ. ಅಂತಹ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಲೋಕ ಸಭೆ, ವಿಧಾನ ಸಭೆಯಲ್ಲಿ ರಿಪೋರ್ಟರ್ ಹುದ್ದೆಗೆ ನೇಮಕಾತಿ ಮಾಡಬೇಕು.

(೧೦) ಭಾರತೀಯರೊಬ್ಬರು___ಸಿಂಪ್ರಟ್ರಾನ್ ಎಂಬ ಬಹುಪಯೋಗಿ ಸಣ್ಣ ಕಂಪ್ಯೂಟರ್ ಸಿದ್ದಪಡಿಸಿರುತ್ತಾರೆ ಎಂದು ಪ್ರಚಾರ ನೀಡಲಾಯಿತು. ಅಂದು ಅತೀ ಕಡಿಮೆ ಬೆಲೆಯಲ್ಲಿ ಈ ಕಂಪ್ಯೂಟರ್ ಜನರಿಗೆ ದೊರಕುತ್ತದೆ ಎಂದು ಆಸೆ ತೋರಿಸಲಾಯಿತು. ಆದರೆ ಇಂದಿಗೂ ಅದು ಮಾರುಕಟ್ಟೆಗೆ ಬರಲಿಲ್ಲ. ಅಂತಹ ಸಂಶೋಧಕರನ್ನು ಕಾಲಕಾಲಕ್ಕೆ ಗುರುತಿಸಿ ಪ್ರೋತ್ಸಾಹಿಸಿದರೆ ಕಂಪ್ಯೂಟರ್‌ನಲ್ಲಿ ಸ್ಥಳೀಯ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತಿತು.

(೧೧) ಕೆಲ ದಿನಗಳ ಹಿಂದೆ ಬೆಂಗಳೂರಿನ ಒಬ್ಬ ವಿದ್ಯಾರ್ಥಿ ರಾಕೆಟ್ ತಂತ್ರಜ್ಞಾನದಲ್ಲಿ ಸುಧಾರಣೆ ಮಾಡಿರುತ್ತಾರೆ ಎಂದು ವರದಿಯಾಗಿತ್ತು. ಅವನ ಸಂಶೋಧನೆಗೆ ಅಮೇರಿಕಾದ ನಾಸಾ ದವರು ಹಣ ನೀಡಲು ಮುಂದೆ ಬಂದಿದ್ದರು. ಆದರೆ ವಿಧ್ಯಾರ್ಥಿಯು ರಾಷ್ಟ್ರಾಭಿಮಾನದ ಕಾರಣಕ್ಕಾಗಿ ನಾಸಾ ಅವರು ನೀಡುವ ಸಹಾಯ ನಿರಾಕರಿಸಿದರು ಎಂದು ತಿಳಿಸಿದರು. ಈ ಅನಾಮಧೇಯ ವ್ಯಕ್ತಿ ಇಂದು ಏನಾಗಿದ್ದಾರೆ ಎಂಬ ಬಗ್ಗೆ ವಿಜ್ಞಾನ, ತಂತ್ರಜ್ಞಾನ ಇಲಾಖೆಯು ವಿಚಾರಣೆ ಮಾಡಬೇಕು. ಸಹಾಯ ಸಹಕಾರ ನೀಡಬೇಕು.

(೧೨) ಇದೇ ಪ್ರಕಾರವಾಗಿ ದಿನ ಪತ್ರಿಕೆಯಲ್ಲಿ ಅಲ್ಲೊಬ್ಬ ಇಲ್ಲೊಬ್ಬ ವಿಜ್ಞಾನಿಗಳ ಬಗ್ಗೆ ಸುದ್ದಿಗಳು ಬರುತ್ತವೆ. ಅವರನ್ನು ಆಯಾ ಸ್ಥಳೀಯ ಸರ್ಕಾರಗಳು ಗುರುತಿಸಿ ಪ್ರೋತ್ಸಾಹಿಸಲು ಕಾನೂನಿನಲ್ಲಿ ಅವಕಾಶ ಮಾಡಬೇಕು.

[v] **ಆರ್ಥಿಕೇತರ ಪ್ರೋತ್ಸಾಹ :**

ವಿಜ್ಞಾನದ ಪ್ರತಿಭೆಯುಳ್ಳವರು ಲಕ್ಷಕ್ಕೆ ಒಬ್ಬರು ಇರುತ್ತಾರೆ. ಒಂದು ಊರಲ್ಲಿ ೨-೩ ಜನ ಇರಬಹುದು, ಈ ೩ ಜನರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಅಂಗವಿಕಲರು, ವೃದ್ದರಿಗೆ, ಮಾನಸಿಕ ರೋಗಿಗಳಿಗೆ ಯೋಜನೆಗಳನ್ನು ರೂಪಿಸಿದಂತೆ ಈ ವಿಜ್ಞಾನ ಪ್ರತಿಭೆ ಇರುವವರನ್ನು ಗುರುತಿಸಿ ಅವರಿಗೆ ಸ್ವಲ್ಪ ಸ್ವಾತಂತ್ರ್ಯ ಮತ್ತು ಮನ್ನಣೆ ನೀಡಬೇಕಾಗಿದೆ. ಅದರೊಂದಿಗೆ ಅವರು ಇಚ್ಚಿಸಿದರೆ ಕೆಲವು ಮೂಲಭೂತ ಸೌಲಭ್ಯಗಳನ್ನು ನೀಡಬೇಕು, ಉದಾಹರಣೆಗೆ:

೧. **ಊಟದ ವ್ಯವಸ್ಥೆ::** ಇವರಿಗಾಗಿ ವಿಶೇಷ ಊಟದ ವ್ಯವಸ್ಥೆ ಬೇಕಾಗಿರುವುದಿಲ್ಲ. ಸರ್ಕಾರವು ಅನೇಕ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿದೆ ಆ ಹಾಸ್ಟೆಲ್‌ನಲ್ಲಿ ಅವರಿಗೆ ಊಟದ ವ್ಯವಸ್ಥೆ ಮಾಡಬಹುದು ಅದೇ ಪ್ರಕಾರ ಸಮೀಪವಿರುವ ಖಾಸಗಿ ಹೋಟೆಲ್‌ನವರು ಕೂಡಾ ಆ ಊರಿನಲ್ಲಿ ಇರುವ ೧-೨ ವಿಜ್ಞಾನಿಗಳಿಗೆ ಊಟ ಉಪಹಾರ ನೀಡಬಹುದು.

೨. **ವಸತಿ:** ಇಲ್ಲಿಯೂ ಶಾಲೆ-ಕಾಲೇಜು, ದೇವಸ್ಥಾನಗಳು ಸರ್ಕಾರಿ ಹಾಸ್ಟೆಲ್, ಸ್ಥಳೀಯ ಸರ್ಕಾರಗಳು ಖಾಸಗಿ ಸೇವಾ ಸಂಘ ಸಂಸ್ಥೆ ಇತ್ಯಾದಿಗಳು ಉಚಿತವಾಗಿ ವಸತಿ ಸೌಲಭ್ಯ ನೀಡಬಹುದು.

೩. **ಸಾರಿಗೆ ಸಂಪರ್ಕ:** ಪೋಲಿಸ್ ಇಲಾಖೆಯವರು ಬೇರೆ ಊರಿಗೆ ಹೋಗಬೇಕಾದಾಗ ಅವರಿಗೆ ವಾರಂಟ್ ಲೆಟರ್ ನೀಡಲಾಗುತ್ತಿದೆ. ಅದರ ಆಧಾರದಲ್ಲಿ ಪೊಲೀಸರು ಉಚಿತವಾಗಿ ಬಸ್ಸು, ರೈಲಿನಲ್ಲಿ ಪ್ರಯಾಣ ಮಾಡುತ್ತಾರೆ. ನಂತರ ಅವರ ಇಲಾಖೆಯು ಅದನ್ನು ಪಾವತಿಸುತ್ತದೆ. ಇದೇ ಮಾದರಿಯ ಸೌಲಭ್ಯವನ್ನು ಸ್ಥಳಿಯ ಸರ್ಕಾರಗಳು, ಜಿಲ್ಲಾ ಪಂಚಾಯ್ತಿಗಳು ಸ್ಥಳೀಯ ವಿಜ್ಞಾನಿಗಳಿಗೆ ನೀಡಬೇಕು ಈ ವೆಚ್ಚ ಸ್ಥಳೀಯ ಸರ್ಕಾರ ೦.೫% ಅನುಧಾನದಲ್ಲಿ ಭರಿಸಬೇಕು. ಖಾಸಗಿ ಸಾರಿಗೆ ವಾಹನ ಹೊಂದಿದವರು ಕೂಡಾ ಉಚಿತವಾಗಿ ಇಲ್ಲವೆ ರಿಯಾಯ್ತಿ ದರದಲ್ಲಿ ಸ್ಥಳೀಯ ವಿಜ್ಞಾನಿಗಳಿಗೆ ಸೇವೆ ನೀಡಬಹುದು.

೪. **<u>ಆಕರ ಗ್ರಂಥಗಳು ಮತ್ತು ವೈಜ್ಞಾನಿಕ ದಿನಪತ್ರಿಕೆಗಳು:</u>** ಪ್ರತಿ ತಾಲ್ಲೂಕಿನಲ್ಲಿ ಇಂದು ಸಾಮಾನ್ಯವಾಗಿ ಒಂದು–ಎರಡು ಶಾಲೆ ಕಾಲೇಜುಗಳು ಇವೆ ಮತ್ತು ಅವು ಗ್ರಂಥಾಲಯವನ್ನು ಹೊಂದಿರುತ್ತವೆ. ಸ್ಥಳೀಯ ವಿಜ್ಞಾನಿಗಳಿಗೆ ಬೇಕಾದ ಗ್ರಂಥಗಳನ್ನು ಶಾಲಾ ಕಾಲೇಜುಗಳು ಖರೀದಿಸಿ ಪೂರೈಸಬೇಕು ಅವರು ಓದಿದ ತರುವಾಯ ಆ ಗ್ರಂಥಗಳು ಶಾಲೆ ಕಾಲೇಜಿಗೆ ಉಪಯೋಗಕ್ಕೆ ಬರುತ್ತವೆ. ಇದೇ ಪ್ರಕಾರ ಸ್ಥಳೀಯ ತಾಲ್ಲೂಕು/ಪಂಚಾಯ್ತಿಗಳು ಸಹ ೦.೫% ಅನುಧಾನದಲ್ಲಿ ಗ್ರಂಥ ಖರೀದಿಗಾಗಿ ಸಹಾಯ ಮಾಡಬಹುದು.

೫. **<u>ಉಪಕರಣಗಳು:</u>** ಸ್ಥಳೀಯ ವಿಜ್ಞಾನಿಗಳಿಗಾಗಿ ವಿದೇಶದಿಂದ ಉಪಕರಣಗಳನ್ನು ತರುವುದನ್ನು ಕಡ್ಡಾಯವಾಗಿ ನಿಷೇಧಿಸಬೇಕು. ಸ್ಥಳೀಯವಾಗಿ ಉಪಕರಣಗಳು ಲಭ್ಯವಿದ್ದಲ್ಲಿ ಮತ್ತು ಅವು ತತ್ಕಾಲಕ್ಕೆ ಅವರ ಉಪಯೋಗಕ್ಕೆ ಬೇಕಾದಲ್ಲಿ ಅವುಗಳನ್ನು ತಾತ್ಕಾಲಿಕವಾಗಿ ಉಪಯೋಗಿಸಲು ಅವಕಾಶ ಕೊಡಬೇಕು. ಉದಾಹರಣೆಗೆ ಮೈಕ್ರೋಸ್ಕೋಪ್, ಸೆನ್ಸಿಟಿವ್ ಬ್ಯಾಲನ್ಸ್ ಇತ್ಯಾದಿ, ಇತ್ಯಾದಿ, ಅವುಗಳನ್ನು ಮೇಲಿಂದ ಮೇಲೆ ಉಪಯೋಗಕ್ಕಾಗಿ ಬೇಕಾಗಿದ್ದಲ್ಲಿ ಅವುಗಳನ್ನು ಅವರಿಗೆ ಉಚಿತವಾಗಿ ಸಂಘ ಸಂಸ್ಥೆಗಳು ಸ್ಥಳೀಯ ಸರ್ಕಾರಗಳು, ರೋಟರಿ ಸಂಘಗಳು ಪೂರೈಸಬೇಕು ಮತ್ತು ಎಷ್ಟು ಸಾಧ್ಯವೋ ಅಷ್ಟು ಅವರ ಉಪಕರಣಗಳನ್ನು ಅವರೇ ಸಿದ್ದಪಡಿಸಿಕೊಳ್ಳಬೇಕು. ಸ್ವಂತ ಉಪಕರಣಗಳನ್ನು ಸಿದ್ದಪಡಿಸಿಕೊಳ್ಳುವವರೇ ಅತೀ ಬುದ್ದಿವಂತರು ಮತ್ತು ತಳಮಟ್ಟದ / ತಳಪಾಯದ ವಿಜ್ಞಾನಿಗಳಾಗಿರುತ್ತಾರೆ.

**<u>ಈ ವಿಜ್ಞಾನಿಗಳ ಬೇಕು ಬೇಡಿಕೆಯನ್ನು ನಮ್ಮ ಸ್ಥಳೀಯ ಸರ್ಕಾರ / ತಾಲ್ಲೂಕು ಪಂಚಾಯ್ತಿ ಅಥವಾ ಜಿಲ್ಲಾ ಪಂಚಾಯ್ತಿಗಳು ನೋಡಿಕೊಳ್ಳಬೇಕು?</u>** ಹೀಗೆ ಹೇಳಿದಾಗ ಇಂದಿನ ಸ್ಥಿತಿಯಲ್ಲಿ ಸ್ಥಳಿಯ ಸರ್ಕಾರ / ತಾಲ್ಲೂಕು ಪಂಚಾಯ್ತಿ / ಜಿಲ್ಲಾ ಪಂಚಾಯ್ತಿಗಳು ಕೊಳೆತು ನಾರುವ ಅದಕ್ಷ ಸಂಸ್ಥೆಗಳಾಗಿರುತ್ತವೆ ಎಂದು ಸಾಮಾನ್ಯವಾಗಿ ಬುದ್ಧಿವಂತರು ಅಭಿಪ್ರಾಯಪಡುತ್ತಾರೆ. (ವಿಶ್ವವಿದ್ಯಾಲಯದಿಂದ ಶಿಕ್ಷಣ ಪಡೆದವರು ಹೇಳುತ್ತಾರೆ). ನಮ್ಮ ವಿದ್ಯಾವಂತರ ದುರ್ಬಲತೆ ಇದೇ ಆಗಿದೆ. ಅದೇ ಸಮಯಕ್ಕೆ ನಮ್ಮ ರಾಜಕೀಯ ಧುರೀಣರು ಈ ವಿದ್ಯಾವಂತರು ಕೂಚುಭಟ್ಟರು ಈ ಕೂಚು ಬಟ್ಟರಿಂದ ಸಮಾಜಕ್ಕೆ ಪ್ರಯೋಜನವಿಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಹೀಗಾಗಿ ಸಾಮಾನ್ಯವಾಗಿ ವಿದ್ಯಾ ಇಲಾಖೆ ಗೋಜಿಗೆ ರಾಜಕೀಯ ಧುರೀಣರು ಹೋಗುವುದಿಲ್ಲ. ಮತ್ತು ವಿದ್ಯಾವಂತರು ರಾಜಕೀಯ ವ್ಯವಸ್ಥೆ ಸರಿಪಡಿಸಲು ಸಕ್ರೀಯವಾಗಿ ಪ್ರಯತ್ನಿಸುವುದಿಲ್ಲ. ಬದಲಾಗಿ ತಮ್ಮ ತಮ್ಮ ಪರಿಧಿಯಲ್ಲಿಯೇ ಇರುತ್ತಾರೆ ನಾವು ಈ ಸಮಸ್ಯೆಯನ್ನು ಪರಿಹರಿಸಬೇಕಾದರೆ ಸಂಶೋಧನಾ ವಿಷಯವನ್ನು ತಳಮಟ್ಟದ ಆಡಳಿತಕ್ಕೆ ನೀಡಬೇಕು, ಆಗಲೇ ಸಮನ್ವಯವಾಗುತ್ತದೆ.

ಇನ್ನು ಪ್ರಮುಖ ಅಂಶವೆಂದರೆ ವಿಜ್ಞಾನ ಬೆಳೆಯಲು ಶ್ರೀಸಾಮಾನ್ಯನ ಬೆಂಬಲ ಅವಶ್ಯಕವಾಗಿ ಬೇಕು. ಅಲ್ಲದೆ ವಿಜ್ಞಾನವು ಅಜ್ಞಾನಿಗಳ ಬಾಳಿಗೆ ಬೆಳಕು ತರಬೇಕು ಅಂತಹ ವಿಜ್ಞಾನ ಸೃಷ್ಟಿಯಾಗಬೇಕು. ಹೇಗೆ ಕಮಲವು ಕೆಸರಿನಲ್ಲಿ ಬೆಳೆಯುವುದೋ ಹಾಗೆ ವಿಜ್ಞಾನವು ಸ್ಥಳೀಯ ಸರ್ಕಾರಗಳ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿಗಳ ಆಶ್ರಯದಲ್ಲಿ ಬೆಳೆಯಬೇಕು. ಇದಕ್ಕಾಗಿ ಸ್ಥಳೀಯ ಸರ್ಕಾರಗಳು, ಜಿಲ್ಲಾ ಪಂಚಾಯ್ತಿಗಳು, ತಾಲ್ಲೂಕು ಪಂಚಾಯ್ತಿಗಳ ಮಟ್ಟದಲ್ಲಿ ಒಂದು ಸ್ವಾಯತ್ತತೆಯನ್ನು ಹೊಂದಿದ ಒಂದು ವಿಜ್ಞಾನ ಸಲಹಾ ಮಂಡಳಿ ರಚಿಸಬೇಕು. ಈ ಮಂಡಳಿಗಳು ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಆಡಳಿತಕ್ಕೆ ಸಲಹೆ ಸೂಚನೆಗಳನ್ನು ನೀಡುತ್ತಾ ಇರಬೇಕು. ಆದರೆ ಈ ಮಂಡಳಿಯ ನಿತ್ಯ ಆಡಳಿತದಲ್ಲಿ ಈ ಸಂಸ್ಥೆಗಳು ಅಂದರೆ ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ, ಸ್ಥಳೀಯ ಸರ್ಕಾರಗಳ ಹಸ್ತಕ್ಷೇಪ ಮಾಡಬಾರದು. ಆದರೆ ಈ ಸ್ವಾಯತ್ತ ಸಂಸ್ಥೆಗಳಿಗೆ ಬೇಕಾಗುವ ಹಣಕಾಸು ಸೌಲಭ್ಯವನ್ನು ಅವುಗಳು ಒದಗಿಸಬೇಕು. ಈ ಹಣಕಾಸಿನ ಸೌಲಭ್ಯ ಅಂದರೆ ಎಷ್ಟು ಎಂಬುದು ಕೂಡಾ ಒಂದು ಪ್ರಶ್ನೆ ಅದು ಅತೀ ಅತ್ಯಲ್ಪ. ಅಂದರೆ ಆಯಾ ಸಂಸ್ಥೆಗಳ ಒಟ್ಟು ಆಯವ್ಯಯದ ಶೇಕಡ ೦.೫% ಭಾಗ ಈ ಸ್ವಾಯತ್ತ ಸಂಸ್ಥೆಗಳಿಗೆ ಪ್ರತಿ ವರ್ಷ ಅನುದಾನವಾಗಿ ನೀಡಬೇಕು. ಹೀಗೆ ಪಡೆದ ಹಣವನ್ನು ಪ್ರಾರಂಭದಲ್ಲಿ ಈ ಕಾರ್ಯಗಳಿಗಾಗಿ ಉಪಯೋಗಿಸಬೇಕು.

ಸ್ಥಳೀಯ ಸರ್ಕಾರಗಳು ಸ್ಥಳೀಯ ವಿಜ್ಞಾನಿಗಳನ್ನು ಒಂದೇ ದಿನದಲ್ಲಿ ಸಂಘಟಿಸಲು ಸಾಧ್ಯವಿಲ್ಲ ಹಂತ ಹಂತವಾಗಿ ನೈಸರ್ಗಿಕವಾಗಿ ಬೆಳೆಯಲು ಸಹಜ ವ್ಯವಸ್ಥೆ ರೂಪಿಸಬೇಕು.

ಆಯವ್ಯಯದಲ್ಲಿ ಈ ಪ್ರಕಾರವಾಗಿ ಕಾದಿರಿಸಿದ ಹಣದಿಂದ ಪ್ರತಿಯೊಂದು ಜಿಲ್ಲೆಯ ವ್ಯಾಪ್ತಿಯಲ್ಲಿ ಹಾಗೂ ಸ್ಥಳೀಯ ಸರ್ಕಾರಗಳ ವ್ಯಾಪ್ತಿಯಲ್ಲಿ ಅಂದರೆ ಟಿ.ಎಂ.ಸಿ / ಸಿ.ಎಂ.ಸಿ / ಪಟ್ಟಣ ಪಂಚಾಯತಿ ಜಿಲ್ಲಾ ಪಂಚಾಯ್ತಿ ಮತ್ತು ಮಹಾನಗರ ಪಾಲಿಕೆಗಳಡಿಯಲ್ಲಿ ಮೊದಲ ವರ್ಷದಲ್ಲಿ ವಿಜ್ಞಾನ ಕೇಂದ್ರ ಸ್ಥಾಪನೆಯ ಸಲುವಾಗಿ ಸೂಕ್ತ ಸ್ಥಳ ಗುರುತಿಸಬೇಕು ಮತ್ತು ಖರೀದಿಸಬೇಕು. ಒಂದು ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯಲ್ಲಿ ಕನಿಷ್ಟ ೧೦ ಗುಂಟೆ ಪ್ರದೇಶವನ್ನು ಖರೀದಿಸಬೇಕು. ಒಂದು ಊರಿನ, ನಗರದ ಜನಸಂಖ್ಯೆ ಒಂದು ಲಕ್ಷಕ್ಕೂ ಹೆಚ್ಚಿಗೆ ಇದ್ದಲ್ಲಿ ಕನಿಷ್ಟ ಒಂದು ಎಕರೆ ಪ್ರದೇಶವನ್ನು ಈ ರೀತಿಯ ವಿಜ್ಞಾನ ಕೇಂದ್ರ ಸ್ಥಾಪನೆಗಾಗಿ ಖರೀದಿಸಬೇಕು ನಂತರ ಹೀಗೆ ಖರೀದಿಸಿದ ಸ್ಥಳದಲ್ಲಿ ಪ್ರಯೋಗಾಲಯ/ಸಂಶೋಧನೆಗಾಗಿ ಕಟ್ಟಡಗಳನ್ನು ಈ ಮೀಸಲಿಟ್ಟ ಹಣದಿಂದಲೇ ಕಟ್ಟಬೇಕು. [ವಿಜ್ಞಾನ ಸಂಸ್ಥೆಗಳು ತಮ್ಮ ಗುರಿ ಸಾಧನೆಗಾಗಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಲ್ಲಿ ರಾಜ್ಯ ಸರ್ಕಾರವಾಗಲಿ ಜಿಲ್ಲಾ ಪಂಚಾಯ್ತಿಯಾಗಲಿ ತಾಲ್ಲೂಕು ಪಂಚಾಯ್ತಿಯಾಗಲಿ ಹಸ್ತಕ್ಷೇಪ ಮಾಡಲು ಅವಕಾಶವಿರಬಾರದು]

ಈ ರೀತಿ ನಿರ್ಮಿತಗೊಂಡ ವಿಜ್ಞಾನ ಕೇಂದ್ರದಲ್ಲಿ ಬಳಸುವ ಎಲ್ಲಾ ಉಪಕರಣಗಳು ದೇಶೀಯವಾಗಿ ನಿರ್ಮಿತವಾಗಿರಬೇಕು. ಅವು ಸ್ಥಳೀಯರ ಸಂಶೋಧನೆಗಳನ್ನು ಪ್ರತಿಫಲಿಸು ವಂತಿರಬೇಕು. ಯಾವುದೇ ಕಾರಣಕ್ಕೂ ವಿದೇಶಿ ನಿರ್ಮಿತ ಅತೀ ಸೂಕ್ಷ್ಮ ಉಪಕರಣಗಳನ್ನು ಖರೀದಿಸಬಾರದು, ಅದನ್ನು ಕಡ್ಡಾಯವಾಗಿ ನಿರ್ಬಂಧಿಸಬೇಕು. ಎಲ್ಲಾ ಜಿಲ್ಲೆಯಲ್ಲಿಯೂ ಒಂದೇ

ರೀತಿಯ ಪ್ರಯೋಗಾಲಯವನ್ನು ನಿರ್ಮಿಸದೇ, ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ, ಅಲ್ಲಿಯ ಜನರ ಬುದ್ಧಿಶಕ್ತಿಯನ್ನು ಪ್ರತಿಬಿಂಬಿಸುವಂತಹ ಮತ್ತು ಅವರ ಅವಶ್ಯಕತೆಗಳಿಗೆ ಪೂರಕವಾಗಿರು ವಂತಹ ಪ್ರಯೋಗಾಲಯಗಳನ್ನು ಅವರೇ ನಿರ್ಮಿಸಿಕೊಳ್ಳಲು ಅವಕಾಶ ನೀಡಬೇಕು/ಸ್ಥಾಪಿಸಬೇಕು. ಇದಕ್ಕಾಗಿ ಸ್ಥಳೀಯ ಚಿಂತನಕಾರರನ್ನೊಳಗೊಂಡ ಒಂದು ಸಲಹಾ ಮಂಡಳಿಯನ್ನು ಹೊಂದಿರಬೇಕು.

ಪ್ರಯೋಗಾಲಯಗಳ ಸ್ಥಾಪನೆಗಾಗಿ, ಅಭಿವೃದ್ದಿಯ ಎಲ್ಲಾ ಪ್ರಕ್ರಿಯೆಗಳಲ್ಲಿ ಸಾಧ್ಯವಾದಷ್ಟು ಖಾಸಗಿ ಜನರ, ಸಹಭಾಗಿತ್ವ, ಸಲಹೆ ಮತ್ತು ದೇಣಿಗೆಗಳನ್ನು ಒಳಗೊಂಡಿರಬೇಕು. ಹಂತ ಹಂತವಾಗಿ ಅಭಿವೃದ್ಧಿ ಹೊಂದುತ್ತಾ ಹೋಗಲು ಯಾವುದೇ ಅಡೆತಡೆಗಳು ಉಂಟಾಗದಂತೆ ಸರ್ಕಾರಿ ಆಡಳಿತ ಯಂತ್ರವು ಜಾಗರೂಕತೆಯನ್ನು ವಹಿಸಬೇಕು.

ಇವುಗಳ ಆಡಳಿತದಲ್ಲಿ [ಈಗಾಗಲೇ ಈ ಲೇಖನದ ಅಧ್ಯಾಯ –೨ರಲ್ಲಿ ತಿಳಿಸಿದ ಕಾರಣಗಳಿಗಾಗಿ] ಸ್ನಾತಕೋತ್ತರ ಪದವಿ ಹೊಂದಿದವರು / ಎಂಬಿಬಿಎಸ್ ವೈದ್ಯರು ನೇರವಾಗಿ ಬಾಗವಹಿಸಲು ಅವಕಾಶವಿರಬಾರದು. ಪರೋಕ್ಷವಾಗಿ ಇವರ ಸಹಾಯದ ಅವಶ್ಯ ಬಿದ್ದರೆ ಮಾತ್ರ ಪಡೆಯಬೇಕು. ವಿಜ್ಞಾನ ಕೇಂದ್ರಗಳು ಕೇವಲ ವಿಜ್ಞಾನ ಕೇಂದ್ರಗಳಾಗಿರದೆ ಅರೆ ವೈಜ್ಞಾನಿಕ ಚಟುವಟಿಕೆಗಳನ್ನೂ ಕೈಗೊಳ್ಳಬೇಕು. ಭಾರತದ ಸಂವಿಧಾನದ ವಿಧಿ 51–ಏ [ಹೆಚ್] ದಲ್ಲಿ ನಿರ್ದೇಶಿಸಲಾದ ವೈಜ್ಞಾನಿಕ ಮನೋಭಾವನೆಯನ್ನು ಜನರಲ್ಲಿ ಬೆಳೆಯಲು ಶೇ ೦.೫ ಆಯವ್ಯಯದ ಹಣ ವೆಚ್ಚವಾಗುವಂತೆ ಆಡಳಿತ ವ್ಯವಸ್ಥೆ ರೂಪಿಸಬೇಕು.

## ಅಧ್ಯಾಯ–೫: ಪ್ರಾರಂಭದಲ್ಲಿ ಜಿಲ್ಲಾ ಪಂಚಾಯ್ತಿ/ತಾಲ್ಲೂಕು ಪಂಚಾಯ್ತಿ ಮತ್ತು ಸ್ಥಳೀಯ ಸರ್ಕಾರಗಳು ಕೈಗೊಳ್ಳಬೇಕಾದ ಕ್ರಮಗಳು:

(೧) ಅವರ ಆಡಳಿತ ವ್ಯಾಪ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಕೆಲಸ ಕಾರ್ಯಗಳನ್ನು ಒಬ್ಬ ಅಧಿಕೃತ ಅಧಿಕಾರಿ / ಸಿಬ್ಬಂದಿಗೆ ವಹಿಸಿಕೊಡಬೇಕು.

(೨) ಅತ್ಯವಶ್ಯಕ ಎನಿಸಿದಲ್ಲಿ ಒಂದು ಸಲಹಾ ಮಂಡಳಿಯನ್ನು ಆಯಾ ಪ್ರದೇಶಕ್ಕೆ ಸೀಮಿತವಾಗಿ ರಚಿಸಿಕೊಳ್ಳಬೇಕು. [೧೧ನೇ ಅಧ್ಯಾಯದಲ್ಲಿ ಈಗಾಗಲೇ ಗುರುತಿಸಲಾದ ವಿಜ್ಞಾನಿಗಳಿಂದ]

(೩) ಈ ಸಲಹಾ ಮಂಡಳಿ, ಸಲಹೆ ಸೂಚನೆ ಮೇರೆಗೆ ಪ್ರತಿ ವರ್ಷ ವಿಜ್ಞಾನ, ತಂತ್ರಜ್ಞಾನ ಅಭಿವೃದ್ಧಿ ಬಗ್ಗೆ ಯೋಜನೆ ರೂಪಿಸಲು ಅವರಿಗೆ ಸೂಚಿಸಬೇಕು.

(೪) ಹೀಗೆ ಗುರುತಿಸಿದ ಮೇಲೆ ಅವರ ಬುದ್ಧಿಮತ್ತೆಯ ಮಟ್ಟವನ್ನು ಅವರೇ ಪರಸ್ಪರ ಪರೀಕ್ಷಿಸಿಕೊಳ್ಳಲು ಮತ್ತು ಪರೀಕ್ಷೆ ಮಾಡಿ ದಾಖಲೆಗೊಳಿಸಲು ಸೂಚಿಸಬೇಕು.

(೫) ಅವರಿಗೆ ಅತ್ಯವಶ್ಯಕವಾಗಿ ಬೇಕಾಗಬಹುದಾದ ಸೌಲಭ್ಯಗಳನ್ನು (ಭೂಮಿ, ಮನೆ, ಸಾರಿಗೆ ಸೌಲಭ್ಯ, ದೂರವಾಣಿ, ಪ್ರಾಯೋಗಾಲಯ) ಒದಗಿಸಿಕೊಡಬೇಕು.

(೬) ವೃತ್ತಿಪರ, ಸಂಘಟನೆಗಳನ್ನು ವಿಜ್ಞಾನ–ತಂತ್ರಜ್ಞಾನದಲ್ಲಿ ಸಂಶೋಧನೆಗಾಗಿ ಪ್ರೋತ್ಸಾಹಿಸುವುದು (ಅ) ಉದಾಹರಣೆಗೆ ಇಟ್ಟಿಗೆ ತಯಾರಿಸುವವರು (ಆ) ಬಾರ್ ಬೆಂಡರ್ಸ್ (ಇ) ಟೈಲರ್ (ಈ) ಹಜಾಮರು (ಉ) ರಿಕ್ಷಾ ನಡೆಸುವವರು ಇತ್ಯಾದಿ, ಇತ್ಯಾದಿ. ಇವರು ವೃತ್ತಿಪರ ಸಂಘಟನೆಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡುವುದು. ಇವರೆಲ್ಲರೂ ವರ್ಷಕ್ಕೆ ಒಂದು ಬಾರಿ ಸಭೆ ಸೇರಿ ತಮ್ಮ ವೃತ್ತಿಯಲ್ಲಿ ದಕ್ಷತೆಯನ್ನು ಹೆಚ್ಚಿಸಲು ಪರಸ್ಪರ ಚರ್ಚಿಸಿ ಸಲಹೆ ಸೂಚನೆಗಳನ್ನು ನೀಡುವುದು ಮತ್ತು ಅದನ್ನು ಜಾರಿಗೊಳಿಸುವ ಜವಾಬ್ದಾರಿಯನ್ನು ಅವರೇ ವಹಿಸಿಕೊಳ್ಳಬೇಕು. ಅದಕ್ಕೆ ಬೇಕಾಗುವ ಮೂಲ ಸೌಕರ್ಯಗಳನ್ನು ಸ್ಥಳಿಯ ಸರ್ಕಾರಗಳು ಒದಗಿಸಬೇಕು. ಈ ವೃತ್ತಿಪರ ಸಂಘಟನೆಗಳು ಕೂಡಾ ತಮ್ಮ ವ್ಯವಹಾರದಲ್ಲಿ ಬರುವ ಲಾಭದಲ್ಲಿ ೦.೫% ಹಣವನ್ನು ಇಲ್ಲಿ ಬಳಸಲು ಪ್ರೋತ್ಸಾಹಿಸಬೇಕು.

(೭) ಸಂಗೀತಕಾರರಿಗೆ, ನಾಟಕಕಾರರಿಗೆ ಸ್ಥಳೀಯವಾಗಿ ಬಹುಮಾನ ನೀಡುವಂತೆ ಈ ವೃತ್ತಿಪರರು ಹೊಸ ಸಂಶೋಧಕರ ಸಂಶೋಧನೆಗಳನ್ನು ಗುರುತಿಸಿ ಸ್ಥಳೀಯವಾಗಿ ಸಭೆ ಸಮಾರಂಭಗಳನ್ನು ಏರ್ಪಡಿಸಿ ಪ್ರಶಸ್ತಿ ನೀಡುವ ಪದ್ಧತಿಯನ್ನು ಪ್ರಾರಂಭಿಸಬೇಕು.

(೮) ಕನಿಷ್ಟ ಪಕ್ಷ ಪ್ರತಿ ತಾಲ್ಲೂಕಿಗೆ ಒಂದರಂತೆ ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿ ಶಾಲಾ, ಕಾಲೇಜುಗಳ, [ವಿಶ್ವವಿದ್ಯಾಲಯದ] ಸಹಯೋಗದೊಂದಿಗೆ ಒಂದೊಂದು ಸಾರ್ವಜನಿಕ ಪ್ರಯೋಗಶಾಲೆಗಳನ್ನು ಸ್ಥಾಪಿಸಬೇಕು ಮತ್ತು ಆ ಪ್ರಯೋಗ ಶಾಲೆಯಲ್ಲಿ ತಳಮಟ್ಟದ ಸಂಶೋಧನಾ ಪ್ರತಿಭಾವಂತರಿಗೆ ತಮ್ಮ ಸಂಶೋಧನೆಯನ್ನು ಪರೀಕ್ಷಿಸಲು, ಅಭಿವೃದ್ಧಿ ಪಡಿಸಲು ಅಲ್ಲಿ ಅವಕಾಶ ನೀಡಬೇಕು.

# ಅಧ್ಯಾಯ–೬: ಪ್ರಚಾರ ಮಾಧ್ಯಮದ ಮೂಲಕ ಸಾರ್ವಜನಿಕರಿಗೆ ನ್ಯಾಯೋಚಿತವಾದ ಸಲಹೆಗಳು:

## [i] ಆಹಾರ ಪದ್ಧತಿ ಮತ್ತು ಜೀವನ ಪದ್ಧತಿ ಬಗ್ಗೆ:

(೧) ಆಹಾರ ಪದ್ಧತಿ ಮತ್ತು ಜೀವನ ಪದ್ಧತಿ ಮತ್ತು ಆರೋಗ್ಯಕ್ಕೆ ಇರುವ ಸಂಬಂಧಗಳನ್ನು ಈ ಸ್ಥಳೀಯ ಜ್ಞಾನ, ವಿಜ್ಞಾನ, ತಂತ್ರಜ್ಞಾನ ಸಮಿತಿಗಳು ಅಧ್ಯಯನ ಮಾಡಬೇಕು ಉದಾಹರಣೆಗೆ ಕೇಕು, ಬಿಸ್ಕೆಟ್ ನಂತಹ ಸಿದ್ದಪಡಿಸಿದ ತಿಂಡಿಗಳ ಸೇವನೆಯಿಂದ ದೇಹದ ಮೇಲೆ ಆಗುವ ಪರಿಣಾಮ ಮತ್ತು ದುಷ್ಪರಿಣಾಮಗಳು ಆಧುನಿಕ ಪದ್ಧತಿಯಲ್ಲಿ ಸಂಸ್ಕರಿಸಿದ ಆಹಾರದ ತಿಂಡಿತಿನಿಸುಗಳ ಸೇವನೆಯಿಂದ ಆರೋಗ್ಯದ ಮೇಲಾಗುವ ಪರಿಣಾಮಗಳ ಹಾಗೂ ಅಂತಹ ಆಹಾರ ತಯಾರಿಕಾ ಘಟಕಗಳಿಂದ ಪರಿಸರದ ಮೇಲಾಗುವ ಪರಿಣಾಮಗಳ ಬಗ್ಗೆ ಸಮೀಕ್ಷೆಮಾಡಬೇಕು ಈ ಸಮೀಕ್ಷಾ ವರದಿಯನ್ನು ಪ್ರಕಟಮಾಡಬೇಕು. ಈ ಇತ್ಯಾದಿ ಕಾರ್ಯಗಳಿಗೂ ಈ ಮೇಲಿನ ಹಣವನ್ನು ಉಪಯೋಗಿಸಬೇಕು.

(೨) ಸಿಗರೇಟ್ ಸೇವನೆ ಆರೋಗ್ಯಕ್ಕೆ ಹಾನಿಕರವೆಂದು ಸಿಗರೇಟ್ ಪ್ಯಾಕುಗಳ ಮೇಲೆ ಹೇಗೆ ಶಾಸನಬದ್ದ ಎಚ್ಚರಿಕೆ ನೀಡಲಾಗಿದೆಯೋ ಅದೇ ಮಾದರಿಯಲ್ಲಿ ಪಿಡಿಶೂರ್ ಆಹಾರವನ್ನು ಮಕ್ಕಳಿಗೆ ನೀಡಬೇಕು ಎಂದು ಟಿ.ವಿಯಲ್ಲಿ ಜಾಹೀರಾತು ಬಂದಾಗ ಹೀಗೆ ಪ್ರತಿ ಸಲ ಜಾಹೀರಾತು ನೀಡಿದಾಗಲೂ ೫ ಸೆಕೆಂಡ್‌ಗಳ ಸಮಯದಲ್ಲಿ ''ತಾಯಿಯ ಹಾಲು, ಹಣ್ಣು, ತರಕಾರಿಗಳು ಅದಕ್ಕಿಂತಲೂ ಉತ್ತಮ ಎಂಬ ಪ್ರಚಾರವನ್ನು ಅದರ ಮರುಕ್ಷಣದಲ್ಲಿಯೇ ನೀಡಬೇಕು. ಈ ಪ್ರಚಾರಕ್ಕೆ ತಗಲುವ ವೆಚ್ಚವನ್ನು ಪಿಡಿಶೂರ್ ಕಂಪನಿಯವರಿಂದಲೇ ಪಡೆಯಬೇಕು. ವಿಕ್ಸ್‌ಆಕ್ಷನ್–೫೦೦ ನೆಗಡಿಗೆ ಉಪಯೋಗಿಸಿ ಎಂದು ಪ್ರಚಾರ ಬಂದಾಗ ಅದರ ಮರುಕ್ಷಣದಲ್ಲಿಯೇ ಇದನ್ನು ಹೆಚ್ಚಿಗೆ ಉಪಯೋಗಿಸಿದರೆ ಅರ್ಧಾಂಗವಾಯು ಆಗಬಹುದು ಎಂದು ಅದೇ ಟಿ.ವಿಯಲ್ಲಿ ಎಚ್ಚರಿಕೆ ನೀಡಬೇಕು. ಗುಟ್ಕಾ ಸೇವನೆ ಬಗ್ಗೆ ಪ್ರಚಾರ ನೀಡದಾಗಲೂ ಅದಕ್ಕೆ ಪ್ರತಿ ಪ್ರಚಾರ ಕೂಡಲೇ ನೀಡಬೇಕು. ಇದೇ ಪ್ರಕಾರ ವಿವಿದ ಬಗೆಯ ಜಾಹೀರಾತುಗಳು ಬರುತ್ತಿದ್ದಂತೆ ಶಾಸನ ಬದ್ದ ಎಚ್ಚರಿಕೆ ಮತ್ತು ನ್ಯಾಯೋಚಿತವಾದ ಸಲಹೆಗಳನ್ನು ಮರು ಜಾಹೀರಾತು ಮೂಲಕ ನೀಡಲು ಅವಶ್ಯಕವಾಗಿಬೇಕಾದ ನೀತಿ ನಿಯಮ, ಕಾನೂನು ರೂಪಿಸಬೇಕು.

### [ii] ವಿಜ್ಞಾನಿಕ ಸಂಪ್ರದಾಯಗಳಿಗೆ ಮನ್ನಣೆ :

<u>**ಸಂಪ್ರದಾಯಗಳು:**</u> ಪ್ರತಿ ವರ್ಷ ಮಳೆಗಾಲದ ಪ್ರಾರಂಭದಲ್ಲಿ ಕಾಲರಾ ಮತ್ತು ಮೈ ಕೈ ನೋವು ಮತ್ತು ಜ್ವರ [ಗುದ್ದವ್ವನ ಬೇನೆ] ಸಾಮಾನ್ಯವಾಗಿ ಜುಲೈ, ಆಗಸ್ಟ ತಿಂಗಳಲ್ಲಿ ಬರುತ್ತವೆ. ಈ ಸಮಯದಲ್ಲಿ ಧಾರವಾಡ ಜಿಲ್ಲೆ ಹಿಂದುಳಿದ ಜನರಲ್ಲಿ ಸ್ಥಳೀಯ ದೇವತೆಗಳಿಗೆ ಸೇವೆ ಮಾಡುವುದು ಅಥವಾ ದೀಪ ಕೊಡುವ ಪದ್ಧತಿ ಇರುತ್ತದೆ ಈ ಪದ್ಧತಿಯಲ್ಲಿ ೬ ವಾರ ಅಂದರೆ ೧ ೧/೨ ತಿಂಗಳ ಅವಧಿಯಲ್ಲಿ ೬ ಮಂಗಳವಾರ ೬ ಶುಕ್ರವಾರಗಳಲ್ಲಿ ದೀಪ ಕೊಡುವ ಸಂಪ್ರದಾಯ ಆಚರಿಸಲಾಗುತ್ತದೆ. ಆಗ ಆ ಸಮುದಾಯದ ಎಲ್ಲರ ಮನೆಯಲ್ಲಿ ರೊಟ್ಟಿ ಮಾಡುವುದಿಲ್ಲ. ಕರಿದ, ಹುರಿದ ವಸ್ತುಗಳನ್ನು ಸಿದ್ದಪಡಿಸುವುದಿಲ್ಲ. ಹೀಗಾಗಿ ಮಹಿಳೆಯರಿಗೆ ವಿಶ್ರಾಂತಿ ದೊರಕುತ್ತದೆ. ಅಂದು ಅವರು ದೇವರ ಹೆಸರಿನಲ್ಲಿ ಮನೆಗಳನ್ನು ವಿಶೇಷವಾಗಿ ಸ್ವಚ್ಛಗೊಳಿಸುತ್ತಾರೆ ತಳಿರುತೋರಣಗಳಿಂದ ಅಲಂಕರಿಸುತ್ತಾರೆ. ಸಾರ್ವಜನಿಕ ಬೀದಿ ಮತ್ತು ಗಟಾರಗಳನ್ನು ಸಹ ಅವರೇ ಸ್ವಚ್ಚಗೊಳಿಸುತ್ತಾರೆ. ವಿಶೇಷವಾಗಿ ಮಾವು, ಬೇವುಗಳ ಎಲೆಯನ್ನು ಅಲಂಕಾರಕ್ಕಾಗಿ ಉಪಯೋಗಿಸುತ್ತಾರೆ. ಬೇವಿನ ಎಲೆಗಳನ್ನು ನೀರಿನಲ್ಲಿ ಹಾಕಿ ಕುದಿಸಿದ ಬೇವಿನ ಎಲೆಯ ರಸ ಹೊಂದಿದ ನೀರಿನಿಂದ ಸ್ನಾನಮಾಡುತ್ತಾರೆ.

ಸಾಮೂಹಿಕವಾಗಿ ಜೋಳದ ಅಂಬಲಿಯನ್ನು ಸಿದ್ದಪಡಿಸುತ್ತಾರೆ. ಹೆಚ್ಚಿನ ಪ್ರಮಾಣದಲ್ಲಿ ಉಳ್ಳಾಗಡ್ಡಿ (ಈರುಳ್ಳಿ) ಹಾಕುತ್ತಾರೆ ಮತ್ತು ಈ ಒಂದುವರೆ ತಿಂಗಳಲ್ಲಿ ೧೨ ದಿನ ಹೊಟ್ಟೆ ತುಂಬ ಅಂಬಲಿ ಮಾತ್ರ ಸೇವಿಸುತ್ತಾರೆ. ಹೀಗೆ ಮಾಡುವುದರಿಂದ ಕಾಲರಾ ನಿಯಂತ್ರಣವಾಗಿರುವುದು ಕಂಡು ಬಂದಿದೆ ಅದು ನನ್ನ ಸ್ವಂತ ಅನುಭವವೂ ಆಗಿದೆ. ಇದನ್ನು ಬುದ್ದಿವಂತರು ಮಾಡಿನೋಡಬೇಕು. ಇದರಲ್ಲಿ ಸತ್ಯ ಎಂದು ಕಂಡು ಬಂದಲ್ಲಿ ಇಂತ: ಸಂಪ್ರದಾಯಗಳಿಗೆ ಸ್ಥಳೀಯ ಸರ್ಕಾರಗಳು ಮಾನ್ಯತೆ ನೀಡಬೇಕು. [ಹಾಗೆ ಮಾನ್ಯತೆ ನೀಡುವ ಹಕ್ಕು ಸ್ಥಳಿಯ ಸರ್ಕಾರಕ್ಕೆ ಇರಬೇಕು] ಸಮುದಾಯದಲ್ಲಿ ಈ ಬಗ್ಗೆ ಹೆಚ್ಚಿನ ಪ್ರಚಾರ ನೀಡಬೇಕು ಸಮುದಾಯದಲ್ಲಿ ಇಂತಹ ಸಂಸ್ಕೃತಿಯನ್ನು ಬಲಪಡಿಸಲು ಸಹಕರಿಸಬೇಕು.

*[ಈ ಪುಸ್ತಕವನ್ನು ಏಪ್ರಿಲ್ ೨೦೦೫ರಂದು ಬರೆಯಲಾಗಿತ್ತು, ಆದರೆ ೨೦೦೬ ಜೂನ್/ಜುಲೈ/ಆಗಸ್ಟ್ ತಿಂಗಳಲ್ಲಿ ಈ ಗುದ್ದವ್ವನ ಖಾಯಿಲೆಗೆ ಚಿಕನ್‌ಗುನ್ಯ ಎಂದು ಹೆಸರು ನೀಡಲಾಗಿದೆ. ಈ ಮೊದಲು ಇದಕ್ಕೆ ಇನ್‌ಫ್ಲೂಎಂಜಾ ಎಂದು ಕರೆಯಲಾಗುತ್ತಿತ್ತು. ಅದು ಕರ್ನಾಟಕದಲ್ಲಿ ಈ ಸಲ ತುಂಬಾ ಹಾವಳಿಯನ್ನು ಮಾಡಿರುತ್ತದೆ. ಈ ಖಾಯಿಲೆಗೆ ಪರಿಹಾರವಾಗಿ ಸರ್ಕಾರವು ಸೊಳ್ಳೆಗಳನ್ನು ನಿಯಂತ್ರಣ ಮಾಡಲು ಸಾರ್ವಜನಿಕರಿಗೆ ಸಲಹೆ ನೀಡಿರುತ್ತದೆ ಹೊರತು ಸಾಂಪ್ರದಾಯಿಕ ಜ್ಞಾನದಲ್ಲಿ ತಿಳಿಸಿದಂತೆ ವಾರಕ್ಕೆ ಎರಡು ದಿನ ಉಪವಾಸ ಮಾಡಬೇಕು ಖರಿದ, ಹುರಿದ ಪದಾರ್ಥಗಳನ್ನು ತಿನ್ನಬಾರದು ಮಾಂಸಹಾರ ಸೇವಿಸಬಾರದು ಸ್ವಂತ ಮನೆ ಹಾಗೂ ಸಾರ್ವಜನಿಕ ಗಟಾರಗಳನ್ನು ಸ್ವಚ್ಚಗೊಳಿಸಬೇಕು, ಸ್ನಾನಕ್ಕೆ ಬೇವಿನ ಸೊಪ್ಪಿನ ನೀರನ್ನು ಉಪಯೋಗಿಸಬೇಕು ಎಂಬ ಎಚ್ಚರಿಕೆಯನ್ನು ನೀಡಿರುವುದಿಲ್ಲ. ನಮ್ಮ ಸಾಂಪ್ರದಾಯಿಕ ಆಚರಣೆಯಲ್ಲಿ ಈ ಎಲ್ಲ ಎಚ್ಚರಿಕೆಗಳನ್ನು ನೀಡಲಾಗಿದೆ ಎಂಬುದನ್ನು ವಿಶೇಶವಾಗಿ ಗಮನಿಸಬೇಕಾಗಿದೆ. ಅದೇ ಪ್ರಕಾರ*

೧. ನಾಗರ ಹುಣ್ಣಿಮೆಯಲ್ಲಿ ಲಾಡು ಉಂಡೆಗಳನ್ನು ಸೇವಿಸುವುದು.

೨. ದೀಪಾವಳಿಯಲ್ಲಿ ಅಭ್ಯಂಗ ಸ್ನಾನಮಾಡುವುದು.

೩. ಯುಗಾದಿ ಹಬ್ಬದಲ್ಲಿ ಬೇವು ಬೆಲ್ಲದ ಪರಿಣಾಮಗಳ ಬಗ್ಗೆ ಪರೀಕ್ಷೆ ಮಾಡಿಸಬೇಕು ಅವುಗಳಲ್ಲಿ ವೈಜ್ಞಾನಿಕ ಅಂಶಗಳು ಇವೆ ಎಂದು ಮತ್ತು ಅದರಿಂದ ೬೦% ಜನರ ಆರೋಗ್ಯ ಕಾಪಾಡಲು ಸಾಧ್ಯವಿದೆ ಎಂದು ಸಾಬೀತಾದಲ್ಲಿ ಅವುಗಳನ್ನು ಧರ್ಮದಿಂದ ಹೊರಕ್ಕೆ ತೆಗೆದು ಶಾಲೆ ಕಾಲೇಜುಗಳಲ್ಲಿ ಅಳವಡಿಸಿ ಸಾಮಾನ್ಯ ಜನರ ಸಾಮೂಹಿಕ ಮತ್ತು ಸಮುದಾಯದ ಆರೋಗ್ಯವು ಸುಧಾರಿಸಲು ಕ್ರಮ ಜರುಗಿಸಬೇಕು.

೪. ಸಣ್ಣ ಮಕ್ಕಳಲ್ಲಿ, ದಡಾರ [ಅಥವಾ ಗೊಬ್ಬರ] ಎಂಬ ಚರ್ಮರೋಗ ಬಂದರೆ ಸ್ಥಳೀಯ ದೇವತೆಗೆ ದೀಪ ಕೊಡುವುದು ಸಂಪ್ರದಾಯದಲ್ಲಿದೆ ಇಲ್ಲಿ ಸಕ್ಸಸ್ ರೇಟ್ ಲೆಕ್ಕ ಹಾಕಬೇಕು ಹೀಗೆ ದೀಪ ನೀಡಿದ ಎಷ್ಟು ಮಕ್ಕಳಲ್ಲಿ ಎಷ್ಟು ಮಕ್ಕಳ ರೋಗ ಪರಿಹಾರವಾಯಿತು ಎಂಬ ಬಗ್ಗೆ ಸಮೀಕ್ಷೆ ಮಾಡಬೇಕು. ಒಂದು ಪಕ್ಷ ಅದು ೫೦% ಕ್ಕಿಂತ ಅಧಿಕವಾದ ಪರಿಣಾಮ ಕಂಡುಬಂದಲ್ಲಿ ಸ್ಥಳಿಯ ಆಸ್ಪತ್ರೆಗಳು ಇವುಗಳನ್ನು ವೈಜ್ಞಾನಿಕ ಅಂಶಗಳೆಂದು ಸ್ವೀಕರಿಸಬೇಕು ಮತ್ತು ಪ್ರಚಾರ ಮಾಡಬೇಕು ಎಂ.ಬಿ.ಬಿ.ಎಸ್ ವೈದ್ಯರು ಕೂಡಾ ಸಮಾಜದ ಹಿತದ ದೃಷ್ಟಿಯಿಂದ ಈ ಸಂಪ್ರದಾಯವನ್ನು ಒಪ್ಪಿಕೊಳ್ಳಬೇಕು. ಪರಿಣಾಮವೂ ೨೫ ರಿಂದ ೩೦% ಇದ್ದಲ್ಲಿ ಈ ಸಂಪ್ರದಾಯಗಳು ಹೆಚ್ಚುವರಿಯಾಗಿ ಸಲಹಾತ್ಮಕವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ನೀಡಬೇಕು ಪರಿಣಾಮವೂ ಶೇಕಡ ೫ ಕ್ಕಿಂತ ಕಡಿಮೆ ಇದ್ದಲ್ಲಿ ಜನರಿಗೆ ತಿಳುವಳಿಕೆ ನೀಡಬೇಕು ಈ ಸಂಪ್ರದಾಯಗಳನ್ನು ತೊಡೆದು ಹಾಕಲು ಬಲಪ್ರಯೋಗ ಮಾಡಬೇಕು. ಆಗಲೇ ಸಮುದಾಯದ ಆರೋಗ್ಯ ಕಾಪಾಡಬಹುದು.

೫. ಹೋಳಿ ಹುಣ್ಣಿಮೆ ದಿನದಂದು ವ್ಯಕ್ತಿಗೆ ಸಾಮಾಜಿಕ ಸಭ್ಯತೆಯ ಪರಿಧಿಯಿಂದ ಹೊರ ಬಂದು ಜೀವಿಸಲು ೩ ತಾಸಿನ ಮಟ್ಟಿಗೆ ಸ್ವಾತಂತ್ರ್ಯ ನೀಡಲಾಗಿದೆ. ಹೀಗೆ ನೀಡುವುದರಿಂದ ವ್ಯಕ್ತಿಯ ಮಾನಸಿಕ ಪರಿಸ್ಥಿತಿಯ ಮೇಲೆ ಉಂಟಾಗುವ ಪರಿಣಾಮವನ್ನು ಮತ್ತು ಜನಪದ ಮಾನಸಿಕ ಸ್ಥಿತಿಯಲ್ಲಿ ಯಾವ ಬಗೆಯ ಸುಧಾರಣೆಯಾಗುತ್ತದೆ ಎಂಬ ಬಗ್ಗೆ ಪ್ರಜ್ಞಾವಂತ ಮನೋವೈಜ್ಞಾನಿಕರು ಅಧ್ಯಯನ ಮಾಡಬೇಕಾಗಿದೆ. ಅದು ೮೦% ಕ್ಕಿಂತಲೂ ಅಧಿಕವಾದ ಜನರಿಗೆ ಪ್ರಯೋಜನಕಾರಿಯಾದಲ್ಲಿ ಎಲ್ಲರೂ ಈ ಹೋಳಿ ಹುಣ್ಣಿಮೆ ಚಟುವಟಿಕೆಯಲ್ಲಿ ಕೂಗಾಟ, ಚೀರಾಟದಲ್ಲಿ ಭಾಗವಹಿಸಲು ಕಡ್ಡಾಯವಾಗಿ ಸರ್ಕಾರವು ರಜೆ ನೀಡಬೇಕು ಮತ್ತು ಹೀಗೆ ಭಾಗವಹಿಸುವುದನ್ನು ಕಡ್ಡಾಯ ಮಾಡಲು ಸ್ಥಳೀಯ ಸರ್ಕಾರಗಳು ಕಾನೂನು ನಿಯಮಗಳನ್ನು ರಚಿಸಬೇಕು. ಅದೇ ಪ್ರಕಾರ ಪಾಪ್-ಡಾನ್ಸ್ ಮತ್ತು ಓಶೋ ಅವರ ಕಾಮ ಸಂಭಂದಿ ವಿಚಾರಗಳನ್ನು ಅಧ್ಯಯನ ಮಾಡಲು ಮತ್ತು ಹೋಳಿ ಹುಣ್ಣಿಮೆಯಲ್ಲಿ ಸುಧಾರಣೆ ಮಾಡಲು ಮತ್ತು ಮನೋವಿಜ್ಞಾನಕ್ಕೆ ಸಂಭಂಧಿಸಿದಂತೆ ಸಂಶೋಧನೆ ಮಾಡಲು ಸ್ಥಳೀಯ ಸರ್ಕಾರಗಳು ಪ್ರಯತ್ನಿಸಬೇಕು. ಈ ಆಚರಣೆಗಳಲ್ಲಿ ಅರ್ಥವಿಲ್ಲವೆಂದು ಕಂಡುಬಂದರೆ ಹೋಳಿ ಹುಣ್ಣಿಮೆಯನ್ನು ತೊಡೆದು ಹಾಕಬೇಕು, ಪ್ರತಿಬಂಧಿಸಬೇಕು. ಈಗ ಇರುವಂತೆ ಸರ್ಕಾರ ನಿರ್ಲಿಪ್ತವಾಗಿರುವುದು ಸಮಾಜಕ್ಕೆ ಸರಿ ಅಲ್ಲ. ಇವೆಲ್ಲವೂ ಕೆಲ ಉದಾಹರಣೆಗಳು ಮಾತ್ರ ಆರೋಗ್ಯಕ್ಕೆ ಸಂಬಂಧಿಸಿದಂತೆ ಜನಸಾಮಾನ್ಯನಿಂದ ಬರಬಹುದಾದ ಮತ್ತು ಪ್ರತಿ ಹಳ್ಳಿಯಲ್ಲಿ ಇರಬಹುದಾದ ಎಲ್ಲ ಬಗೆಯ ಪ್ರಾಚೀನ ಸಂಪ್ರದಾಯಗಳನ್ನು ಪರೀಕ್ಷಿಸುವ ಮತ್ತು ಅವುಗಳನ್ನು ದಾಖಲಿಸುವ ಮತ್ತು ನಿತ್ಯ ಸತ್ಯಾಸತ್ಯತೆಗಳನ್ನು ಶ್ರೀ ಸಾಮಾನ್ಯರೆ ಕಂಡುಕೊಳ್ಳಲು ಸ್ಥಳೀಯ ಸರ್ಕಾರಗಳು/ತಾಲ್ಲೂಕು ಪಂಚಾಯ್ತಿ / ಜಿಲ್ಲಾ ಪಂಚಾಯ್ತಿಗಳು ನಿಯಾಮಾನುಸಾರ ಸಹಾಯ ಸಹಕಾರ ನೀಡಲು ವಿಜ್ಞಾನ ಮಂಡಳಿಗಳಿಗೆ ಸೂಕ್ತ ಅಧಿಕಾರವನ್ನು ಸರ್ಕಾರ ನೀಡಬೇಕು.

ಅರಿಶಿಣವನ್ನು ಉಪಯೋಗಿಸುವುದರಿಂದ ಕ್ಯಾನ್ಸರ್ ತಡೆಗಟ್ಟಬಹುದು ಎಂದು ಇತ್ತೀಚಿನ ಸಂಶೋಧನೆಯಲ್ಲಿ ಹೇಳಲಾಗಿದೆ. ಇನ್ನೊಂದು ಹಂತದಲ್ಲಿ ತಂಬಾಕು ಮತ್ತು ಗುಟ್ಕಾ ಸೇವನೆಯಿಂದ ಕ್ಯಾನ್ಸರ್ ಉಲ್ಬಣಗೊಳ್ಳುವುದು ಎಂದು ಇತ್ತೀಚಿನ ಸಂಶೋಧನೆಯಲ್ಲಿ ಹೇಳಲಾಗಿದೆ. ತಂಬಾಕು ಉಪಯೋಗ ನಿಯಂತ್ರಿಸಲು ಆ್ಯಂಟಿ ಟೊಬಾಕ್ಕೋ ಡೇ ಆಚರಣೆ ಮಾಡಲಾಗುತ್ತದೆ. ಆದರೆ [ಪ್ಯಾನ್ ಟರ್ಮೆರಿಕ್ ಡೇ] ಅರಿಶಿಣ ಉಪಯೋಗ ಹೆಚ್ಚಸಲು ದಿನಾಚರಣೆಯನ್ನು ಮಾಡುತ್ತಾ ಇಲ್ಲ. ಊಟದಲ್ಲಿ ಅಯೋಡಿನ್ ಉಪ್ಪು ಕಡ್ಡಾಯ ಮಾಡಲು ಪ್ರಚಾರ ನೀಡಲಾಗುತ್ತಿದೆ. ಅದರಂತೆ ಸ್ಥಳೀಯ ಸರ್ಕಾರಗಳು ಅರಿಶಿಣ ಉಪಯೋಗ ಊಟ ಉಪಹಾರದಲ್ಲಿ ಹೆಚ್ಚಿಸಲು ಪ್ರಚಾರ ಮಾಡಬೇಕು. ಈಗಾಗಲೇ ಯಾವುದಾದರೂ ಪ್ರದೇಶದಲ್ಲಿ ಸಾಂಪ್ರದಾಯಿಕವಾಗಿ ಅರಿಶಿಣಯುಕ್ತ ಆಹಾರವನ್ನು ಹೆಚ್ಚುವರಿಯಾಗಿ ಉಪಯೋಗಿಸುತ್ತಿದ್ದರೆ ಮತ್ತು ಅಲ್ಲಿ ಕ್ಯಾನ್ಸರ್ ಪ್ರಕರಣಗಳು ಇಲ್ಲದೇ ಇದ್ದಲ್ಲಿ ಅಥವಾ ಕಡಿಮೆ ಇದ್ದಲ್ಲಿ ಇತರ ಭಾಗದ ಜನರು ಆ ಪ್ರಮಾಣದಲ್ಲಿ ಅರಿಶಿಣಯುಕ್ತ ಆಹಾರವನ್ನು ಉಪಯೋಗಿಸಲು ವ್ಯಾಪಕ ಪ್ರಚಾರ ನೀಡಬೇಕು.

***

# ಅಧ್ಯಾಯ–೭: <u>ಕೆಲವು ಉತ್ಪ್ರೇಕ್ಷಿತ ವರದಿಗಳ ಬಗ್ಗೆ ಅಧಿಕೃತ ನಿರ್ಣಯಗಳು:</u>

[i] **<u>ಈ ಟಿವಿ ಧಾರಾವಾಹಿ–ಭಾನಾಮತಿ</u>**

ಇಂದಿನ ಟಿ.ವಿಗಳಲ್ಲಿ ಡಿಸ್ಕವರಿ / ನ್ಯಾಷನಲ್ ಜಿಯೋಗ್ರಫಿ ಚಾನಲ್‌ಗಳಲ್ಲಿ ಜ್ಞಾನ, ವಿಜ್ಞಾನದ ಕೆಲ ಅಂಶಗಳನ್ನು ತೋರಿಸಲಾಗುತ್ತಿದೆ. ಆದರೆ ಅಪ್ಪಟ ಭಾರತೀಯ ಕನ್ನಡಿಗರ ಡಿಸ್ಕವರಿ ಚಾನಲ್ ಎಂದರೆ, ಪ್ರತಿ ಶನಿವಾರ / ರವಿವಾರ ಮೂಡಿಬರುವ ಭಾನಾಮತಿ ಕಾರ್ಯಕ್ರಮ. ಇಲ್ಲಿ ಕೆಲವು ಸಲ ಸಂಶೋಧನೆಗೆ ಸಹಾಯಕವಾಗುವ ಕೆಲವು ವಿಷಯಗಳನ್ನು ಅವರು ನಮ್ಮ ಮುಂದೆ ಇಟ್ಟಿದ್ದಾರೆ. ಅದರಲ್ಲಿ ಪ್ರಮುಖ ಅಂಶಗಳೆಂದರೆ ನವನಾಥ ಪಂಥದ ಜನರ ನಿಗೂಢ ಜೀವನ ಶೈಲಿ ಕೆಲವು ಪವಾಡಗಳು ಭೂತಗಳ ಭಾವಚಿತ್ರ ಮೋಡಿವಿಧ್ಯೆ ಪ್ರದರ್ಶನ ಇತ್ಯಾದಿಗಳು ಮೋಡಿವಿದ್ಯಾ ಪ್ರದರ್ಶನ ತೋರಿಸುವಾಗ ನೀರು ತುಂಬಿದ ಮಣ್ಣಿನ ಪಾತ್ರೆಯಲ್ಲಿ ನೀರಿನೊಳಗೆ ಒಂದು ಹಿಡಿ ಮಣ್ಣನ್ನು ಕರಗಿಸಲಾಗುತ್ತದೆ. ಹೀಗೆ ಮಣ್ಣನ್ನು ಕರಗಿಸಿದ ತರುವಾಯ ಪುನ: ಅದೇ ನೀರಿನಿಂದ ಒದ್ದೆಯಾದ ಗಟ್ಟಿ ಮಣ್ಣನ್ನು ಹೊರಕ್ಕೆ ತೆಗೆಯಲಾಗುತ್ತದೆ. <u>ಇದು ಮೋಡಿಯೋ, ಮೋಸವೋ ಅಂತೂ ಸಂಶೋಧನಾತ್ಮಕ ವಿಷಯವಾಗಿದೆ.</u> ಇದರಲ್ಲಿ ಸಂಶಯವಿಲ್ಲ, ಇಂತಹ ಸೂಕ್ಷ್ಮ ವಿಷಯಗಳನ್ನು ಸಂಶೋಧನೆ ಮಾಡಲು ಕೇಂದ್ರ ಸರ್ಕಾರವು ಯೋಜನೆಯನ್ನು ರೂಪಿಸಲು ಅದರ ಉಸ್ತುವಾರಿ ಮಾಡಲು ಎಂದಿಗೂ ಸಾಧ್ಯವಾಗಲಾರದು. ಕಾರಣ ಜ್ಞಾನ, ವಿಜ್ಞಾನ ಚಟುವಟಿಕೆಗಳು ಜಿಲ್ಲಾ ಮಟ್ಟಕ್ಕೆ ತಾಲ್ಲೂಕು ಮಟ್ಟಕ್ಕೆ ಬರಬೇಕು. ತಳಮಟ್ಟದ ಈ ಸಂಶೋಧನೆಗಳು ದಾರಿ ತಪ್ಪುತ್ತವೆ ಎಂದು ರಾಜ್ಯ ಸರ್ಕಾರಗಳಿಗೆ ಅನಿಸಿದಾಗ ಅವುಗಳನ್ನು ಸರಿದಾರಿಗೆ ತರುವ ಅಧಿಕಾರ ರಾಜ್ಯ ಸರ್ಕಾರ ಹೊಂದಿರಬೇಕು. ಅದೇ ಪ್ರಕಾರ ರಾಜ್ಯ ಸರ್ಕಾರಗಳು ದಾರಿ ತಪ್ಪಿದಲ್ಲಿ ಕೇಂದ್ರ ಸರ್ಕಾರ ಹಸ್ತಕ್ಷೇಪ ಮಾಡಬೇಕು. ಹೀಗೆ ನಡೆಯುತ್ತಿರುವ ಸಂಶೋಧನೆಗಳು ಸಮಾಜದ ಹಿತದೃಷ್ಟಿಯಿಂದ ಕೂಡಿವೆ ಎಂದು ರಾಜ್ಯ ಸರ್ಕಾರ ಭಾವಿಸಿದರೆ/ಕೇಂದ್ರ ಸರ್ಕಾರ ಭಾವಿಸಿದರೆ ಆ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಉತ್ತೇಜನ ನೀಡಬೇಕು. ಇದೇ ನಮ್ಮ ಉದ್ದೇಶಿತ ಸಂವಿಧಾನದ ಮೂಲ ತಿದ್ದುಪಡಿಯ ಮೂಲ ವಿಚಾರವಾಗಿದೆ (ಅನುಬಂಧ–೪ ಪುಟ ೫೦)

[ii] **<u>ಕೆಲವು ಉತ್ಪ್ರೇಕ್ಷಿತ ವರದಿಗಳು:</u>**

ಇತ್ತೀಚೆಗೆ ದಿನ ಪತ್ರಿಕೆಯಲ್ಲಿ ಆಸ್ಟ್ರೇಲಿಯಾದ ಮಹಿಳೆ ೧೮ ವರ್ಷಗಳಿಂದ ಊಟ ಮಾಡಿಲ್ಲವೆಂದು ಓದಿದೆವು. ಬಿಜಾಪುರದ ಒಬ್ಬ ಮಹಿಳೆ ಕೇವಲ ಚಹಾ ಸೇವಿಸಿ ೩೦ ವರ್ಷ ಬದುಕಿದ್ದಾಳೆ ಎಂದು ಓದಿದೆವು ಜೈನ ಯೋಗಿ ಒಬ್ಬರು ಒಂದು ವರ್ಷ ಉಪವಾಸವಿರುತ್ತಾರೆ ಎಂದು ಕೇಳಿದೆವು ನಮ್ಮ ಪುರಾಣಗಳಲ್ಲಿ ಅನ್ನ ನೀರಿಲ್ಲದೇ ೧೫–೨೦ ವರ್ಷ ತಪಸ್ಸು ಆಚರಿಸಿದರು ಎಂದು ಓದುತ್ತೇವೆ. ಈ ಸುದ್ದಿಗಳಿಗೆ ಅರ್ಥವಿದೆಯೆ? ಅಥವಾ ಇವು ಕೇವಲ ಭ್ರಮೆ ಮೂಡಿಸುವ ವಿಚಾರಗಳೆ? ಎಂಬ ಬಗ್ಗೆ ಸಮಾಜದಲ್ಲಿ ಸರಿಯಾದ ಪರಿಜ್ಞಾನ ಮೂಡಬೇಕು. ಆಗಲೇ ಸಮಾಜದಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಯಲು ಸಾಧ್ಯವಾಗುತ್ತದೆ. ಇದೇ ವಿಷಯಕ್ಕೆ ಸಂಭಂಧಿಸಿದಂತೆ ಈ–ಟಿವಿ ಭಾನಾಮತಿ ಕಾರ್ಯಕ್ರಮದಲ್ಲಿ ಗುಲಬರ್ಗಾದ ಮಾತೆಮಾಣಿಕ್ಯದೇವಿ ಅವರು ಅನೇಕ ವರ್ಷಗಳಿಂದ ಅನ್ನ–ನೀರಿಲ್ಲದೆ ಇದ್ದಾರೆ ಎಂದು ವರದಿ ಮಾಡಲಾಗಿದೆ. ಅವರ ದೈಹಿಕ ಲಕ್ಷಣಗಳ ಬಗ್ಗೆ ಇಂದು ಸಮಾಜವು ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕಿದೆ. ಆದರೆ ಹೀಗೆ ಅಧ್ಯಯನ ಮಾಡುವ ಬದಲು ಅವರನ್ನು ದೈವತ್ವಕ್ಕೆ ಏರಿಸಿಕೂಡಿಸಿ ಸಮಾಜದಿಂದ ಒಂದು ರೀತಿಯಲ್ಲಿ ಅವರನ್ನು ಬಹಿಷ್ಕಾರಕ್ಕೆ ಹಾಕಿದ್ದೇವೆ. ನಮ್ಮ ಶ್ರೀಸಾಮಾನ್ಯರಲ್ಲಿ ಸಾಮಾನ್ಯರು ಊಟವನ್ನೇ ಮಾಡದವರಲ್ಲಿ ಹೋಗಿ ತಮ್ಮ ಊಟದ ವ್ಯವಸ್ಥೆ ಸರಿಯಾಗಿ ಆಗಲಿ ಎಂದು ಪ್ರಾರ್ಥನೆ ಮಾಡುತ್ತಾರೆ. ವಾಸ್ತವಿಕವಾಗಿ ಅವರ ಸಾಧನೆಗೆ [ಅನ್ನ ನೀರಿಲ್ಲದೆ ಬದುಕುವ ತತ್ವ] ನಾವು ಸಹಕರಿಸಬೇಕು ಮತ್ತು ಅದರಲ್ಲಿ ವೈಜ್ಞಾನಿಕವಾಗಿ ಯಾವ ಯಾವ ಅಂಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಲು ಸಾಧ್ಯ ಎಂಬುದನ್ನು ಚಿಂತಿಸಬೇಕು. ಅಂದರೆ ಸಾಮಾನ್ಯ ಪ್ರಜೆಗಳಲ್ಲಿ ಅಜ್ಞಾನಿಗಳಲ್ಲಿ ಇರುವಂತಹ ಅಜ್ಞಾನ ಕಳೆಯಲು ನಮ್ಮ ಜಿಲ್ಲಾ ಮಟ್ಟದ ಆಡಳಿತ ಪ್ರಯತ್ನಿಸಬೇಕು.

[iii] **ಅಸಂಬದ್ಧ ವಿಚಾರಗಳು :**

೧. ಇಂದಿಗೂ ಕೆಲವು ದೇವಸ್ಥಾನಗಳಲ್ಲಿ ಗುಹೆಗಳು ಇವೆ ಅವುಗಳಿಂದ ದೂರದ ಊರಿಗೆ ಮೊದಲಿನ ಕಾಲದಲ್ಲಿ ಸುರಂಗ ಮಾರ್ಗವಿತ್ತು ಅಂದಿನ ಯೋಗಿಗಳು ಮಹಾರಾಜರು ಇಲ್ಲಿಂದ ಅಲ್ಲಿಗೆ ಹೋಗುತ್ತಿದ್ದರು ಎಂದು ಹೇಳುತ್ತಾರೆ. ಅವುಗಳ ಸತ್ಯಾಸತ್ಯತೆಯನ್ನು ಪರೀಕ್ಷೆ ಮಾಡಿ ಪ್ರಕಟಿಸಬೇಕು.

೨. ಅಮಾವಾಸ್ಯೆಯಲ್ಲಿ ಹುಟ್ಟಿದ ಮಗು ಮುಂದೆ ಕಳ್ಳನಾಗುತ್ತಾನೆ ಎಂದು ಹೇಳುತ್ತಾರೆ. ಸಧ್ಯ ಜೈಲಿನಲ್ಲಿ ಇರುವ ಎಲ್ಲ ಕೈದಿಗಳ ಜನ್ಮ ದಿನ ಪತ್ತೆ ಮಾಡಿ ಆ ವಾಕ್ಯ ಎಷ್ಟು ಸರಿ / ಎಷ್ಟು ತಪ್ಪು ಎಂಬ ಬಗ್ಗೆ ಪ್ರಕಟಿಸಿ ಮೂಡನಂಬಿಕೆ ಹೋಗಲಾಡಿಸಬೇಕು.

೩. ಬುದ್ಧಿಮಾಂದ್ಯ ಮಕ್ಕಳನ್ನು ಕುದುರೆ ಮೇಲೆ ಕೂಡಿಸಿ ಅವರುಗೆ ಶಿಕ್ಷಣ ಪಾಠ ಹೇಳಿದರೆ ಬುದ್ಧಿಮಾಂದ್ಯ ಮಕ್ಕಳು ಕೂಡಾ ಚುರುಕಾಗಿ ಪಾಠ ಕಲಿಯುತ್ತಾರೆ ಎಂದು ಹೇಳಲಾಗುತ್ತಿದೆ. ಆ ಬಗ್ಗೆ ಯಾರಾದರೂ ಸಂಶೋಧನೆ ಮಾಡಲು ಇಷ್ಟಪಟ್ಟರೆ ಅಥವಾ ಮಾಡುತ್ತಿದ್ದರೆ ಅದಕ್ಕಾಗಿ ನೈತಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಸಹಾಯ ಸಹಕಾರ ನೀಡಬೇಕು.

೪. ಇತ್ತೀಚೆಗೆ ಹಿಂದುಸ್ಥಾನ್ ಟೈಮ್ಸ ಪತ್ರಿಕೆಯಲ್ಲಿ ದಿನಾಂಕ ೦೨.೦೪.೨೦೦೫ರಲ್ಲಿ "ಸಂತೋಷದ ಕೋಲು"[Joystick] ಎಂದು ಸಂಪಾದಕೀಯ ಲೇಖನ ಪ್ರಕಟವಾಯಿತು. ಅದರಲ್ಲಿ ಒಬ್ಬ ವ್ಯಕ್ತಿಯ ಕುಂಡಿಯ ಮೇಲೆ ಒಂದು ಚಾಬುಕದಿಂದ ೬೦ ಸಲ ಏಟನ್ನು ಹಾಕಿದರೆ ಅವನಲ್ಲಿ ಸಾರಾಯಿ ಕುಡಿಯಬೇಕೆನ್ನುವ ಚಪಲ ಹೊರಟುಹೋಗುತ್ತದೆ ಮತ್ತು ಆತ್ಮಹತ್ಯೆ ಮಾಡಿಕೊಳ್ಳಬೇಕೆನ್ನುವ ಮನೋವ್ಯಾಧಿಯು ಹೊರಟುಹೋಗುತ್ತದೆ ಎಂದು ವರದಿಮಾಡಲಾಗಿತ್ತು. ಇಂತಹ ವರದಿಗಳ ಬಗ್ಗೆ ಆಸಕ್ತಿ ಇರುವ ಸಾರ್ವಜನಿಕರು ಸ್ವಯಂ ಪ್ರಯೋಗಗಳನ್ನು ಮಾಡಲು ಸಮಾಜದಲ್ಲಿ ವ್ಯವಸ್ಥೆ ರೂಪಿಸಬೇಕು.

೫. ಅದೇ ಪ್ರಕಾರ ಹಿಂದುಸ್ತಾನ ಟೈಮ್ಸ್ ಪತ್ರಿಕೆಯಲ್ಲಿ ದಿನಾಂಕ ೧೩.೦೬.೨೦೦೫ರ ಸಂಪಾದಕೀಯದಲ್ಲಿ ಕುರಿಯ ಮೂತ್ರವನ್ನು ವಾಹನಗಳ ಹೊಗೆ ಸೂಸುವ ಸೈಲೆನ್ಸರ್‌ನಲ್ಲಿ ಸಣ್ಣ ಪ್ರಮಾಣದಲ್ಲಿ ಸುರಿದರೆ ಯೂರಿಯಾ ಸಿದ್ಧವಾಗುತ್ತದೆ ಮತ್ತು ವಾತಾವರಣ ಮಲಿನತೆ ನಿಯಂತ್ರಣಕ್ಕೆ ಬರುತ್ತದೆ ಎಂದು ವರದಿ ಮಾಡಲಾಗಿತ್ತು. ಇಂತಹ ಅಂಶಗಳನ್ನು ಅಸಂಖ್ಯಾತ ಭಾರತೀಯರಲ್ಲಿ ಆಸಕ್ತಿ ಇರುವ ಕೆಲವರು ಪ್ರಯೋಗ ಮಾಡಿನೋಡಬಹುದು. ಅದಕ್ಕೆ ಸ್ಥಳೀಯ ಜ್ಞಾನ, ವಿಜ್ಞಾನ ಸಂಸ್ಥೆ ನೈತಿಕ ಬೆಂಬಲ ನೀಡಬೇಕು.

೬. ನಮ್ಮಲ್ಲಿ ದೊರೆಯುವ ಉಪ್ಪು ನೀರನ್ನು ಅತೀ ಕಡಿಮೆ ವೆಚ್ಚದಲ್ಲಿ ಉತ್ತಮ ನೀರನ್ನಾಗಿ ಪರಿವರ್ತಿಸಲು ಪ್ರಯತ್ನಿಸಬಹುದು.

೭. ಅಂಜನವನ್ನು ಹಚ್ಚಿದರೆ ದೂರದ ನಮ್ಮ ಸಂಬಂಧಿಗಳ ಸ್ಥಿತಿ ಗತಿ ತಿಳಿಯಬಹುದು. ಮನೆಯಲ್ಲಿ ವಸ್ತುಗಳ ಕಳ್ಳತನವಾದಲ್ಲಿ ಕಳ್ಳನ ಚಹರೆ ಪಟ್ಟಿಯನ್ನು ತಿಳಿಯಬಹುದು ಎಂದು ಹೇಳಲಾಗುತ್ತದೆ. ಈ ಹೇಳಿಕೆಗಳು ಸತ್ಯಾಸತ್ಯತೆಯನ್ನು ಪರಿಶೀಲಿಸಬೇಕು.

೮. ಒಬ್ಬನು ಎಲ್ಲಿಯೋ ಕಳೆದು ಹೋಗಿದ್ದಾನೆ ಅವನನ್ನು ಎಲ್ಲಿ ಹುಡುಕಿದರು ಸಿಗುತ್ತಿಲ್ಲ. ಆಗ ಅವನ ಕುಟುಂಬದ ಸದಸ್ಯರು ಅವನು ಉಪಯೋಗಿಸುತ್ತಿದ್ದ (ಶುಭ್ರಗೊಳಿಸದ) ಬಟ್ಟೆಯನ್ನು ಮನೆಯ ಮೇಲೆ ಬಿಸಿಲಿಗೆ ಹಗಲು ರಾತ್ರಿ ಹಾಕಿದರೆ ೩ ದಿನದಲ್ಲಿ ಅವನು ಮನೆಗೆ ವಾಪಸ್ ಬರುತ್ತಾನೆ.

೯. ಹೊಟ್ಟೆಯಲ್ಲಿ ಮದ್ದು ಹಾಕುವುದು ಮತ್ತು ತೆಗೆಯುವುದು ಇತ್ಯಾದಿ.

೧೦. ಭೂತ ಪ್ರೇತಗಳ ಬಗ್ಗೆ ಭಯ, ಭೂತಗಳ ಅಸ್ತಿತ್ವ, ಅತೀ ಮಾನಸ ಶಕ್ತಿ ಇತ್ಯಾದಿ. ಇಂತಹವುಗಳನ್ನು ಸಹಿತ ಪರೀಕ್ಷೆಗೊಳಪಡಿಸಿ ಸ್ಪಷ್ಟೀಕರಣ ನೀಡಬೇಕು.

# ಅಧ್ಯಾಯ–೮: ಸಧ್ಯಕ್ಕೆ ಸರ್ಕಾರ ಘೋಷಣೆ ಮಾಡಬಹುದಾದ ಬಹುಮಾನ ಯೋಜನೆಗಳು:

೧ ಸಧ್ಯಕ್ಕೆ ಸೋಲಾರ್ ಸೆಲ್ ಕಾರ್ಯ ನಿರ್ವಹಿಸುತ್ತಿದ್ದು, ಈಗಿನ ಸೋಲಾರ್ ಸೆಲ್‌ನ ಕಾರ್ಯ ದಕ್ಷತೆಯನ್ನು ಶೇಕಡ ೨೫% ಹೆಚ್ಚುವರಿ ಮಾಡಿತೋರಿಸಿದವರಿಗೆ ರೂ. ೨೫ ಲಕ್ಷ ಬಹುಮಾನ ನೀಡಲಾಗುವುದೆಂದು ಘೋಷಿಸಬೇಕು. ಉದಾಹರಣೆಗೆ, ಸಧ್ಯಕ್ಕೆ ವಾತಾವರಣದಲ್ಲಿ ೩೦* ಸೆ ಉಷ್ಣತೆ ಇದ್ದಾಗ ಈ ಸೆಲ್‌ನಿಂದ ಒಂದು ಆ್ಯಂಪಿಯರ್ ವಿದ್ಯುತ್ ಹೊರಬರುತ್ತಿದೆ ಎಂದು ಭಾವಿಸಿದಲ್ಲಿ ಸುಧಾರಿತ ಸೆಲ್‌ನಿಂದ ವಾತಾವರಣದ ಉಷ್ಣತೆ ೩೦* ಇದ್ದಾಗ ೧.೨೫ ಆ್ಯಂಪಿಯರ್‌ನ ವಿದ್ಯುತ್ ಹೊರಬರುವಂತೆ ಮಾಡಬೇಕು. ಹೀಗೆ ಮಾಡಿದಾಗ ಸೆಲ್‌ಗಳ ಬೆಲೆಯಲ್ಲಿ ಹೆಚ್ಚಳವಾಗಬಾರದು.

೨ ವಾರಣಾಸಿಯಲ್ಲಿ ಹೈಡ್ರೋಜನ್ ಅನಿಲದಿಂದ ನಡೆಯುವ ದ್ವಿಚಕ್ರ ಮೋಟಾರ್ ವಾಹನವನ್ನು ಪ್ರಾಯೋಗಿಕವಾಗಿ ಸಿದ್ದಪಡಿಸಿರುವುದು ತಿಳಿದುಬಂದಿದೆ. ಜಲಜನಕದ ಮೇಲೆ ನಡೆಯುವ ದ್ವಿಚಕ್ರ ವಾಹನದ ತಂತ್ರ್ಯಜ್ಞಾನವನ್ನು ಸುಧಾರಣೆ ಮಾಡಿ ನಾಲ್ಕು ಚಕ್ರದ ವಾಹನಗಳು ಹೈಡ್ರೋಜನ್ ಅನಿಲದಿಂದ ನಡೆಯುವಂತೆ ಮಾಡಿದಲ್ಲಿ ಅಂಥವರಿಗೆ ರೂ. ೨೫ ಲಕ್ಷ ಬಹುಮಾನವನ್ನು ನೀಡಬೇಕು.

೩ ಪೆಟ್ರೋಲ್ ಬದಲು ಸ್ಥಳೀಯವಾಗಿ ದೊರಕುವ ಇತರ ಸಾಮಗ್ರಿ, ತ್ಯಾಜ್ಯ ವಸ್ತುಗಳಿಂದ ಇಂದನವನ್ನು ಸಂಶೋಧಿಸಿದಲ್ಲಿ ಹಾಗೂ ಆ ಇಂಧನ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದಲ್ಲಿ ಮತ್ತು ಅದರಿಂದ ಸಧ್ಯದ ಪಟ್ರೋಲಿಗಿಂತ ವಾತಾವರಣದಲ್ಲಿ ಕಡಿಮೆ ಮಲಿನತೆ ಉಂಟಾದಲ್ಲಿ ಅಂತಹ ಪ್ರಯೋಗಕ್ಕೆ ರೂ. ೨೫ ಲಕ್ಷ ಹಣವನ್ನು ನೀಡಬೇಕು. [ಝಟ್ರೋಪಾಮಾದರಿಯಲ್ಲಿ]

೪ ತೆಂಗಿನ ಗಿಡಕ್ಕೆ ತಗುಲಿದ ನುಸಿ ರೋಗವನ್ನು ನಿವಾರಿಸುವಲ್ಲಿ ಯಶಸ್ವಿಯಾದಲ್ಲಿ ಹಾಗೂ ಅದಕ್ಕೆ ಶಾಶ್ವತ ಪರಿಹಾರವನ್ನು ಮಾಡಿದಲ್ಲಿ ಹಾಗೂ ಅದು ದೇಶೀಯ ಮಾದರಿಯಲ್ಲಿ /ವಿಧಾನದಿಂದ ಸೂಚಿಸಿದಲ್ಲಿ ಅಥವಾ ಔಷಧಿ ಸಿದ್ದಪಡಿಸಿದಲ್ಲಿ ಅವರಿಗೆ ರೂ. ೨೦ ಲಕ್ಷ ಬಹುಮಾನವನ್ನು ನೀಡಬೇಕು.

೫ ಏಡ್ಸ್ ರೋಗವನ್ನು ಅಲೋಪತಿ ವಿಧಾನವನ್ನು ಹೊರತುಪಡಿಸಿ ಇತರ ವಿಧಾನಗಳಿಂದ ೧೦೦ ರೋಗಿಗಳ ಮೇಲೆ ಪ್ರಾಯೋಗಿಕವಾಗಿ ಪ್ರಯೋಗ ಮಾಡಿ ಯಶಸ್ವಿಯಾದಲ್ಲಿ ಹಾಗೂ ಅದರ ಶೇಕಡ ೬೦% ರೋಗಿಗಳು ಗುಣವಾದಲ್ಲಿ ಅಂತಹವರಿಗೆ ರೂ. ೨೫ ಲಕ್ಷ ಬಹುಮಾನವನ್ನು ಘೋಷಿಸಬೇಕು.

೬ ವಿಷಪೂರಿತ ಹಾವಿನಿಂದ ಕಡಿಸಿಕೊಂಡಂತಹ ಅಥವಾ ಆ ವಿಷವನ್ನು ಚುಚ್ಚಿಸಿಕೊಂಡ ಒಂದು ಪ್ರಾಣಿಯನ್ನು (ಮೊಲ, ಇಲಿ ಇತ್ಯಾದಿ) ದೇಶೀಯ ಆಯುರ್ವೇದದ ಔಷಧಗಳಿಂದ ಬದುಕಿಸಿದಲ್ಲಿ ಅಂತಹವರಿಗೆ ರೂ. ೫.೦೦ ಲಕ್ಷ ಬಹುಮಾನವನ್ನು ನೀಡಬೇಕು. ಕೇವಲ ಮಂತ್ರ ಶಕ್ತಿಯಿಂದ ಪ್ರಾಣಿಗಳಲ್ಲಿ ವಿಷ ಪರಿಹಾರ ಮಾಡಿದಲ್ಲಿ ರೂ. ೨೦.೦೦ ಲಕ್ಷ ಬಹುಮಾನ ನೀಡಬೇಕು ಹಾಗೂ ಮಾನವನ ಮೇಲೆ ಔಷಧಿ ಪ್ರಯೋಗಿಸಿ ಯಶಸ್ವಿಯಾದಲ್ಲಿ ಮೂರು ಸಲಕ್ಕೆ ರೂ. ೩೦.೦೦ ಲಕ್ಷ ಬಹುಮಾನ ನೀಡಬೇಕು. ಮರಣ ದಂಡನೆ ಕೈದಿಗೆ ಹಾವಿನ ವಿಷವನ್ನು ಚುಚ್ಚಿ ಅಂತಹ ವ್ಯಕ್ತಿಯ ವಿಷವನ್ನು ಕೇವಲ ಮಂತ್ರ ಶಕ್ತಿಯ ಪ್ರಯೋಗದಿಂದ ೩ ಸಲ ನಿವಾರಿಸಿದರೆ ರೂ. ೫೦.೦೦ ಲಕ್ಷ ಬಹುಮಾನ ನೀಡಬೇಕು.

೭ ಮಂತ್ರದಿಂದ ಮಾವಿನಕಾಯಿ ಉದುರಿಸಿದರೆ ರೂ. ೫.೦೦ ಲಕ್ಷ ಬಹುಮಾನ ನೀಡಬೇಕು.

# ಆಧ್ಯಾಯ–೯: <u>ವಿಷಾದಕರ ಇತಿಹಾಸ</u>

[i] **<u>ಟೈಪರೈಟರ್ ಸುಧಾರಣೆ</u>** :: ೧೯೬೮–೬೯ ರಲ್ಲಿ ಟೈಪ್ ರೈಟರ್ ಒಂದು ಪರಿಪೂರ್ಣ ಯಂತ್ರವಾಗಿತ್ತು ಅದರಲ್ಲಿ ಸುಧಾರಣೆ ಸಾಧ್ಯವಿಲ್ಲವೆಂದು ಭಾವಿಸಲಾಗಿತ್ತು. ಆದರೆ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಒಂದು ವರದಿ ಪ್ರಕಟಿಸಲಾಯಿತು. ಆ ವರದಿ ಪ್ರಕಾರ ನ್ಯಾಯಾಲಯದಲ್ಲಿ ಕೆಲಸಮಾಡುವ ಶ್ರೀ ಅರ್ಕ ಸಾಲಿ ಎಂಬ ನೌಕರನು ಒಂದು ಹೊಸ ಟೈಪರೈಟರನ್ನು ಅವಿಷ್ಕಾರ ಮಾಡಿದ್ದನು ಒಂದೇ ಟೈಪರೈಟರ್‌ನಿಂದ ಕನ್ನಡ, ಹಿಂದಿ, ಇಂಗ್ಲೀಷ್ ಭಾಷೆಗಳನ್ನು ಬೆರಳಚ್ಚು ಮಾಡಬಹುದಾಗಿತ್ತು. ಆಗ ಸ್ಥಳೀಯ ಕಚೇರಿಗಳಲ್ಲಿ ಆಡಳಿತ ಇಂಗ್ಲೀಷ್‌ನಲ್ಲಿಯೇ ನಡೆಯುತ್ತಿತ್ತು. ಕನ್ನಡವು ಅಲ್ಪ ಸ್ವಲ್ಪ ಸ್ಥಾನವನ್ನು ಪಡೆದುಕೊಂಡಿತ್ತು. ಅವನು ತನ್ನ ಸಂಶೋಧನೆಗೆ ಸರ್ಕಾರ ಸಹಾಯ ಮಾಡಬೇಕು ಎಂದು ಕೋರಿಕೆ ಸಲ್ಲಿಸಿದನು. ಸರ್ಕಾರವು ತನ್ನಿಂದ ೨೫–೩೦ ಬೆರಳಚ್ಚು ಯಂತ್ರಗಳನ್ನು ಖರೀದಿಸಬೇಕು ಎಂದು ವಿನಂತಿಸಿಕೊಂಡರು. ಅದನ್ನು ಪತ್ರಿಕೆಗಳು ಪ್ರಕಟಿಸಿದವು ಆದರೆ ಇಂದು ಅವನ ಬಗ್ಗೆ ನಮಗೇನು ತಿಳಿಯದು ಒಂದು ಪ್ರತಿಭೆ ನಷ್ಟವಾಯಿತು, ಇದು ಹೀಗಾಗಬಾರದಾಗಿತ್ತು. ಇನ್ನು ಮುಂದಾದರೂ ಹೀಗಾಗಬಾರದು ಈ ಹಂತದಲ್ಲಿ ಸಹಾಯ ಸಹಕಾರ ಪ್ರೋತ್ಸಾಹ ನೀಡುವ ಕೆಲಸವನ್ನು ಕೇಂದ್ರ ಸರ್ಕಾರ ಎಂದಿಗೂ ಮಾಡಲು ಸಾಧ್ಯವಿಲ್ಲ, ರಾಜ್ಯ ಸರ್ಕಾರ ಮಾಡಲು ಸಾಧ್ಯವಿಲ್ಲ ಕೇವಲ ಸ್ಥಳೀಯ ಸರ್ಕಾರ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿಗಳು ಮಾತ್ರ ಮಾಡಬಹುದು ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ.

[ii] **<u>ಬಂದೂಕು – ಶಸ್ತ್ರಾಸ್ತ್ರಗಳ ತಯಾರಿಕೆಯ ಖಾಸಗೀಕರಣ :</u>**

ತಳಮಟ್ಟದಿಂದ ಉನ್ನತ ಮಟ್ಟಕ್ಕೆ ತಲುಪಿರುವ ಇನ್ನೊಂದು ವಸ್ತು ಬಂದೂಕು, ಬಂದೂಕು ಇಂದು ನಿರ್ಭಂಧಿತ ವಸ್ತುವಾಗಿರುತ್ತದೆ ಮತ್ತು ೧೦೦೦ ವರ್ಷದಿಂದಲೂ ನಿರ್ಭಂದದಲ್ಲಿದೆ. ಬ್ರಿಟೀಷರು ಸಹಾಯಕ ಸೈನ್ಯ ಪದ್ದತಿ ಪ್ರಾರಂಭಿಸಿದಾಗ ಭಾರತೀಯರು ಅದನ್ನು ಅಭಿವೃದ್ದಿಪಡಿಸುವ ಅವಕಾಶವೂ ಸಮಾಧಿ ಹೊಂದಿತು. ಈ ಬಂದೂಕು ತಂತ್ರ್ಯಜ್ಞಾನವೇ ಮುಂದುವರೆದು ತೋಪುಗಳು, ಫಿರಂಗಿಗಳು, ವಿಸೆಲ್‌ಗಳು ಟ್ಯಾಂಕ್‌ಗಳು, ಬೋಫೋರ್ಸ್ ಫಿರಂಗಿಗಳಾಗಿ ಪರಿವರ್ತನೆ ಹೊಂದಿವೆ. ೨ನೇ ಮಹಾಯುದ್ದದಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಿದ ಮೆಷಿನ್‌ಗನ್‌ನನ್ನು ಅಮೇರಿಕಾದ ಒಬ್ಬ ರೈತನು ಕಂಡು ಹಿಡಿದನು, ೨ನೇ ಮಹಾಯುದ್ದದ ತರುವಾಯ ಪರಿಣಾಮಕಾರಿಯಾಗಿ ಉಪಯೋಗಿಸಿದ ಎಕೆ–೪೭ ಬಂದೂಕನ್ನು ಒಬ್ಬ ಸಾಮಾನ್ಯ ಸೈನಿಕನು ಕಂಡು ಹಿಡಿದನು ಹೀಗೆ ವಿಜ್ಞಾನವು ಮೊದಲು ಶ್ರೀ ಸಾಮಾನ್ಯನಲ್ಲಿಯೇ ಸಂಕಲ್ಪಗೊಳ್ಳುತ್ತದೆ. ನಂತರ ವಿಶ್ವವಿದ್ಯಾಲಯಗಳು ಅವುಗಳನ್ನು ಅಲ್ಪ ಸ್ವಲ್ಪ ಅಭಿವೃದ್ದಿಗೊಳಿಸುತ್ತೇವೆ. ಕೈಗಾರಿಕೆಗಳು ಅವುಗಳ ಉತ್ಪಾದನೆಯನ್ನು ಮಾಡಿ ಅದರ ತಂತ್ರಜ್ಞಾನವನ್ನು ವೈಭವೀಕರಣ ಮಾಡುತ್ತಾರೆ. ಇಟಲಿ ದೇಶದಲ್ಲಿ ಇಂದಿಗೂ ವಂಶ ಪಾರಂಪರಾಗತವಾಗಿ ಬಂದೂಕು ತಯಾರಿಸಲಾಗುತ್ತಿದೆ ಎಂದು ವರದಿ ಮಾಡಲಾಗಿದೆ. (ಅನುಬಂದ–೯) ನಮ್ಮ ದೇಶದಲ್ಲಿ ಅದನ್ನು ಕಲ್ಪನೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಕಾರಣ ನಾವು ಗುಲಾಮರು, ಗುಲಾಮರು ಸ್ವಂತ ಅಸ್ತ್ರಶಸ್ತ್ರ ಹೊಂದಬಾರದು ಎಂಬುದು ಆಡಳಿತ ನಡೆಸುವ ಪ್ರಭುಗಳ ಮನೋವಿಚಾರಧಾರೆಯಾಗಿರುತ್ತದೆ. ಹೀಗಾಗಿ ನಾವು ಇಂದು ರಕ್ಷಣಾ ವಿಷಯಕ್ಕೆ ಸಂಬಂಧಿಸಿದಂತೆ ಸಾವಿರಾರು ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ನೀಡಿ ಮದ್ದುಗುಂಡುಗಳನ್ನು ವಿದೇಶದಿಂದ

ಆಮದು ಮಾಡಿಕೊಳ್ಳುತ್ತೇವೆ. ಆದರೆ ಎಂದಿಗೂ ನಮ್ಮ ಶ್ರೀಸಾಮಾನ್ಯನಿಗೆ ಅದರಲ್ಲಿ ಸಂಶೊಧನೆ ಮಾಡಲು ಅವಕಾಶ ನೀಡುವುದಿಲ್ಲ. ಒಂದು ಪಕ್ಷ ಒಂದು ಹಳ್ಳಿಯಲ್ಲಿ ಒಬ್ಬನು ಬಂದೂಕು ತಯಾರಿಸಿದರೆ ಅವನನ್ನು ಕೂಡಲೇ ಬಂದಿಸಿ ಸೆರೆಮನೆಗೆ ತಳ್ಳುತ್ತೇವೆ. ಅದರ ಬದಲು ಆ ಕ್ಷೇತ್ರದಲ್ಲಿ ಆಸಕ್ತಿ ಮತ್ತು ಪ್ರತಿಭೆ ಇರುವ ವ್ಯಕ್ತಿಯನ್ನು ಸೈನ್ಯದ ಬಂದೂಕು ಸಂಶೋಧನಾ ವಿಭಾಗಕ್ಕೆ ಸೇರಿಸಿಕೊಂಡು ಅವನಿಗೆ ಸಂಶೋಧನೆ ಮಾಡಲು ಪ್ರೋತ್ಸಾಹ ನೀಡುವುದಿಲ್ಲ. ಇದು ಈಗಾಗಲೇ ತಳಮಟ್ಟದ ಸಂಶೋಧನೆಯಿಂದ ಮೇಲ್ಮಟ್ಟದ ಸಂಶೋಧನೆಗೆ ಸೇರಿರುವುದರಿಂದ ಸಧ್ಯಕ್ಕೆ ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಸಂಶೋಧನೆ ಮಾಡುವುದು ನಮ್ಮ ಉದ್ದೇಶವಿಲ್ಲ. ಅವಶ್ಯಕತೆಯೂ ಇರುವುದಿಲ್ಲ ಸುಮಾರು ೩೦೦ ವರ್ಷಗಳ ಹಿಂದೆ ಇದ್ದು ತಳಮಟ್ಟದ ಸಂಶೋಧನೆಯಾಗಿತ್ತು ಆದರೆ ಅಂದಿನಿಂದ ಇಂದಿನವರೆಗೂ ನಡೆದುಬಂದ ನಮ್ಮ ಸರ್ಕಾರಗಳು ವಿದೇಶಿ ಸರ್ಕಾರಗಳು ಈ ಕ್ಷೇತ್ರದಲ್ಲಿ ಸಾಮಾನ್ಯರಿಗೆ ಸ್ವಾತಂತ್ರ ನೀಡದೇ ಇರುವುದರಿಂದ ಇಂದು ಇಸ್ರೇಲ್‌ನಂತಹ ಸಣ್ಣ ದೇಶದಿಂದ ಭಾರತದಂತ ಮಹಾನ್ ದೇಶವು ಅಸ್ತ್ರಶಸ್ತ್ರಗಳನ್ನು ಖರೀದಿಸಬೇಕಾದ ಸ್ಥಿತಿ ಉಂಟಾಗಿರುತ್ತದೆ. ರಕ್ಷಣಾ ವಿಚಾರದಲ್ಲಿ ನಮ್ಮ ದುರ್ಬಲತೆಯ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗಿದೆ.

ಇತ್ತೀಚೆಗೆ ಸರ್ಕಾರವು ಶಸ್ತ್ರಾಸ್ತ್ರ ಉತ್ಪಾದನೆಯನ್ನು ಖಾಸಗೀಕರಣಗೊಳಿಸುವುದಾಗಿ ಕೆಲವು ಸಲ ಪ್ರಕಟಿಸಿರುತ್ತದೆ. ವಿದೇಶದಲ್ಲಿ ವಂಶಪಾರಂಪಾರಿಕವಾಗಿ ಶಸ್ತ್ರಾಸ್ತ್ರಗಳನ್ನು ತಯಾರಿಸುವಂತೆ ನಮ್ಮಲ್ಲಿ ವಂಶಪರಂಪರಾಗತವಾಗಿ ಶಸ್ತ್ರಾಸ್ತ್ರ ತಯಾರಿಸಲು ಈವರೆಗೆ ಕಾನೂನಿನಲ್ಲಿ ಅವಕಾಶ ನೀಡದೆ ಇಂದು ಒಂಮ್ಮಿಂದೊಮ್ಮೆಲೆ ಶಸ್ತ್ರಾತ್ರ ಉತ್ಪಾದನೆ ಖಾಸಗೀಕರಣಗೊಳಿಸಲು ಸಾಧ್ಯವೇ? ಎಂಬ ಅಂಶದ ಬಗ್ಗೆ ಚಿಂತನ ಮಂಥನ ನಡೆಯಲಿ ಎಂಬ ಉದ್ದೇಶದಿಂದ ಈ ಅಂಶವನ್ನು ಇಲ್ಲಿ ಪ್ರಸ್ಥಾಪಿಸಲಾಗಿದೆ. ನಮ್ಮಲ್ಲಿ ಪ್ರಬಲ ರಾಜಕೀಯ ಇಚ್ಛಾಶಕ್ತಿ ಇದ್ದಲ್ಲಿ ಶ್ರೀಸಾಮಾನ್ಯನಿಗೂ ಬಂದೂಕು ತಯಾರಿಸಲು ಸ್ವಾತಂತ್ರ ನೀಡಬೇಕು. ಬಹಿರಂಗವಾಗಿ ಸ್ಪರ್ಧೆಗಳನ್ನು ಏರ್ಪಡಿಸಬೇಕು. ಹೆಚ್ಚು ಪ್ರಯೋಜನಕಾರಿಯಾದ ಬಂದೂಕು ತಯಾರಿಸಿದ ವ್ಯಕ್ತಿಗೆ ರಾಜ್ಯ ಪ್ರಶಸ್ತಿ ನೀಡಬೇಕು. ಆಗ ನಮ್ಮಲ್ಲಿ ಶಸ್ತ್ರಾಸ್ತ್ರ ತಯಾರಿಕೆ ಖಾಸಗೀಕರಣ ಮಾಡಬಹುದು. ಶಸ್ತ್ರಾಸ್ತ್ರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಬಹುದು.

### [iii] ಉತ್ತರ ಪ್ರದೇಶದ ಟ್ರ್ಯಾಕ್ಟರ್ ಮಾದರಿ :

ದೆಹಲಿಯಿಂದ ಹರಿದ್ವಾರ ಮತ್ತು ಋಷಿಕೇಶಕ್ಕೆ ಹೋಗುವ ಮಾರ್ಗದಲ್ಲಿ ಸ್ಥಳೀಯವಾಗಿ ಸಿದ್ದಪಡಿಸಿದ ಕೆಲವು ಟ್ರಾಕ್ಟರ್‌ಗಳನ್ನು ನೋಡಬಹುದಾಗಿದೆ. ಅಲ್ಲಿ ೧೫-೨೦ ಹಾರ್ಸಪವರ್ ಕಿರ್ಲೋಸ್ಕರ ಮಾದರಿಯ ಡೀಸೆಲ್ ಇಂಜಿನನ್ನು ಅಳವಡಿಸಿ ಅದನ್ನು ಟ್ರಾಕ್ಟರ್‌ದಂತೆ ಸ್ಥಳೀಯವಾಗಿ ಉಪಯೋಗಿಸುತ್ತಾರೆ. ಅದಕ್ಕೆ ಆರ್.ಟಿ.ಓ ಪಾಸ್ಸಿಂಗ್/ಪರವಾನಗಿ ಇರುವುದಿಲ್ಲ ಮತ್ತು ಟ್ರಾಕ್ಟರ್‌ಗಳನ್ನು ಜನರು ಸಾರಿಗೆಗಾಗಿ ತಮಗೆ ಹೇಗೆ ಬೇಕೋ ಹಾಗೆ ತಯಾರಿಸಿಕೊಂಡಿದ್ದಾರೆ. ಉತ್ತರ ಪ್ರದೇಶದಲ್ಲಿರುವ ಈ ವೈಜ್ಞಾನಿಕ ಸ್ವಾತಂತ್ರ್ಯವನ್ನು ನಾವು ದೇಶದ ಯಾವ ಭಾಗದಲ್ಲಿಯೂ ನೋಡಲು ಸಾಧ್ಯವಿಲ್ಲ. ಇತರ ಸ್ಥಳದಲ್ಲಿ ಕೇವಲ ಹೆಸರಾಂತ ವಿದೇಶಿ ಕಂಪನಿಯ ಅಥವಾ ವಿದೇಶಿ ಸಹಯೋಗದಲ್ಲಿ ಸಿದ್ದಪಡಿಸಿದ ಟ್ರಾಕ್ಟರ್‌ಗಳು ಮಾತ್ರ ಉಪಯೋಗದಲ್ಲಿ ಇರುತ್ತವೆ. ಇತರ ರಾಜ್ಯ ಸರ್ಕಾರಗಳು ಈ ಬಗ್ಗೆ ಗಂಬೀರವಾಗಿ ಯೋಚಿಸಿ ಜನರಿಗೆ ವಿಜ್ಞಾನ ವಿಚಾರದಲ್ಲಿ ಸ್ವಾತಂತ್ರ್ಯ ನೀಡಬೇಕಾಗಿತ್ತು.

## [iv] ನೋಬೆಲ್ ಬಹುಮಾನದ ಒಂದು ವಿಚಾರ :

ಇಂದು ನೋಬೆಲ್ ಬಹುಮಾನ ಎನ್ನುವುದು ಉನ್ನತ ವಿಜ್ಞಾನ ಕ್ಷೇತ್ರದಲ್ಲಿ ಜಗತ್ತಿನಲ್ಲಿ ಎಲ್ಲರ ಕಣ್ಮಣಿಯಾಗಿದೆ. ಆದರೆ ಭಾರತೀಯರಿಗೆ ಅದು ಗಗನ ಕುಸುಮವಾಗಿದೆ. ಈ ನೋಬೆಲ್ ಪ್ರಶಸ್ತಿಯ ಸ್ಥಾಪಕನು ಕೂಡಾ ಒಬ್ಬ ವಂಶಪಾರಂಪಾರಿಕವಾಗಿ ಶಿಕ್ಷಣ ಪಡೆದ ವಿಜ್ಞಾನಿ ಆಗಿದ್ದನು ಅವನು ಯಾವುದೇ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಲಿಲ್ಲ ಅವನು ಸಂಶೋಧನೆ ಮಾಡುವಾಗ ಕೆಲವು ಸಲ ಸ್ಫೋಟಗಳು ಸಂಭವಿಸಿದವು ಅವನ ಸಂಶೋಧನೆಗಳನ್ನು ಕೆಲವು ಸರ್ಕಾರಗಳು ಬಹಿಷ್ಕಾರ ಹಾಕಿದ್ದವು. ಇನ್ನು ಕೆಲವು ಸರ್ಕಾರಗಳು ಅವರ ಮೇಲೆ ಕಣ್ಗಾವಲು ಇಟ್ಟಿದ್ದವು. ಅವನು ಕಂಡುಹಿಡಿದ ಡೈನಾಮೈಟನಿಂದ ಅವನನ್ನು ಅಂದಿನ ಕಾಲದಲ್ಲಿ ಒಬ್ಬ ದುಷ್ಟನೆಂದು ಸಮಾಜ ಪರಿಗಣಿಸಿತ್ತು. ನೋಬೆಲ್ ಜೀವಂತ ಇರುವಾಗಲೇ ಅವನು ನಿಧನ ಹೊಂದಿದ ಎಂದು ದಿನಪತ್ರಿಕೆಯಲ್ಲಿ ಸುದ್ದಿ ಪ್ರಕಟವಾದಾಗ ದಿನ ಪತ್ರಿಕೆಯ ಸಂಪಾದಕರು ಇಂದು ಜಗತ್ತಿನಿಂದ ಒಂದು ಕಂಟಕ ತೊಲಗಿತು ಎಂದು ಸಂಪಾದಕೀಯ ಲೇಖನ ಬರೆದರು, ಮರುದಿನ ಅದನ್ನು ಓದಿದ ನೋಬೆಲ್‌ನ ಮನಪರಿವರ್ತನೆಯಾಯಿತು. ಆಗ ಅವನು ತನ್ನ ಎಲ್ಲ ಸಂಪತ್ತನ್ನು ತನ್ನ ಹೆಸರಿನಲ್ಲಿ "ನೋಬೆಲ್" ಬಹುಮಾನ ನೀಡುವ ಸಂಸ್ಥೆಯನ್ನು ಸ್ಥಾಪಿಸಿದನು. ಇಂದು ಅವನು ಮಹಾನ್ ಪುರುಷನಾಗಿದ್ದಾನೆ. ಹೀಗೆ <u>ಅನೇಕ ಸಲ ಲೋಕ ಕಂಟಕರಾದ ವ್ಯಕ್ತಿಗಳನ್ನು ಮಹಾ ಪುರುಷರನ್ನಾಗಿ ಮಾಡಲು ಸಾಧ್ಯವಿದೆ.</u> ಈ ಬಗ್ಗೆ ಸಮಾಜಕ್ಕೆ ಸ್ವಾತಂತ್ರ ನೀಡಬೇಕು. ಸಂಶೋಧನೆ ಕೇವಲ ಸರ್ಕಾರದಿಂದ ಸಾಧ್ಯವಿಲ್ಲ, ಅದು ಒಬ್ಬ ವ್ಯಕ್ತಿಯ ಕಲ್ಪನಾ ಶಕ್ತಿಯಿಂದ ಆಗುತ್ತದೆ. ಸರ್ಕಾರ ಅದಕ್ಕೆ ಪ್ರೋತ್ಸಾಹ ಮಾತ್ರ ನೀಡಬಹುದು ಎಂಬುದನ್ನು ನಮ್ಮ ಆಡಳಿತವು ಅರ್ಥ ಮಾಡಿಕೊಳ್ಳಬೇಕು.

## [v] ವೈಮಾನಿಕ ಸಂಶೋಧನೆ ಮತ್ತು ಇಂದಿನ ಸ್ಥಿತಿ :

ಆಧುನಿಕ ಲೋಕದಲ್ಲಿ ಇಂದು ಒಂದು ಹೊಸ ಅವಿಷ್ಕಾರವಾಗಿದೆ. ಸಾಮಾನ್ಯವಾಗಿ ಇಂದು ಬೋಯಿಂಗ್ ಅಥವಾ ಏರ್‌ಬಸ್ ನೋಡಿ ಅದರ ಚಾತುರ್ಯವನ್ನು ಕಂಡು ಬೆರಗಾಗುತ್ತೇವೆ ಮತ್ತು ಅದನ್ನು ನಾವು [ಭಾರತೀಯರು] ಸಿದ್ದಪಡಿಸಲು ಸಾಧ್ಯವಿಲ್ಲವೆಂದು ಭಾವಿಸುತೇವೆ, ಇಂದಿಗೂ ನಾಗರೀಕ ವಿಮಾನಗಳನ್ನು ವಿದೇಶದಿಂದಲೇ ಖರೀದಿಸುತ್ತೇವೆ. ವಾಸ್ತವಿಕವಾಗಿ ರೈಟ್ ಸಹೋದರರು ಕಂಡುಹಿಡಿದ ವಿಮಾನವನ್ನು ಇಂದು ಯಾವುದೇ ತಾಲ್ಲೂಕು ಕೇಂದ್ರದಲ್ಲಿ ಯಾವುದೇ ತಾಂತ್ರಿಕ ಕಾಲೇಜಿನ ವಿದ್ಯಾರ್ಥಿ ಸಿದ್ದಪಡಿಸಿ ಹಾರಿಸಬಹುದು. ಹೀಗೆ ಸಿದ್ದಪಡಿಸಿ ಹಾರಿಸಿದಾಗ ಕೆಲವು ಸಲ ಆಕಸ್ಮಿಕ ಅಪಘಾತಗಳು ನಡೆಯಬಹುದು, ಪ್ರಾಣಕ್ಕೆ ಅಪಾಯವಾಗಬಹುದು, ಇನ್ನೊಬ್ಬರಿಗೆ ಹಾನಿಯಾಗಬಹುದು. ಈ ಹಾನಿಯನ್ನು ನಾವು ಧೈರ್ಯವಾಗಿ ಅನುಭವಿಸಲು ಸಿದ್ದರಾಗಬೇಕು ಆಗಲೇ ನಮ್ಮಲ್ಲಿ ವಿಮಾನ ತಂತ್ರಜ್ಞಾನ ಬೆಳೆಯಲು ಅನುಕೂಲವಾಗುತ್ತದೆ. ಬ್ರಿಟೀಷರು ಸ್ಥಳೀಯರನ್ನು ಈ ವಿಮಾನ ತಂತ್ರಜ್ಞಾನದಿಂದ ದೂರ ಇಟ್ಟಿದ್ದರು. ಇಂದು ಇದು ರಕ್ಷಣೆಗೆ ಸೇರಿದ ವಿಷಯವಾಗಿದೆ. ಇಂದು ಕೂಡಾ ಶ್ರೀ ಸಾಮಾನ್ಯನು ಈ ಬಗ್ಗೆ ಪ್ರಯೋಗ ಮಾಡಲು ಎಂದಿಗೂ ಸಾಧ್ಯವಿಲ್ಲ. ಜಿಲ್ಲಾ ಪಂಚಾಯ್ತಿ / ತಾಲ್ಲೂಕು ಪಂಚಾಯ್ತಿ ಮತ್ತು ಸ್ಥಳೀಯ ಸರ್ಕಾರಗಳ ಬೆಂಬಲದಿಂದ ಇಲ್ಲಿಯ ಜನರು ರೈಟ್ ಸಹೋದರರು ತಯಾರಿಸಿದ ಮಾದರಿಯ ವಿಮಾನವನ್ನು ತಯಾರಿಸಿ ಹಾರಿಸಲು ಸ್ವಾತಂತ್ರವಿಲ್ಲ. ಇಂದು ಯಾವುದಾದರು ಮೋಟಾರ ಬೈಕ್ ಎಂಜಿನ ಅಳವಡಿಸಿ ರೈಟ್ ಸಹೋದರರಿಗಿಂತ ಉತ್ತಮವಾದ ವಿಮಾನ ತಯಾರಿಸಬಹುದು. ಅದಕ್ಕೆ ಸಾವಿರಾರು ಕೋಟಿ ರೂಪಾಯಿಗಳ ವಿಮಾನ ನಿಲ್ದಾಣ ಬೇಕಾಗಿಲ್ಲ. ಹೀಗಾಗ ಬೇಕಾದರೆ ಶ್ರೀಸಾಮಾನ್ಯನಿಗೆ ಸ್ವಾತಂತ್ರಬೇಕು. ಈ ಸ್ವಾತಂತ್ರವನ್ನು ಕೇಂದ್ರ ಸರ್ಕಾರವು ಭದ್ರವಾಗಿ ಹಿಡಿದುಕೊಂಡಿದೆ ಮತ್ತು ಬ್ರಿಟೀಷರು ಹೇಗೆ ನಮ್ಮನ್ನು ಪರಕೀಯರಾಗಿ ನೋಡುವ ನೀತಿಯನ್ನು ಹೊಂದಿದ್ದರೊ ಇಂದಿಗೂ ನಮ್ಮ ಸರ್ಕಾರವು ನಮ್ಮನ್ನು ಹಾಗೆಯೇ ನೋಡುತ್ತಾ ಇದೆ ಅದೇ ನೀತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದೆ. ಇದೇ ನಮ್ಮ ಇಂದಿನ ಜಡತ್ವವಾಗಿರುತ್ತದೆ. ಸರ್ಕಾರದ ನೀತಿ ಅಮೂಲಾಗ್ರವಾಗಿ ಬದಲಾಗಬೇಕಾಗಿದೆ.

೨ನೇ ಮಹಾಯುದ್ದದ ಸಮಯದಲ್ಲಿ ಅಮೇರಿಕಾ ದೇಶದಲ್ಲಿ ದೊಡ್ಡ ದೊಡ್ಡ ವಿಮಾನಗಳನ್ನು ತಯಾರಿಸಲು ಸ್ಪರ್ದೆ ಏರ್ಪಡಿಸಲಾಗಿತ್ತು. ವಿಮಾನ ತಯಾರಿಸಲು ಬೇಕಾಗುವ ಎಲ್ಲ ಸಾಮಗ್ರಿಗಳನ್ನು ಸಿಬ್ಬಂದಿಗಳನ್ನು ರಕ್ಷಣಾ ಇಲಾಖೆಯು ಉಚಿತವಾಗಿ ನೀಡುತ್ತಿತ್ತು ಮತ್ತು ಆಸಕ್ತಿ ಇದ್ದವರು ತಮ್ಮ ತಮ್ಮ ವಿಮಾನ ನಕ್ಷೆಗಳ ಪ್ರಕಾರ ವಿಮಾನ ಸಿದ್ದಪಡಿಸಿ ಅದನ್ನು ಹಾರಾಟಮಾಡಿ ತೋರಿಸಬೇಕಾಗಿತ್ತು. ಅದರಿಂದ ಇಂದು ಖಾಸಗಿ ಕಂಪನಿಗಳು ಅಮೇರಿಕಾದಲ್ಲಿ ವಿಮಾನ ತಯಾರಿಸುತ್ತವೆ. ಆದರೆ ನಮ್ಮಲ್ಲಿ ವಿಮಾನ ತಯಾರಿಕೆ ಕಂಪನಿ ಕಂಪೌಂಡಿನ ಹತ್ತಿರ ಶ್ರೀಸಾಮಾನ್ಯನು ಹೋಗಲು ಸಾಧ್ಯವಿಲ್ಲ, ಒಂದು ಪಕ್ಷ ಹೋದಲ್ಲಿ ಅವನನ್ನು ಬಂದಿಸಿ ವಿಚಾರಣೆ ನಡೆಸಲಾಗುತ್ತದೆ. [ಇಲ್ಲಿ ನೆನಪಿಡಬೇಕಾದ ಅಂಶವೆಂದರೆ ರೈಟ್ ಸಹೋದರರು ವಿಶ್ವ ವಿದ್ಯಾಲಯದ ಉನ್ನತ ಶಿಕ್ಷಣ ಪಡೆದವರಲ್ಲ ಒಬ್ಬನು ಎಸ್.ಎಸ್.ಎಲ್.ಸಿ ವರೆಗೂ ಕಲಿಯಲಿಲ್ಲ, ಇನ್ನೊಬ್ಬನು ಡಿಪ್ಲೊಮಾವರೆಗೆ ಮಾತ್ರ ಕಲಿತಿದ್ದನು] ಇಂದಿನ ಉನ್ನತ ಸಂಶೋಧನೆಗಳು ೧೦೦ ವರ್ಷಗಳ ಮೊದಲು ತಳಮಟ್ಟದ ಸಂಶೋಧನೆಗಳಾಗಿದ್ದವು. ರೈಟ್ ಸಹೋದರರು ವಿಮಾನ ತಯಾರಿಸಬೇಕೆಂದು ಯಾರೂ ಅವರಿಗೆ ಆದೇಶ ಮಾಡಲಿಲ್ಲ ಯಾವ ಸರ್ಕಾರವೂ ಅವರಿಗೆ ಆದೇಶ ಮಾಡಲಿಲ್ಲ ರೈಟ್ ಸಹೋದರರು ತಮ್ಮ ಕುತೂಹಲಕ್ಕಾಗಿ ವಿಮಾನ ತಯಾರಿಸಿದರು. ಸಮಾಜವು ಅದಕ್ಕೆ ಪ್ರೋತ್ಸಾಹ ನೀಡಿತು ಸರ್ಕಾರ ಬೆಂಬಲಿಸಿತು. ಇಂದು ನಮ್ಮಲ್ಲಿ ಇಂತಹ ನೂರಾರು ರೈಟ್ ಸಹೋದರರು ಇದ್ದಾರೆ. ಆದರೆ ಅವರನ್ನು ಗುರುತಿಸುವ ವ್ಯವಸ್ಥೆ ಆಗಬೇಕಾಗಿದೆ. ನಮ್ಮ ಇಂದಿನ ಆಡಳಿತ ವ್ಯವಸ್ಥೆಯಲ್ಲಿ ಯಾರಾದರೂ ಈ ಬಗ್ಗೆ ಸಂಶೋಧನೆ ಮಾಡಲು ಪ್ರಯತ್ನಿಸಿದರೆ ಸ್ಥಳೀಯ ಪೋಲಿಸರು, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ, ಜಿಲ್ಲಾಡಳಿತಗಳು ಆ ಸಂಶೋಧನಾ ಚಟುವಟಿಕೆಯನ್ನು ನಾನಾ ನಿಯಮಗಳ ಅಡಿಯಲ್ಲಿ ಪ್ರತಿಬಂದಿಸಲು ವ್ಯವಸ್ಥೆ ಇದೆ. ಪ್ರೋತ್ಸಾಹಕ್ಕಾಗಿ ಎಲ್ಲಿಯೂ ಅವಕಾಶವೇ ಇಲ್ಲ ಇದೇ ನಮ್ಮ ದುರಂತವಾಗಿದೆ ನಾವು ನಮ್ಮ ದೇಶ ವಿಜ್ಞಾನದಲ್ಲಿ ಮುಂದುವರಿಯಬೇಕಾದರೆ ಶ್ರೀ ಸಾಮಾನ್ಯರು ಆ ಸಂಶೋಧನೆಗಳು ತಳಮಟ್ಟದಲ್ಲಿರುವಾಗಲೇ ಸಂಶೋಧಿಸಲು ಅವರಿಗೆ ಪ್ರೋತ್ಸಾಹ ನೀಡಲು ಸರ್ಕಾರ ಪ್ರಯತ್ನಿಸಬೇಕು. ಸಂಶೋಧನೆಗಳು ಸಂಕೀರ್ಣಗೊಂಡಾಗ ಅವು ಸುಲಭವಾಗಿ ಅರ್ಥವಾಗಲಾರದ ಹಂತಕ್ಕೆ ತಲುಪಿದಾಗ ಆಗ ನಾವು ವಿದೇಶಗಳ ಮೇಲೆ ಅವಲಂಭಿತರಾಗಬೇಕಾಗುತ್ತದೆ. ಪ್ರಾರಂಭದಲ್ಲಿ ಯಾವುದೇ ಸಂಶೋಧನೆಗಳಿಂದ ಆರ್ಥಿಕವಾಗಿ ಲಾಭವಿರಲಾರದು ಆದರೆ ಸಾಹಸ ಮತ್ತು ಮನೋರಂಜನೆ ಮಾತ್ರವಿರುತ್ತದೆ. ಲಾಭಕ್ಕಾಗಿ ವಿಜ್ಞಾನ ಸಂಶೋಧನೆ ಮಾಡಲು ಸಾಧ್ಯವಿಲ್ಲ. ಕುತೂಹಲ ಮತ್ತು ಜ್ಞಾನಕ್ಕಾಗಿ ಸಂಶೋಧನೆ ಮಾಡಬೇಕು. ಸಂಶೋಧನೆ ಒಂದು ಹಂತಕ್ಕೆ ತಲುಪಿದಾಗ ಅದು ಆರ್ಥಿಕವಾಗಿ ಪ್ರಯೋಜನಕ್ಕೆ ಬರುತ್ತದೆ.

ಇಂದು ವಿಮಾನ ತಯಾರಿಕೆ ಎಷ್ಟು ಮುಂದುವರೆದಿದೆ ಎಂದರೆ ಅಮೇರಿಕಾ ದೇಶವು ರಾಡಾರ್ ಕಣ್ಣಿಗೆ ಕಾಣದ ವಿಮಾನಗಳನ್ನು ಸಂಶೋಧಿಸಿದೆ. ಅವುಗಳಿಗೆ Selth Bomber ಎಂದು ಕರೆಯಲಾಗುತ್ತದೆ. ಅಂತ: ೨-೩ ವಿಮಾನಗಳನ್ನು ಭಾರತದ ವಿರುದ್ದ ಉಪಯೋಗಿಸಿದರೆ. ಭಾರತದ ವಾಯು ಬಲವು ಒಂದೇ ದಿನದಲ್ಲಿ ನೆಲಕಚ್ಚುತ್ತದೆ. ಈ ಹಂತದಲ್ಲಿ ಅಮೇರಿಕಾ ದೇಶವು ತನ್ನ ನಿರುಪಯೋಗಿಯಾದ ಎಫ್-೧೬, ಎಫ್-೧೮ ವಿಮಾನಗಳನ್ನು ಭಾರತಕ್ಕೆ ಮಾರಾಟ ಮಾಡುವುದಾಗಿ ಹೇಳುತ್ತದೆ. ಅದಕ್ಕಾಗಿ ನಾವು ಅಮೇರಿಕಾ ದೇಶಕ್ಕೆ ಚಿರಋಣಿಗಳಾಗಿದ್ದೇವೆ. ಇದು ನಮ್ಮ ದೌರ್ಭಾಗ್ಯವಾಗಿದೆ.

ಈ ಸಂಶೋಧನೆಯು ಈಗ ನಮ್ಮ ವ್ಯಾಪ್ತಿಯಲ್ಲಿ ಇಲ್ಲ ಇದೂ ಕೂಡಾ ತಳಮಟ್ಟದಿಂದ ಮೇಲ್ಮಟ್ಟಕ್ಕೆ ಹೋಗಿರುತ್ತದೆ. ನಮ್ಮ ಜನರಿಗೆ ಆಗ ಆ ಸಂಶೋಧನೆ ಮಾಡಲು ಸ್ವತಂತ್ರ ನೀಡಲು ಯಾರು ಅಡ್ಡಿಯಾಗಿದ್ದರು ಮತ್ತು ಈಗ ಯಾರು ಅಡ್ಡಿಯಾಗಿದ್ದಾರೆ? ಈ ಪ್ರಶ್ನೆಗೆ ಸಧ್ಯಕ್ಕೆ ಸುಲಭ ಉತ್ತರವಿಲ್ಲ. ಉತ್ತರ ಕಂಡು ಹಿಡಿಯಬೇಕಾಗಿದೆ ಮತ್ತು ಸರಿಪಡಿಸಬೇಕಾಗಿದೆ.

**ಟಿಪ್ಪಣಿ::** ಈ ವಿಷಯಕ್ಕೆ ಸಂಭಂಧಿಸಿದಂತೆ ೧೭.೦೭.೨೦೦೬ರಂದು ನವಭಾರತ್ ಟೈಂಸ್, ನವದೆಹಲಿ ದಿನಪತ್ರಿಕೆ ದಿನಾಂಕ ೧೭.೦೫.೨೦೦೬ರ ಸಂಚಿಕೆಯಲ್ಲಿ ಒಂದು ಸುದ್ದಿ ಪ್ರಕಟವಾಯಿತು ಅದರ ತಲೆಬರಹ "ಭಾರ್ವೀ ಮುಸ್ತಕೀಮ್‌ನೇ ಹೆಲಿಕ್ಯಾಪ್ಟರ್ ಬನಾಯತೋ ಪೋಲೀಸ್ ಬೋಲಿ–ಕಬರ್ದಾರ್" ಎಂದು ಮುದ್ರಿತವಾಗಿತ್ತು [ಅನುಬಂದ ೧೨ ನೋಡಿರಿ]. ಸದರಿ ಸುದ್ದಿಯಲ್ಲಿ ೧೨ನೇ ತರಗತಿಯ ವಿದ್ಯಾರ್ಥಿಯೊಬ್ಬನು ಹೆಲಿಕ್ಯಾಪ್ಟರ್ ಸಿದ್ದಪಡಿಸಿ ಹಾರಿಸಲು ಪ್ರಯತ್ನಿಸಿದಾಗ ಸ್ಥಳೀಯ ಪೋಲೀಸರು ಆಗಮಿಸಿ ಅವನನ್ನು ಬಂದಿಸಿ ಜಿಲ್ಲಾಧಿಕಾರಿಗಳ ಅಪ್ಪಣೆಯಿಲ್ಲದೆ ತಾನು ಸಿದ್ದಪಡಿಸಿದ ಹೆಲಿಕ್ಯಾಪ್ಟರ್ ಹಾರಿಸುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟ ತರುವಾಯವೇ ಅವನನ್ನು ಬಿಡುಗಡೆ ಮಾಡಲಾಯಿತು. ಆದರೆ ಜಿಲ್ಲಾಧಿಕಾರಿಗಳು ಅವನಿಗೆ ಪರವಾನಿಗಿ ಕೊಟ್ಟರೋ ಅಥವಾ ಕೊಡಲಿಲ್ಲವೋ ಎಂಬ ಬಗ್ಗೆ ಇಂದು ಯಾರೂ ವಿಚಾರಿಸುವ ಸೌಜನ್ಯವನ್ನಾಗಲೀ, ಸಮಾಧಾನವನ್ನಾಗಲಿ ಹೊಂದಿರುವುದಿಲ್ಲ. ಅವನು ಹೆಲಿಕ್ಯಾಪ್ಟರ್ ಹಾರಿಸಿದರೆ ಅದು ಹಾರಾಟದಲ್ಲಿ ವಿಫಲವಾಗಿ ನೆಲಕ್ಕೆ ಬಿದ್ದರೆ ಯಾರದಾದರೂ ಪ್ರಾಣಕ್ಕೆ ಆಸ್ತಿಗೆ ಹಾನಿ ಆಗಬಹುದೆಂದು ಭಾವಿಸಿ ಪೋಲೀಸರು ಅವನನ್ನು ನಿರ್ಭಂಧಿಸಿದರು ಆದರೆ ರಾಷ್ಟ್ರ ಪ್ರಗತಿಯ ಬಗ್ಗೆ ನಮ್ಮ ಆಡಳಿತ ಅಭಿಮಾನ ಹೊಂದಿದ್ದರೆ ಅವನು ನಿರ್ಜನ ಪ್ರದೇಶದಲ್ಲಿ ಹಾರಾಟಮಾಡಲು ಅನುಮತಿಸಬೇಕಾಗಿತ್ತು. ಹಾನಿಯಾದಲ್ಲಿ ಅದಕ್ಕಾಗಿಯೇ ಮುಂಗಡವಾಗಿ ವಿಮೆ ಮಾಡಿಸಬಹುದಾಗಿತ್ತು. ಅಮೇರಿಕಾದ ರೈಟ್ ಸಹೋದರರು ಪ್ರಯೋಗಾರ್ಥವಾಗಿ ತಮ್ಮ ವಿಮಾನವನ್ನು ಹಾರಿಸುವಾಗ ಅಲ್ಲಿಯ ಸರ್ಕಾರದ ಅನುಮತಿಯನ್ನು ಪಡೆದಿರಲಿಕ್ಕೆ ಇಲ್ಲ, ಸರ್ಕಾರವು ಅತಂಹ ನಿರ್ಭಂಧನೆಯನ್ನು ವಿಧಿಸಿರಲು ಸಾಧ್ಯವಿಲ್ಲ. ಆದರೆ ಭಾರತದಲ್ಲಿ ಇಂದಿಗೂ ಹೀಗೆ ನಿರ್ಭಂಧ ವಿಧಿಸುತ್ತಿರುವುದು ಶೋಚನೀಯ ವಿಷಯವಾಗಿದೆ.

# ಅಧ್ಯಾಯ–೧೦: ಮನುಕುಲದ ಸಂಶೋಧನೆಯ ಮಹತ್ವದ ಹಂತಗಳು:

**[ಅಂತಿಮ ಸಂಶೋಧನೆ ಅಮರತ್ವ, ಭಾಗವತ್ ಪುರಾಣದಲ್ಲಿ ಅಮೃತ ಸಂಶೋಧನೆಯ ಹಂತಗಳು ಮತ್ತು ಇಂದಿಗೆ ಅವುಗಳ ಪ್ರಸ್ತುತತೆ]**

ಭಾರತದ ಪ್ರಾಚೀನ ಪುರಾಣಗಳಲ್ಲಿ ಸಂಶೋಧನೆಗೆ ಸಂಭಂಧಿಸಿದಂತೆ ಭಾಗವತ್ ಪುರಾಣದಲ್ಲಿ ಸಾಗರ ಮಂಥನ ಅಥವಾ ಕ್ಷೀರಸಾಗರ ಮಂಥನ ಎಂಬ ಅಧ್ಯಾಯ ಬರುತ್ತದೆ. ಅದರಲ್ಲಿ ಸಂಶೋಧನೆಗಳ ಯಾದಿ ಮಾಡಲಾಗಿದ್ದು. ಅಂದಿನ ಪ್ರಮುಖ ಸಂಶೋಧನೆಗಳನ್ನು ಕುತೂಹಲಕ್ಕಾಗಿ ಪರಿಶೀಲಿಸಬಹುದಾಗಿದೆ.

೧. **ಹಾಲಾಹಲ:** ಇದು ಭಾರಿ ವಿಷ, ವಾಯು ರೂಪದ ವಿಷವನ್ನು ಶಿವನು ಕುಡಿದನು ಎಂದು ಹೇಳಲಾಗಿದೆ. ಅದು ಇಂದಿನ ಪರಿಸರ ಮಾಲಿನ್ಯಕ್ಕೆ ಸಮನಾಗಿದೆ ಅದರ ಪರಿಹಾರ ಭಾಗವತ್ ಪುರಾಣದಲ್ಲಿ ಮಾಡಲಾಗಿತ್ತು. ಪರಮಾತ್ಮನಾದ ಶಿವನು ಅದನ್ನು ಕುಡಿದನು ಎಂದು ಹೇಳಲಾಗಿದೆ. ಶಿವನು ಇಂದಿನ ನಮ್ಮ ಸುಪ್ರೀಮ್ ಕೋರ್ಟ ಇದ್ದಂತೆ ಇಲ್ಲಿ ಗೂಡಾರ್ಥವು ಅಡಗಿದೆ ಅದು ಇನ್ನು ಮೂಡಿಬರಬೇಕಾಗಿದೆ.

೨. **ಕಾಮಧೇನು ಎಂಬ ಹಸು**: ಇದು ಕೇವಲ ಹಾಲು ನೀಡುವ ಹಸುವಾಗಿರದೆ ಸಾವಿರಾರು ಜನರಿಗೆ ಅತೀ ಅಲ್ಪ ಸಮಯದಲ್ಲಿ ಆಹಾರ ಪೂರೈಸುವ ಸಾಧನವಾಗಿತ್ತು. ಇದಕ್ಕಾಗಿ ವಿಶ್ವಾಮಿತ್ರನು ವಶಿಷ್ಠರೊಂದಿಗೆ ಯುದ್ದ ಮಾಡಬೇಕಾಯಿತು. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಆಹಾರ ಸಂಬಂದ ಸಂಶೋಧನೆಗಳನ್ನು ನಾವು ಮಾಡಬಹುದು [ಸಿದ್ದಪಡಿಸಿದ ಆಹಾರ ಪದಾರ್ಥಗಳು]

೩. **ಕುದುರೆ:** ಇದನ್ನು ಮನೋವೇಗದ ಕುದುರೆ ಎಂದು ಹೇಳಲಾಗಿದೆ. ಚಲನವು ಆಧುನಿಕ ಜೀವನದ ಪ್ರಮುಖ ಅಂಶ. ಚಲನೆಗೆ ಸಂಬಂಧಿಸಿದಂತೆ ಇಂದಿನ Automobile, Rocket, Aeroplane ಇತ್ಯಾದಿಗಳು ಎಂದು ಅರ್ಥೈಸಬಹುದು.

೪. **ಐರಾವತ ವಿವಿಧ ಬಗ್ಗೆಯ ಆನೆಗಳು**: ಇವು ಇಂದಿನ ಭಾರಿ ಯಂತ್ರಗಳ ಹಾಗೆ ಕ್ರೇನ್ ಬುಲ್ ಡೋಜರ್‌ಗೆ ಸರಿ ಸಮವಾದ ಭಾರಿ ಯಂತ್ರಗಳು ಎಂದು ಅರ್ಥೈಸಬಹುದು.

೫. **ಕೌಸ್ತುಭ ರತ್ನ:** ಇದು ಬೆಳಕು ನೀಡುವ ವಸ್ತು ವಿದ್ಯುತ್ ಇಲ್ಲದೆ ರಾತ್ರಿ ಹಗಲು ಬೆಳಕು ನೀಡುವ ಒಂದು ಸ್ವಯಂ ಸೋಲಾರ್ ದೀಪ ಈ ಬಗ್ಗೆ ಇನ್ನು ಸಂಶೋಧನೆಗಳು ನಡೆಯಬೇಕಾಗಿದೆ.

೬. **ಪಾರಿಜಾತ – ಇದು ಎಂದೂ ಬಾಡದ ಹೂ:** ಪ್ಲಾಸ್ಟಿಕ್ ಹೂಗಳು ಬಂದಿವೆ. ಅಂದರೆ ಎಂದೂ ಕೆಡದಂತೆ ಇಡುವದು. ಸದಾ ನವೀನವಾಗಿರುವ ಕೋಮಲವಾಗಿರುವ ವಸ್ತು ಇನ್ನೂ ಸಂಶೋಧಿಸಬೇಕಾಗಿದೆ.

೭. **ಅಪ್ಸರಾ ಸ್ತ್ರೀಯರು:** ಇವರು ಹೆಣ್ಣುಗಳಲ್ಲ ಮನೋರಂಜನೆ ನೀಡುವ ಮತ್ತು ಮನೆ ಕೆಲಸ ಮಾಡುವ ಯಂತ್ರಗಳು ಮತ್ತು ವಿಮಾನದಲ್ಲಿ ಗಗನಸಖಿಯರು ಇರುವಂತೆ ದೇವ ಲೋಕದಲ್ಲಿ ಪರಿಚಾರಿಕೆ ಕೆಲಸ ಮಾಡುವ ಪರಿಪೂರ್ಣ ಯಂತ್ರಗಳು ಈ ದಿಶೆಯಲ್ಲಿ ಇನ್ನೂ ಬಹಳಷ್ಟು ಸಂಶೋಧನೆ ನಡೆಯಬೇಕಿದೆ.

೮. **ಲಕ್ಷ್ಮೀ:** ಇಲ್ಲಿ ಅನೇಕ ಲಕ್ಷ್ಮೀಯರು ಉತ್ಪತ್ತಿಯಗಿದ್ದಾರೆ. ಇವು ಕೂಡಾ ಪರಿಪೂರ್ಣವಾದ ಕಂಪ್ಯೂಟರ್ ಗಳು ಮಾತ್ರ ಇವು ವಿವಿದ ಬಗೆಯ ಮೂಲ ವಸ್ತುಗಳನ್ನು ಅತೀ ಸುಲಭವಾಗಿ ಮಣ್ಣಿನಿಂದ [ಬಂಗಾರವೂ ಸೇರಿದಂತೆ] ಬೇರ್ಪಡಿಸುವ ಯಂತ್ರಗಳು ಮತ್ತು ಇಂದಿನ ಕ್ರೆಡಿಟ್ ಕಾರ್ಡ ತಂತ್ರಜ್ಞಾನದ ಭಾಗಗಳು ಆಗಿವೆ. ನಾವು ಲಕ್ಷ್ಮೀಯನ್ನು ಹೆಣ್ಣು ಎಂದು ಭಾವಿಸುತ್ತೇವೆ. ಇವೆಲ್ಲವೂ ಗೂಡಾರ್ಥದಿಂದಗೂಡಿದ ವಿಷಯವಾಗಿವೆ. ಲಕ್ಷ್ಮೀ ಹೆಣ್ಣು ಅಲ್ಲ ಗಂಡು ಅದು ಒಂದು ಯಂತ್ರ ರೂಪದಲ್ಲಿ ಮಾಡಿದ ವ್ಯವಸ್ಥೆಯಾಗಿರುತ್ತದೆ.

೯. **ಸರಾಯಿ:** ಸಾರಾಯಿ ನಂತರದ ಉತ್ಪನ್ನವಾಗಿದೆ. ಇದು ಅಮೃತಕ್ಕೆ ಸಮೀಪವಾಗಿದೆ. ಇದಕ್ಕೆ ಒಂದು ಸಲ ಅಂಟಿಕೊಂಡವನು ಅದರಿಂದ ಹೊರಬರುವುದು ತುಂಬಾ ಕಷ್ಟಕರ. ಈ ಬಗ್ಗೆ ಹೆಚ್ಚಿನ ಸಂಶೋಧನೆ ಆಗಬೇಕಿದೆ. ಇದು ಕೇವಲ ಸರಾಯಿ ಆಗಿರದೆ ಅಫೀಮು, ಗಾಂಜಾ, ಚರಸ, ಅನೆಸ್ಥೀಶಿಯಾ ಇತ್ಯಾದಿಗಳು ಇದರಲ್ಲಿ ಸೇರಿವೆ. ಮಾನವನ ಅತೀ ಪ್ರೀತಿಯ ವಿಷಕಾರಿ ವಸ್ತುವಾಗಿದೆ.

೧೦. **ಅಮೃತ:** ಇದು ಧನ್ವಂತರಿಯೊಂದಿಗೆ ಬರುತ್ತದೆ. ಧನ್ವಂತರಿಯು ಮನುಷ್ಯನಲ್ಲಾ ದೇವತೆಯೂ ಅಲ್ಲಾ ಅದು ಎಲ್ಲ ವೈದ್ಯಕೀಯ ಜ್ಞಾನವನ್ನು ಹೊಂದಿರುವ ಒಂದು ಅದ್ಬುತ ಯಂತ್ರ [ಕಂಪ್ಯೂಟರ್] ಮಾತ್ರ ಕಾಲಾಂತರದಲ್ಲಿ ಅದು ನಮಗೆ ದೇವರಾಗಿದೆ ಆಯುರ್ವೇದದ ಮೂಲ ಪುರುಷ ಧನ್ವಂತರಿಯಾಗಿರುತ್ತಾನೆ. ಹೀಗಾಗಿ ಆಯುರ್ವೇದ ಬಗ್ಗೆ ನಾವು ಅತೀ ಆಳವಾಗಿ ಅಧ್ಯಾಯ ಮಾಡುವುದು ಯಾವಾಗಲೂ ಅವಶ್ಯಕವಾಗಿರುತ್ತದೆ. ಇಂದು ಮಾನವನು ಕೈಗೊಳ್ಳಬಹುದಾದ ಅಂತಿಮ ಸಂಶೋಧನೆ ಅಂದರೆ ಅಮೃತ. ಈ ಸಂಶೋಧನೆಗೆ ತಲುಪುತ್ತಿದ್ದಂತೆ ನಾಗರೀಕತೆ ತಿರುವು ಮುರುವು ಆಗುತ್ತದೆ. ಪಾಶ್ಚಾತ್ಯ ದೇಶದಲ್ಲಿ ಈಗ ಶಿಷ್ಯರು ಗುರುವಿಗಿಂತ ಹೆಚ್ಚಿನ ಸಂಶೋಧನೆ ಮಾಡುತ್ತಿದ್ದಾರೆ. ಒಂದು ಸಾರಿ ಅಮರತ್ವ ಸಾಧನೆ ಆಗುತ್ತಿದ್ದಂತೆ ಗುರುವು ಶ್ರೇಷ್ಠನಾಗಿರುತ್ತಾನೆ. ವಿಧ್ಯೆಯನ್ನು ಶಿಷ್ಯರಿಗೆ ಕಲಿಸುವಾಗ ಅತೀ ರಹಸ್ಯವನ್ನು ತನ್ನ ಶಿಷ್ಯರಿಗೆ ಹೇಳುವುದಿಲ್ಲ ಏಕೆಂದರೆ ಅವನು ಅಮರನಾಗಿರುತ್ತಾನೆ. ನಮ್ಮ ಪುರಾಣಗಳಲ್ಲಿ ಅಮರತ್ವಕ್ಕಾಗಿ ರಾಕ್ಷಸರು ಬಹಳ ಪ್ರಯತ್ನ ಪಟ್ಟಿರುತ್ತಾರೆ. ಆದರೆ ದೇವತೆಗಳು ಅದು ಫಲಿಸದಂತೆ ನೋಡಿಕೊಂಡಿರುತ್ತಾರೆ. ಇಂದಿಗೂ ಕೂಡಾ ಮುಂದುವರಿದ ದೇಶಗಳು ಯಾವಾಗಲೂ ಮುಂದೆ ಇರುತ್ತವೆ. ಅವು ಹಿಂದೆ ಬೀಳದಂತೆ ಎಚ್ಚರಿಕೆ ವಹಿಸುತ್ತವೆ. ಈ ವಿಷಯವನ್ನು ಪ್ರಸ್ಥಾಪಿಸುವ ಉದ್ದೇಶವೇನೆಂದರೆ ಈಗಿನ ಎಲ್ಲ ಧರ್ಮಗಳು ತಾತ್ವಿಕವಾಗಿ ಸಂಶೋಧನೆಯ ವಿರೋಧಿಗಳಾಗಿದ್ದರೂ ಪುರಾಣ ಪೂರ್ವದಲ್ಲಿ ಅಂದಿನ ಜನಾಂಗಗಳು ಸಂಶೋಧನೆಗೆ ಮಹತ್ವ ನೀಡಿದ್ದವು ಎಂಬ ಬಗ್ಗೆ ಇದು ಒಂದು ಅಧಿಕೃತ ಧಾರ್ಮಿಕ ದಾಖಲೆ ಎಂಬ ಅಂಶವನ್ನು ನಮ್ಮ ಇಂದಿನ ಧಾರ್ಮಿಕ ಧುರೀಣರು ಅರ್ಥ ಮಾಡಿಕೊಂಡು ಈ ತಳಮಟ್ಟದ ಸಂಶೋಧನೆಗೆ ಸಂತೋಷವಾಗಿ ಸಹಕರಿಸಲಿ ಎಂಬುದೇ ನಮ್ಮ ಆಶಯವಾಗಿರುತ್ತದೆ.

ಕ್ರೈಸ್ತ ಮತ್ತು ಇಸ್ಲಾಂ ಧರ್ಮದಲ್ಲಿ ಮೇಲಿಂದ ಮೇಲೆ ಸೈತಾನನ ಉಲ್ಲೇಖ ಬರುತ್ತದೆ. ಅದೇ ಪ್ರಕಾರ ವೈಧಿಕ ಧರ್ಮದಲ್ಲಿ ಅಸುರರು, ರಾಕ್ಷಸರ ಉಲ್ಲೇಖ ಬರುತ್ತದೆ. ಎಲ್ಲ ಧರ್ಮಗಳಲ್ಲಿ ಸೈತಾನನ ಮತ್ತು ಅಸುರರನ್ನು ಬಹಿಷ್ಕರಿಸಲಾಗಿದೆ, ಅವಹೇಳನ ಮಾಡಲಾಗಿದೆ. ಅವರನ್ನು ಸಮಾಜದಿಂದ ಹೊರಕ್ಕೆ ಇಡಲಾಗಿದೆ. ಭಾಗವತ್ ಪುರಾಣದ ಪ್ರಕಾರ ವೈಜ್ಞಾನಿಕ ಬೆಳವಣಿಗೆ ಆಗಬೇಕಾದರೆ ಒಂದು ವಿಷಯವನ್ನು ನಮ್ಮಲ್ಲಿ ಇರುವ ಸೈತಾನನ ದೃಷ್ಟಿಯಿಂದ ಮತ್ತು ಅದೇ ವಿಶೇಷವನ್ನು ನಮ್ಮಲ್ಲಿ ಇರುವ ಸಂತನ ದೃಷ್ಟಿಯಿಂದ ನೋಡಬೇಕಾಗಿದೆ. ಈ ಸಂತ ಮತ್ತು ಸೈತಾನರ, ಪರಸ್ಪರ ಸಹಜೀವನ ಮಾಡುವಾಗಲೇ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನಗಳು ಪ್ರಗತಿಯಾಗುತ್ತವೆ ಸಂತ ಮತ್ತು ಸೈತಾನರು ಅಣ್ಣ ತಮ್ಮಂದಿರು ಎಂದು ಹೇಳಲಾಗುತ್ತದೆ. ಅಮೃತ ಸಂಶೊಧನೆಯಲ್ಲಿ ಸಂತ ಸೈತಾನರು ಸಮಪಾಲು ಹೊಂದಿದ್ದರು ಎಂಬುದನ್ನು ಕೂಡಾ ಸಾಮಾಜಿಕವಾಗಿ ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಹೀಗೆ ಅರ್ಥೈಸಿದಾಗ ನಮ್ಮ ಧರ್ಮ ಗ್ರಂಥ ರಚನಕಾರರ ಮನೋವೈಜ್ಞಾನಿಕ ಸ್ಥಿತಿಯ ಮಟ್ಟವನ್ನು ನಾವು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ. ಹೀಗಾಗಿ ಸಂಶೋಧನೆಯು ಎಂದಿಗೂ ಧರ್ಮವಿರೋಧಿಯಲ್ಲ. ಸಂಶೋಧನೆಗಳ ದುರುಪಯೋಗವು ಧರ್ಮ ವಿರೋಧಿಯಾಗಿದೆ.

# ಅಧ್ಯಾಯ-೧೧: ರಾಷ್ಟ್ರೀಯ ಅನುಸಂಧಾನ ಸಂಸ್ಥೆ [National InnovationFoundation-NIF] ಸ್ಥೂಲ ಸ್ವರೂಪ:

ಈಗಾಗಲೇ ವಿವರಿಸಿದ ಅಂಶಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನದ ಇಲಾಖೆ ಅಡಿಯಲ್ಲಿ ಮಾರ್ಚ್ ೨೦೦೦ ದಲ್ಲಿ ನ್ಯಾಷನಲ್ ಇನ್ನೋವೇಷನ್ ಫೌಂಡೇಷನ್ ಎಂಬ ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯ ಉದ್ದೇಶವು ಉನ್ನತ ಶಿಕ್ಷಣ ಪಡೆಯದ ಜನರಿಂದ ನಡೆಯುವ ಕೃಷಿ ಸಂಬಂಧಿಸಿದ ಸಂಶೋಧನೆಗೆ ಮಾತ್ರ ಸೀಮಿತವಾಗಿದೆ ಹೊರತು ಮಾನವನ ಒಟ್ಟು ಜ್ಞಾನ, ವಿಜ್ಞಾನ, ತಂತ್ರಜ್ಞಾನ ವಿಷಯಗಳ ವ್ಯಾಪ್ತಿಯನ್ನು ಒಳಗೊಂಡಿರುವುದಿಲ್ಲ. ಆದರೆ ಜ್ಞಾನವು ಅಪರಿಮಿತ ವಿಷಯವಾಗಿದೆ ಮತ್ತು ಒಂದು ಕ್ಷೇತ್ರದ ಪ್ರಗತಿ ಇನ್ನೊಂದು ಕ್ಷೇತ್ರದ ಪ್ರಗತಿಗೆ ಕಾರಣವಾಗುತ್ತದೆ. ಈ ಅಂಶವನ್ನು ಗಮನದಲ್ಲಿರಿಸಿ ಇಲ್ಲಿ ಕೃಷಿ ಕ್ಷೇತ್ರಕ್ಕೆ ನೀಡುತ್ತಿರುವ ಆದ್ಯತೆಯನ್ನು ಕೇಂದ್ರ ಸರ್ಕಾರವು ಬದಲಾಯಿಸಿ ಸ್ಥಳೀಯ ಜನರ ಆಶೋತ್ತರಗಳಿಗೆ ಸ್ಪಂದಿಸುವ ಎಲ್ಲ ಬಗೆಯ ತಳಮಟ್ಟದ ಸಂಶೋಧನೆಗಾಗಿ ಗುರಿ ನಿಗದಿ ಮಾಡಬೇಕಾಗಿದೆ ಆಗ ಅದು ಬಹುಮುಖ ಪರಿಣಾಮವನ್ನು ನೀಡುತ್ತದೆ. ಈ ಸಮಗ್ರ ದೃಷ್ಟಿಯನ್ನು ಲಂಡನ್ನಿನ ರಾಯಲ್ ಸೊಸೈಟಿ ಹೊಂದಿರುವುದನ್ನು ಗಮನಿಸಬೇಕಾಗಿದೆ.

ಈ ಸಂಸ್ಥೆಗೆ ಶ್ರೀ (ಡಾ)ಆರ್.ಎ.ಮಷೆಲ್ಕರ್, DSIR / CSIR ಮತ್ತು ಶ್ರೀ (ಡಾ) ಅನಿಲ್ ಕೆ. ಗುಪ್ತಾ SRISTI (Society for Rresearch and Initiatives for Sustainable Technologies and Institutions) ಪ್ರೊಫೆಸರ್ ಐ.ಐ.ಎಂ ಅಹ್ಮಾದಾಬಾದ್ ಅವರ ನಿರ್ದೇಶಕರಾಗಿರುತ್ತಾರೆ. ಕಳೆದ ಹತ್ತು ವರ್ಷಗಳಿಂದ ಹನಿ ಬೀ [''ಜೇನು ಹುಳ''] ಎಂಬ ಹೆಸರಿನ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಭಾರತದಲ್ಲಿ ಈವರೆಗೆ ಸುಮಾರು ೧೦,೦೦೦ ತಳಮಟ್ಟದ ಸಂಶೋಧಕರನ್ನು ಗುರುತಿಸಿದ್ದಾರೆ ಅದರಂತೆ ಕರ್ನಾಟಕಕ್ಕೆ ಸಂಭಂಧಿಸಿದಂತೆ ಈ ಸಂಸ್ಥೆ ಚಟುವಟಿಕೆಯನ್ನು ಜಿ.ಕೆ.ವಿ.ಕೆಯಲ್ಲಿ ಕಾರ್ಯ ನಿರ್ವಹಿ-ಸುತ್ತಿರುವ ಡಾ: ಪ್ರಕಾಶ್ ಕಮರೆಡಿಯವರು ನೋಡಿಕೊಳ್ಳುತ್ತಾ ಇದ್ದಾರೆ. ಅವರು ''ಹಿತ್ತಲಗಿಡ'' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಅವರು ಕೂಡಾ ಜಿಲ್ಲ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಪ್ರೋತ್ಸಾಹ ವಂಚಿತರಾಗಿದ್ದಾರೆ. ಇವರು ಕರ್ನಾಟಕದಲ್ಲಿ ಇಂತಹ ಸುಮಾರು ೧೦೦೦ ವಿಜ್ಞಾನಿಗಳನ್ನು ಗುರುತಿಸಿರುತ್ತಾರೆ. ಆದರೆ ಇವರಿಗೆ ಅವಶ್ಯಕವಾಗಿ ಬೇಕಾದ ಸಹಾಯ ಸೌಲಭ್ಯ ಗಳು ಈವರೆಗೂ ದೊರಕಿಲ್ಲ. ಕಾರಣ ಈ ಸಂಸ್ಥೆ ಅರೇ ಸರ್ಕಾರಿ ಸಂಸ್ಥೆಯಾಗಿದೆ. ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಇದಕ್ಕೆ ಅಸ್ಥಿತ್ವವಿಲ್ಲ. ಹೀಗಾಗಿ ಇದು ಉದ್ದೇಶಿತ ಪರಿಣಾಮವನ್ನು ನೀಡಿರುವುದಿಲ್ಲ. ಆದರೆ ಇದು ಮೂಲಭೂತವಾಗಿ ಗ್ರಾಮೀಣ ವಿಜ್ಞಾನಿಗಳನ್ನು ಮತ್ತು ವಿಶ್ವವಿದ್ಯಾಲಯ ಶಿಕ್ಷಣ ಪಡೆಯದ ವಿಜ್ಞಾನಿಗಳನ್ನು ಗುರುತಿಸುವುದರಲ್ಲಿ ಪ್ರಶಂಸನೀಯ ಕೆಲಸವನ್ನು ಮಾಡಿರುತ್ತದೆ. ಈ ಬಗ್ಗೆ ದಿನಾಂಕ ೧೮.೧೨.೨೦೦೨ ರಂದು ಹಿಂದುಸ್ಥಾನ್ ಟೈಮ್ಸ್ ದಿನ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯನ್ನು ಯಥಾವತ್ತಾಗಿ ಓದುವುದು ಪ್ರಯೋಜನಕಾರಿಯಾಗಿದೆ [ಅನುಬಂದ-೧೦]. ಈ ಸಂಸ್ಥೆಯ ನೀತಿಗಳನ್ನು ಮಾದರಿಯಾಗಿ ತೆಗೆದುಕೊಂಡು ಅದರ ಕಾರ್ಯವ್ಯಾಪ್ತಿಯನ್ನು ಅನಂತವಾಗಿ ಹೆಚ್ಚಿಸಬೇಕಾಗಿದೆ (ಕೃಷಿ ಸೇರಿದಂತೆ ಇತರ ಎಲ್ಲ ಜ್ಞಾನ, ವಿಜ್ಞಾನ, ತಂತ್ರಜ್ಞಾನ ಸಂಬಂಧಿ ಚಟುವಟಿಕೆಗಳು ಲಲಿತ ಕಲೆಗಳನ್ನು ಹೊರತುಪಡಿಸಿ) ಮತ್ತು ಈಗಾಗಲೇ ಗುರುತಿಸಿದ ಕರ್ನಾಟಕದ ಸುಮಾರು ೧೦೦೦ ವಿಜ್ಞಾನಿಗಳನ್ನು ಜಿಲ್ಲಾವಾರು ವಿಂಗಡಿಸಿ ಆ ವಿಜ್ಞಾನಿಗಳಿಗಾಗಿ ಜಿಲ್ಲಾ ಪಂಚಾಯ್ತಿಗಳು ತಮ್ಮ ಕ್ರಿಯಾಯೋಜನೆಯಲ್ಲಿ ತಮ್ಮ ೦.೫% ಅನುದಾನವನ್ನು ಪ್ರತಿ ವರ್ಷ ಈ ವಿಜ್ಞಾನಿಗಳ ಉಪಯೋಗಕ್ಕಾಗಿ ಮೀಸಲಿಡಬೇಕು. ಅದೇ ಪ್ರಕಾರ ಸ್ಥಳೀಯ ಸರ್ಕಾರಗಳ ವ್ಯಾಪ್ತಿಯಲ್ಲಿಯೂ ವಾಸವಾಗಿರುವ ಅಲ್ಲಿಯ ವೈಜ್ಞಾನಿಕ ಪ್ರತಿಭೆಯುಳ್ಳ ವಿಜ್ಞಾನಿಗಳನ್ನು ಎನ್.ಐ.ಎಫ್ ಸಹಾಯದಿಂದ ಕಲೆ ಹಾಕಿ ಅವರ ಚಟುವಟಿಕೆಗಳಿಗೆ ಸ್ಥಳೀಯ ಸರ್ಕಾರಿ ಸಂಸ್ಥೆಗಳು ತಮ್ಮ ಬಜೆಟ್‌ನ ೦.೫% ಅನುದಾನವನ್ನು ಬಿಡುಗಡೆಗೊಳಿಸಬೇಕಾಗಿದೆ.

# ಅಧ್ಯಾಯ–೧೨: ಲಂಡನ್ನಿನ ರಾಯಲ್ ಸೊಸೈಟಿ [ಚಾರ್ಟರ್ ಆಫ ರಾಯಲ್ ಸೋಸೈಟಿ]–ಸಂಕ್ಷಿಪ್ತ ವಿವರಣೆ

ಈ ಸಂಘವನ್ನು ೧೬೬೨ರಲ್ಲಿ ಅಂದಿನ ಇಂಗ್ಲೆಂಡ್ ರಾಜನಾದ ೨ನೇ ಚಾರ್ಲ್ಸ ಸ್ವತ: ಸ್ಥಾಪಿಸಿರುತ್ತಾರೆ. ಅವರ ಉದ್ದೇಶವು ಕೇವಲ ತಮ್ಮ ಸಾಮ್ರಾಜ್ಯದ ಗಡಿಯನ್ನು ವಿಸ್ತರಿಸುವುದಲ್ಲ, ಆದರೆ ಜ್ಞಾನವನ್ನು ಗಳಿಸುವ ಎಲ್ಲ ಮಾರ್ಗದಿಂದ ಕಲೆ ಮತ್ತು ವಿಜ್ಞಾನದ ಎಲ್ಲೆಗಳನ್ನು ವಿಸ್ತರಿಸುವುದು ಎಂದು ಹೇಳಿದ್ದಾರೆ. ಅಲ್ಲದೆ ಪ್ರಾಯೋಗಿಕವಾಗಿ ಎಲ್ಲ ತಾತ್ವಿಕ ಸಿದ್ಧಾಂತಗಳನ್ನು ಪರಿಪೂರ್ಣಗೊಳಿಸುವುದೇ ಅವರ ಉದ್ದೇಶ ಎಂದು ಹೇಳಲಾಗಿದೆ. ಕೇವಲ ಧರ್ಮವನ್ನೇ ರಕ್ಷಿಸುವುದು ತನ್ನ ಉದ್ದೇಶವಿಲ್ಲ, ಬದಲಾಗಿ ನಾವು ವಿಶ್ವವನ್ನೇ ಪ್ರೀತಿಸುತ್ತೇವೆ ಮತ್ತು ಜ್ಞಾನದ ಆಯಾಮಗಳನ್ನು ನಾವು ಪ್ರೀತಿಸುತ್ತೇವೆ ಮತ್ತು ರಕ್ಷಿಸುತ್ತೇವೆ ಎಂದು ಸ್ಪಷ್ಟವಾಗಿ ಹೇಳಿರುತ್ತಾರೆ. [ಇದೇ ನಿಜವಾದ ಧರ್ಮ ಭಾರತೀಯ ಧರ್ಮದಲ್ಲಿ ಸರ್ವೇ ಜನಾ: ಸುಖಿನೋ ಭವಂತು, ವಸುದೈವ ಕುಟುಂಬಕಂ ಎಂದು ಧರ್ಮಗುರುಗಳು ಭೋಧಿಸಿದ್ದಾರೆ. ಆದರೆ ಈ ತತ್ವಗಳನ್ನು ಶಾಸನ ಬದ್ಧವಾಗಿ ಕಾಯಿದೆ ರೂಪದಲ್ಲಿ ಅನುಷ್ಠಾನದಲ್ಲಿ ತರಲು ನಮ್ಮಿಂದ ಸಾಧ್ಯವಾಗಿಲ್ಲ.] ಈ ರಾಯಲ್ ಚಾರ್ಟರ್‌ಗಳು ಇಂಗ್ಲೆಂಡ್ ದೇಶದಲ್ಲಿ ನಮ್ಮ ಸಂವಿಧಾನಕ್ಕೆ ಸಮನಾಗಿರುತ್ತವೆ. ನಮ್ಮ ಸಂವಿಧಾನದಲ್ಲಿ ಜ್ಞಾನ–ವಿಜ್ಞಾನ, ತಂತ್ರಜ್ಞಾನದ ಅಭಿವೃದ್ಧಿಗೆ ಕುರಿತಂತೆ ಸಂವಿಧಾನವು ತನ್ನ ಸ್ಪಷ್ಟ ವಿಚಾರವನ್ನು ವ್ಯಕ್ತಪಡಿಸಿರುವದಿಲ್ಲ ಎಂಬುದು ಸುಸ್ಪಷ್ಟವಾಗಿರುತ್ತದೆ. ಈ ಚಾರ್ಟರ್ ಉದ್ದೇಶ ನಿಸರ್ಗದತ್ತವಾದ ಎಲ್ಲ ಜ್ಞಾನವನ್ನು ಅಭಿವೃದ್ಧಿಪಡಿಸುವುದು ಎಂದು, ಒಂದು ವಾಕ್ಯದಲ್ಲಿ ಹೇಳಲಾಗಿದೆ. ಮುಂದುವರೆದು ಮನುಷ್ಯನಿಗೆ ಕಲ್ಯಾಣವಾಗುವ ದೇವರ ಮಹಿಮೆಯನ್ನು ಬಿಂಬಿಸುವ ಪ್ರಯೋಜನಕಾರಿಯಾದ ಎಲ್ಲ ಬಗೆಯ ನಿಸರ್ಗದತ್ತವಾದ ಅಂಶಗಳ ಬಗ್ಗೆ ಅಧಿಕಾರಯುತವಾಗಿ ಪ್ರಯೋಗ ಮಾಡುವ ಸಂಸ್ಥೆ ಎಂದು ಈ ರಾಯಲ್ ಸೊಸೈಟಿಗೆ ಮನ್ನಣೆ ನೀಡಲಾಗಿದೆ.

ಈ ಸೊಸೈಟಿಯು ಒಂದು ಸ್ವಾಯತ್ತ ಸಂಸ್ಥೆಯಾಗಿರುತ್ತದೆ. ಒಂದು ಸಲ ರಾಜನು ೨೧ ಸದಸ್ಯರನ್ನು ಆಯ್ಕೆಮಾಡಿದ ಮೇಲೆ ಸದಸ್ಯರೇ ಮುಂದಿನ ಸದಸ್ಯರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಯಾವುದೇ ಸ್ವಾಯತ್ತ ಸಂಸ್ಥೆಯಾದರೂ ಅದರ ಸದಸ್ಯರನ್ನು ಪ್ರತಿ ೫ ವರ್ಷಕ್ಕೆ ಒಮ್ಮೆ ಸರ್ಕಾರ ನೇಮಕಾತಿ ಮಾಡಿ ಅದರ ಸ್ವಾಯತ್ತತೆಯನ್ನು ಪರೋಕ್ಷವಾಗಿ ಭಂಗಗೊಳಿಸಲಾಗುತ್ತದೆ. ಒಂದು ಸಲ ನೇಮಕ ಹೊಂದಿದ ಸದಸ್ಯರು ಆ ಜೀವನ ಪೂರ್ತಿ ಅದರ ಸದಸ್ಯರಾಗಿರುತ್ತಾರೆ. ಹೀಗೆ ನೇಮಕ ಹೊಂದುವ ಸದಸ್ಯರು ಕೇವಲ ವಿಜ್ಞಾನದಲ್ಲಿ ಪ್ರತಿಭೆಯನ್ನು ಹೊಂದಿರದೆ ಅವರ ಸಾಮಾಜಿಕ ಜೀವನದಲ್ಲಿಯೂ ಆದರ್ಶಪ್ರಾಯರಾಗಿರಬೇಕು. ಅವರ ನಡತೆಯು ಸರಿ ಇಲ್ಲದಿದ್ದಲ್ಲಿ ಮಾತ್ರ ಅವರನ್ನು ಸೊಸೈಟಿಯಿಂದ ತೆಗೆದು ಹಾಕಬಹುದು. ಅದನ್ನು ಹೊರತುಪಡಿಸಿದರೆ ಸೊಸೈಟಿ ಆಡಳಿತದಲ್ಲಿ ಸರ್ಕಾರವು ಯಾವುದೇ ತರಹದಲ್ಲಿ ಹಸ್ತಕ್ಷೇಪ ಮಾಡಲಾರದು. ಸೊಸೈಟಿಯು ಸ್ವತಂತ್ರವಾಗಿ ಕ್ರಯವಿಕ್ರಯ ಮಾಡಬಹುದು ನ್ಯಾಯಾಲಯದಲ್ಲಿ ಸ್ವತಂತ್ರವಾಗಿ ಧಾವಾ ಹಾಕಬಹುದು, ಹಾಕಿಸಿಕೊಳ್ಳಬಹುದು. ಈ ಸೊಸೈಟಿ ಸದಸ್ಯರು ಪ್ರತಿಜ್ಞಾವಿಧಿಯನ್ನು ಸ್ವೀಕರಿಸಬೇಕಾಗುತ್ತದೆ. ಪ್ರಥಮ ಬಾರಿಗೆ ನೇಮಕ ಹೊಂದಿದ ಸದಸ್ಯರಲ್ಲಿ, ಗಣಿತ, ಭೌತಶಾಸ್ತ್ರ, ವೈದ್ಯಕೀಯ, ಧಾರ್ಮಿಕ ಕ್ಷೇತ್ರ, ಆಡಳಿತ, ಸೈನಿಕ ಸಾಹಿತ್ಯ ಮತ್ತು ಪರಿಚಾರಕ, ವರ್ಗದಿಂದ ಆಯ್ಕೆಯಾಗಿದ್ದರು.

೨೧ ಜನರಲ್ಲಿ ೯ ಜನ ಸದಸ್ಯರು, ೯ ಅಥವಾ ಅದಕ್ಕಿಂತಲೂ ಹೆಚ್ಚು ಸದಸ್ಯರು ಒಟ್ಟಿಗೆ ಸೇರಿ ಲಂಡನ್ ನಗರದಲ್ಲಿ ಅಥವಾ ಲಂಡನ್ ನಗರದ ೧೦ ಮೈಲಿ ಪರಿಧಿಯಲ್ಲಿ ಯಾವುದೇ ಪ್ರಯೋಗ ಕೈಗೊಳ್ಳಲು ಅವರಿಗೆ ಅಧಿಕಾರ ನೀಡಲಾಗಿದೆ. ವಿಜ್ಞಾನ ಕ್ಷೇತ್ರದಲ್ಲಿ ಮಹತ್ತರ ಸಂಶೋಧನೆ ಮಾಡಿದವರನ್ನು ಅವರೇ ಗುರುತಿಸಿ ಅವರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಇಲ್ಲಿ ಸರ್ಕಾರವು ಯಾವುದೇ ಸದಸ್ಯರನ್ನು ಆಯ್ಕೆ ಮಾಡುವುದಿಲ್ಲ. ಈ ಸದಸ್ಯರನ್ನು ಸೊಸೈಟಿಯ ಆಡಳಿತ ಮಂಡಳಿಗೆ ಆಯ್ಕೆ ಮಾಡುವ ಸ್ವಾತಂತ್ರವು ಈ ಸದಸ್ಯರಿಗೆ ಇದೆ. ತಮ್ಮ ಸೊಸೈಟಿಗೆ ಬೇಕಾದ ನಿಯಮಗಳನ್ನು ತಾವೇ ಬಹುಮತದಿಂದ ರಚಿಸಿಕೊಳ್ಳುತ್ತಾರೆ ಆದರೆ ಸದರಿ ನಿಯಮಗಳು ಅಲ್ಲಿಯ ಸ್ಥಳೀಯ ಕಾನೂನಿಗೆ ಸಂಪ್ರದಾಯಕ್ಕೆ ವಿರೋಧವಾಗಿರದಂತೆ ಅವರು ನೋಡಿಕೊಳ್ಳಬೇಕು ಅಷ್ಟೆ. ಆದರೆ ಅವರ ಸೊಸೈಟಿಯ ಯಾವುದೇ ಆಡಳಿತ ನಿಯಮಗಳನ್ನು ಸರ್ಕಾರದಿಂದ ಅನುಮೋದನೆ ಪಡೆಯಬೇಕಾಗಿಲ್ಲ. ತಮ್ಮದೇ ಆದ ಮಾಸಿಕ ಪತ್ರಿಕೆಯನ್ನು ಹೊಂದಿರುತ್ತಾರೆ. ಅದನ್ನು ೭ ಜನರ ಸಮಿತಿ ನಡಸುತ್ತದೆ. ಅದಕ್ಕೆ ಸಂಪೂರ್ಣ ಸ್ವತಂತ್ರವಿದೆ. ಈ ಸೊಸೈಟಿ ತನ್ನ ಪ್ರಯೋಗಗಳಿಗಾಗಿ ಮರಣ ದಂಡನೆ ಹೊಂದಿದ ಅಪರಾದಿಗಳ ದೇಹವನ್ನು ಪಡಯುವ ಹಕ್ಕು ನೀಡಲಾಗಿದೆ. ಸರ್ಕಾರದ ಯಾವುದೇ ನಿರ್ದೇಶನವಿಲ್ಲದೆ, ನಿರ್ಭಂದವಿಲ್ಲದೆ ೯ ಜನರ ಸಮಿತಿಯು ಜಗತ್ತಿನ ಯಾವುದೇ ವ್ಯಕ್ತಿಯೊಂದಿಗೆ ಪತ್ರ ವ್ಯವಹಾರ ಮಾಡುವ ಸ್ವಾತಂತ್ರವನ್ನು ನೀಡಲಾಗಿದೆ. ಈ ಸಮಿತಿಯಲ್ಲಿ ಬಹುಮತ ಅಭಿಪ್ರಾಯಕ್ಕೆ ಬರಲಾರದ ಯಾವುದಾದರು ವಿವಾದಗಳು ಇದ್ದಲ್ಲಿ ಸಮಿತಿಯಿಂದ ಹೊರಗೆ ಇರುವ ೪ ಜನರ ಉನ್ನತ ಸಭೆ ವಿವಾದ ನಿರ್ಣಯವಾಡುತ್ತದೆ.

ಇನ್ನು ಅತಿಮುಖ್ಯವಾದ ಪ್ರಮುಖ ಅಂಶವೆಂದರೆ ರಾಜನ ಅಧೀನದಲ್ಲಿರುವ ನ್ಯಾಯಾಲಯ ಸೇರಿದಂತೆ ಎಲ್ಲ ಅಧೀನ ಅಧಿಕಾರಿ ಸಿಬ್ಬಂದಿಗಳು ಮತ್ತು ಪ್ರಜೆಗಳು ಈ ಸೊಸೈಟಿಗೆ ಕಾಲಕಾಲಕ್ಕೆ ಎಲ್ಲ ತರಹದ ಸಹಾಯ ಸಹಕಾರ ನೀಡಬೇಕು ಎಂದು ತಿಳಿಸಲಾಗಿದೆ. ನನಗೆ ತಿಳಿದಂತೆ ಅಧಿಕಾರಿಗಳು ಮತ್ತು ಪ್ರಜೆಗಳು ಸಹಾಯ ಸಹಕಾರ ನೀಡಬೇಕು ಎಂಬ "ಈ ಅಧಿಕಾರಯುತವಾದ ಆದೇಶವನ್ನು ಭಾರತದಲ್ಲಿ ಯಾವ ಸಂಘ ಸಂಸ್ಥೆಗಳಿಗೂ ಹಿಂದಿನ ಬ್ರಿಟೀಷ ಸರ್ಕಾರ ಎಂದೂ ನೀಡಿರಲಿಲ್ಲ, ಇಂದಿಗೂ ನಮ್ಮ ಸರ್ಕಾರವೂ ನೀಡಿಲ್ಲ, ಮುಂದುವರೆದು ಹೀಗೆ ಹೇಳಲಾಗುತ್ತದೆ.

"ಯೂರೋಪಿನ ಇತರ ಸರ್ಕಾರಿ ಅಕಾಡೆಮಿಗಳಲ್ಲಿ ಅಲ್ಲಿಯ ಸದಸ್ಯರು ತಮ್ಮ ಜೀವನ ನಿರ್ವಹಣೆಗೆ ಆದಾಯದ ಭದ್ರತೆಯನ್ನು ಪಡೆದುಕೊಂಡಿರುತ್ತಾರೆ. ಆದರೆ ಅವರು ತಮ್ಮ ಸ್ವಾತಂತ್ರವನ್ನು ಕಳೆದುಕೊಂಡಿರುತ್ತಾರೆ. ಆದರೆ ರಾಯಲ್ ಸೊಸೈಟಿಯಲ್ಲಿ ಸದಸ್ಯರು ರಾಜನಿಂದ ಕೇವಲ ಪ್ರೀತಿ ಗೌರವ ನೈತಿಕ ಬೆಂಬಲವಲ್ಲದೆ. ಜೀವನ ನಿರ್ವಹಣೆ ಆದಾಯದ ಭದ್ರತೆಯೊಂದಿಗೆ ತಮ್ಮ ವ್ಯಕ್ತಿ ವಿಚಾರ ಸ್ವಾತಂತ್ರ್ಯವನ್ನು ಪಡೆದುಕೊಂಡಿರುತ್ತಾರೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಂಡಿರುತ್ತಾರೆ".

The Royal Society received little more than moral support from the crown, unlike academics on the European continent, which were established by the State and whose members gained an income but lost their independence. ಎಂದು ಹೇಳಲಾಗಿದೆ.

ರಾಯಲ್ ಸೊಸೈಟಿಯಲ್ಲಿ ಸದಸ್ಯರಿಗೆ ನೀಡಲಾದ ಸ್ವಾಯತ್ತತೆ ಮಾದರಿಯಲ್ಲಿ ಸಮಾನವಾದ ಅದಿಕಾರ ಹೊಂದಿದ ಜ್ಞಾನ, ವಿಜ್ಞಾನ, ತಂತ್ರಜ್ಞಾನ ಸಂಘಗಳನ್ನು ಪ್ರತಿ ಜಿಲ್ಲಾ ಮಟ್ಟದಲ್ಲಿ ಸ್ಥಳಿಯ ಸರ್ಕಾರಗಳ ಮಟ್ಟದಲ್ಲಿ ಸ್ಥಾಪಿತಗೊಳ್ಳಬೇಕು ಸರ್ಕಾರ ಈ ಬಗ್ಗೆಯ ಸ್ವಾತಂತ್ರವನ್ನು ಪ್ರೋತ್ಸಾಹವನ್ನು ನಮ್ಮ ತಳಮಟ್ಟದ ಸಂಶೋಧಕರಿಗೆ ನೀಡಬೇಕೆಂಬುದೇ ನಮ್ಮ ಬೇಡಿಕೆಯಾಗಿರುತ್ತದೆ. [ವಿವರಗಳಿಗೆ ಅನುಬಂದ ೧೪ ನೋಡಿ]

# ಅಧ್ಯಾಯ–೧೩: ತಾಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಸರ್ಕಾರಗಳ ಮಟ್ಟದಲ್ಲಿ "ಜ್ಞಾನ–ವಿಜ್ಞಾನ–ತಂತ್ರಜ್ಞಾನ ಪರಿಷತ್" ನ ರೂಪುರೇಷೆಗಳು:

೦೧. ಇದು ಒಂದು ಸ್ವಾಯತ್ತ ಸಂಸ್ಥೆಯಾಗಿರುತ್ತದೆ.

೦೨. ಆಡಳಿತವೆಲ್ಲ ಕನ್ನಡದಲ್ಲಿ ಕಡ್ಡಾಯ. ವೈಜ್ಞಾನಿಕ ವಿಷಯಗಳಿಗೆ ಸಂಬಂಧಿಸಿದಂತೆ ಭಾಷಾ ನಿರ್ಬಂದವಿಲ್ಲ.

೦೩. ಸಿಬ್ಬಂದಿಗಳು ಆಯಾಜಿಲ್ಲೆ ಮತ್ತು ತಾಲ್ಲೂಕಿನಲ್ಲಿ ಹುಟ್ಟಿ ಬೆಳೆದವರು ಆಗಿರಬೇಕು. (ಬೆಂಗಳೂರು ಹೊರತು ಪಡಿಸಿ) ೧೫% ಸಿಬ್ಬಂದಿಗಳು ಹೊರಗಿನ ಜಿಲ್ಲೆಯವರು. ಅಥವಾ ಹೊರನಾಡ ಕನ್ನಡಿಗರು ಆಗಿರಬಹುದು. ದುಷ್ಟಟಗಳಿಗೆ ಒಳಗಾಗಿರಬಾರದು.

೦೪. ಪ್ರತಿಯೊಬ್ಬನು ವೈಜ್ಞಾನಿಕವಾಗಿ ಪರಾಮರ್ಷೆ ಮಾಡುವ ಮನೋಭಾವನೆ ಹೊಂದಿರಬೇಕು (ಹಲ್ಲು ಎಣಿಸುವ ವಿಚಾರ ಪುಟ–೧) ಅತಿ ಸಣ್ಣ–ಪುಟ್ಟದಾದ ಒಂದು ಸಂಶೋಧನೆಯನ್ನು ಕಡ್ಡಾಯವಾಗಿ ಮಾಡಿರಬೇಕು ಅದನ್ನು ಪರಿಷತ್ ಒಪ್ಪಿಕೊಳ್ಳಬೇಕು.

೦೫. ಆರ್ಥಿಕ ವ್ಯವಹಾರಗಳು ೧೦೦% ಪಾರದರ್ಶಕವಾಗಿರಬೇಕು.

೦೬. ಹೊಸ ಸದಸ್ಯರನ್ನು ಹಳೆ ಸದಸ್ಯರು ಆಯ್ಕೆ ಮಾಡಬೇಕು. ಸದಸ್ಯರ ಆಯ್ಕೆಯಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದು.

೦೮. ಈ ಸಂಸ್ಥೆಯ ಆರಂಭದ ೧೦ ವರ್ಷದ ಅವಧಿಯಲ್ಲಿ ಸ್ನಾತಕೋತ್ತರ ಪದವಿ ಪಡೆದವರನ್ನು ಆಯ್ಕೆ ಮಾಡಬಾರದು.

೦೯. ಸದಸ್ಯರ ಕನಿಷ್ಟ ವಯಸ್ಸು ೪೦ ಇರಬೇಕು.

೧೦. ಈ ಸಂಸ್ಥೆ ತನ್ನದೇ ಆದ ಪತ್ರಿಕೆಯನ್ನು ಹೊಂದಿರಬೇಕು. (ತ್ರೈಮಾಸಿಕ)

೧೧. ಇದರ ವಿಷಯ ವ್ಯಾಪ್ತಿಗೆ ಇತಿಮಿತಿಗಳು ಇರುವುದಿಲ್ಲ (ಇತಿಹಾಸ, ರಾಜಕೀಯ, ಸಂಗೀತ, ಸಾಹಿತ್ಯ, ಕಲೆ, ನೃತ್ಯಗಳನ್ನು ಹೊರತುಪಡಿಸಿ)

೧೨. ತಾಲ್ಲೂಕು ಪಂಚಾಯ್ತಿ / ಜಿಲ್ಲಾ ಪಂಚಾಯ್ತಿ / ಸ್ಥಳೀಯ ಸರ್ಕಾರಗಳು ಈ ಸಂಸ್ಥೆಗೆ ತಮ್ಮ ಆಯವ್ಯಯದ ಶೇಕಡ ೦.೫% ಹಣ ಪ್ರತಿ ವರ್ಷ ನೀಡಬೇಕು.

೧೩. ಇಂಗ್ಲೆಂಡಿನಲ್ಲಿ ರಾಯಲ್ ಸೊಸೈಟಿಗೆ ಸ್ವಾತಂತ್ರ್ಯ ಮತ್ತು ಪ್ರೋತ್ಸಾಹ ನೀಡಿದಂತೆ ನಮ್ಮ ದೇಶದಲ್ಲಿಯೂ ತಾಲೂಕ ಮಟ್ಟದ ಜ್ಞಾನ, ವಿಜ್ಞಾನ ತಂತ್ರಜ್ಞಾನ ಪರಿಷತ್‌ನವರಿಗೂ ನೀಡಬೇಕು.

**ಕೊನೆಯ ಮಾತು:** ಜಗತ್ತಿನ ವಿಜ್ಞಾನದೊಂದಿಗೆ ನಾವು ಸ್ಪರ್ಧಿಸಬೇಕಾದರೆ ಮೊದಲು ನಾವು ನಮ್ಮ ಸುತ್ತಮುತ್ತಲು ಹಾಗೂ ನಮ್ಮಲ್ಲಿ ಇರಬಹುದಾದ ವಿಜ್ಞಾನವನ್ನು ತಿಳಿದುಕೊಳ್ಳಬೇಕು. ನಮ್ಮ ಇತಿ ಮಿತಿಗಳನ್ನು ತಿಳಿದುಕೊಳ್ಳಬೇಕು. ಈ ಕೆಲಸ ಕೇಂದ್ರ ಸರ್ಕಾರದಿಂದ ಎಂದಿಗೂ ಸಾಧ್ಯವಿಲ್ಲ, ಇದನ್ನು ತಾಲ್ಲೂಕು ಪಂಚಾಯ್ತಿ / ಜಿಲ್ಲಾ ಪಂಚಾಯ್ತಿ / ಸ್ಥಳೀಯ ಸರ್ಕಾರಗಳು ಮಾಡಬೇಕು. ಸುಮಾರು ೧೦ ವರ್ಷದ ಅವಧಿಯಲ್ಲಿ ಈ ಕೆಲಸವನ್ನು ತೃಪ್ತಿಕರವಾಗಿ ಮಾಡಿದ ತರುವಾಯ ವಿದೇಶಿದಲ್ಲಿ ವಿಜ್ಞಾನದ ಬಗ್ಗೆ ನಡೆಯುವ ಸಂಶೋಧನೆಗಳ ಬಗ್ಗೆ ಸ್ಪರ್ಧೆ ಮಾಡಬಹುದು. ಆಗ ನೇಚರ್ ಪತ್ರಿಕೆಯಲ್ಲಿ ಪ್ರಕಟವಾಗುವ ವೈಜ್ಞಾನಿಕ ವರದಿಗಳನ್ನು ಆಧರಿಸಿ ಅವುಗಳನ್ನು ನಾವೂ ಕೂಡಾ ಸಂಶೋಧನೆ ಮಾಡಿ ಅವುಗಳ ಅಭಿವೃದ್ದಿಗೆ ನಾವು ಪಾಲುದಾರರಾಗಬಹುದು. ಅದೇ ಪ್ರಕಾರ ಪ್ರತಿ ಸಾರಿ ನೋಬಲ್ ಬಹುಮಾನ ಘೋಷಿತವಾದಾಗ ಒಂದು ತಿಂಗಳ ಅವಧಿಯ ಒಳಗಾಗಿ ಅದರ ಕನ್ನಡ ಭಾಷಾಂತರವು ಎಲ್ಲ ಕಾಲೇಜುಗಳಿಗೆ ತಲುಪಲು ವ್ಯವಸ್ಥೆ ಮಾಡಬಹುದು. ಈಗ ನಾವು ಮಾಡುವುದು ಕೇವಲ Warm up exercise ಮಾತ್ರ. Warm Up Exercise ಇಲ್ಲದೆ ಸ್ಪರ್ಧೆಯಲ್ಲಿ ಭಾಗವಹಿಸಿದರೆ, ಓಟದಲ್ಲಿ ಗೆಲ್ಲಲು ಆಗಲಾರದು ಅದೇ ಪ್ರಕಾರ ಇಂದು ನಾವು ವಿಜ್ಞಾನದಲ್ಲಿ ಮುಂದುವರೆಯಲು ಆಗುತ್ತಾ ಇಲ್ಲ.

ಇಂದಿನ ಸ್ಥಿತಿಯಲ್ಲಿ ಭಾರತವು ಇಂದಿಗೂ ತನ್ನದೇ ಆದ ಒಂದು ಕಾರ್ ಗಾಡಿಯ (ಆಟೋಮೊಬೈಲ್) ಇಂಜಿನ್ ಸಿದ್ಧಪಡಿಸುವ ತಾಂತ್ರಿಕತೆಯ ಕೌಶಲ್ಯ ಹೊಂದಿಲ್ಲ, ಎಲ್ಲವೂ ಹೊರ ದೇಶಗಳ ಸಹಯೋಗದಲ್ಲಿ ಸಿದ್ಧಪಡಿಸಲಾಗುತ್ತಿದೆ. ಆದರೆ ಅದೇ ಸಮಯಕ್ಕೆ ನಾವು ಇಂದು ಚಂದ್ರ ಲೋಕಕ್ಕೆ ಹೋಗುವ ಕನಸು ಕಾಣುತ್ತೇವೆ. ಆಟಂ ಬಾಂಬ್ ಸಿಡಿಸಿ ಸೂಪರ್ ಪವರ್ ಆಗ ಬಯಸುತ್ತೇವೆ–ಇದು ಅದ್ಭುತ. ಇದು Warm up exercise ಇಲ್ಲದೆ ಒಲಂಪಿಕ್‌ನಲ್ಲಿ ಭಾಗವಹಿಸಿದಂತಾಗಿದೆ. ಮೊದಲು Warm up exercise ಮಾಡೋಣ ಅಂದರೆ ಸ್ಥಳೀಯ ವೈಜ್ಞಾನಿಕ ಪ್ರತಿಭೆಗಳನ್ನು ಗುರುತಿಸೋಣ ಮತ್ತು ಪ್ರೋತ್ಸಾಹಿಸೋಣ.

****

# ಅಧ್ಯಾಯ-೧೪: ಕರ್ನಾಟಕ ರಾಜ್ಯ ಸರ್ಕಾರ ಜಾರಿಗೊಳಿಸಬೇಕಾಗಿರುವ ಕರ್ನಾಟಕ ರಾಜ್ಯ ವಿಜ್ಞಾನ, ತಂತ್ರಜ್ಞಾನ ಅಕಾಡೆಮಿ ಉದ್ದೇಶಿತ ಶಾಸನದ ಕರಡು ನಮೂನೆ.

ಭಾರತದೇಶದಲ್ಲಿ ವಿಫುಲವಾದ ನೈಸರ್ಗಿಕ ಸಂಪತ್ತು ಮತ್ತು ಮಾನವ ಸಂಪನ್ಮೂಲ ಲಭ್ಯವಿದ್ದರೂ ನಾವು ವಿಜ್ಞಾನ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿ ಇರುವುದಿಲ್ಲವೆಂಬುದು ವಾಸ್ತವಿಕ ಅಂಶವಾಗಿರುತ್ತದೆ. ಭಾರತ ಸರ್ಕಾರವು ಐ.ಐ.ಟಿ, ಐ.ಐ.ಎಮ್, ಸಿ.ಎಸ್.ಐ.ಆರ್, ಐ.ಸಿ.ಎ.ಆರ್, ಎನ್.ಐ.ಎಫ್ ಇತ್ಯಾದಿ ಸಂಘ ಸಂಸ್ಥೆಗಳನ್ನು ಈ ಗುರಿ ಸಾಧನೆಗಾಗಿ ಸ್ಥಾಪನೆ ಮಾಡಿ ಕಾರ್ಯ ನಿರ್ವಹಿಸುತ್ತಾ ಇದೆ. ಆದರೂ ಕೂಡ ಉದ್ದೇಶಿತ ವೈಜ್ಞಾನಿಕ ಪ್ರಗತಿಯ ಗುರಿಯನ್ನು ಸಾಧಿಸಲು ಸಾಧ್ಯವಾಗಿರುವುದಿಲ್ಲ. ಇದಕ್ಕೆ ಮೂಲ ಕಾರಣವೇನೆಂದರೇ ರಾಜ್ಯ ಸರ್ಕಾರಗಳು ಭಾರತೀಯ ಜನ ಸಾಮಾನ್ಯರಲ್ಲಿ ಅಡಗಿರುವ ವೈಜ್ಞಾನಿಕ ಪ್ರತಿಭೆಯನ್ನು ಗುರುತಿಸಲು ಮತ್ತು ಪ್ರೋತ್ಸಾಹಿಸಲು ತಳಮಟ್ಟದಲ್ಲಿ ಆಡಳಿತ ವ್ಯವಸ್ಥೆಯನ್ನು ರೂಪಿಸಲು ಕ್ರಮ ಜರುಗಿಸಿರುವುದಿಲ್ಲ. ಮಹಾಮಹಿಮರಾದ ಶ್ರೀ ಎ.ಪಿ.ಜೆ. ಅಬ್ದುಲ್ ಕಲಾಂ, ರಾಷ್ಟ್ರಪತಿಗಳು, ಭಾರತ ಸರ್ಕಾರ ಇವರು ದಿನಾಂಕ ೧೭.೧೨.೨೦೦೨ ರಂದು ಈ ಪ್ರಕಾರ ಅಭಿಪ್ರಾಯ ಪಟ್ಟಿರುತ್ತಾರೆ. ಸಂಶೋಧನೆಗಳನ್ನು ಮಾಡಲು ಆಧುನಿಕ ಶಿಕ್ಷಣದ ಮೂಲಕ ತರಭೇತಿ ಪಡೆಯುವ ಅವಶ್ಯಕತೆ ಇರುವುದಿಲ್ಲ. ತಳಮಟ್ಟದ ವಿಜ್ಞಾನಿಗಳು ತಮ್ಮ ಸಂಶೋಧನೆಗಾಗಿ ವಿದೇಶದಿಂದ ಪರಿಕರಗಳನ್ನು, ಸಿದ್ದಾಂತಗಳನ್ನು ಆಮದು ಮಾಡಿಕೊಳ್ಳವುದಿಲ್ಲ ಬದಲಾಗಿ ಅವರು ತಮ್ಮದೇ ಆದ ಬೌಧಿಕ ವಿಚಾರಗಳನ್ನು ಹುಟ್ಟುಹಾಕಬಲ್ಲವರಾಗಿರುತ್ತಾರೆ.

ಸಧ್ಯದ ಸ್ಥಿತಿಯಲ್ಲಿ ಜನ ಸಾಮಾನ್ಯರಿಂದ ನಡೆಯುವ ತಳಮಟ್ಟದ ಸಂಶೋಧನೆಗಳು ಮತ್ತು ಸಾಧನೆಗಳನ್ನು ಕೂಡಲೇ ಗುರುತಿಸುವ ವ್ಯವಸ್ಥೆ ಇರುವುದಿಲ್ಲ ಮತ್ತು ಸೂಕ್ತವಾದ ಸರ್ಕಾರದ ಬೆಂಬಲ ಮತ್ತು ಮನ್ನಣೆ ನೀಡುವ ವ್ಯವಸ್ಥೆ ಇರುವುದಿಲ್ಲ. ಇಂದಿಗೂ ಪ್ರತಿಯೊಬ್ಬ ಕೃಷಿ, ಸಂಪ್ರಾದಾಯಿಕ ಜ್ಞಾನ, ವಿಜ್ಞಾನ, ಆರೋಗ್ಯ ತಂತ್ರಜ್ಞಾನ ಇತ್ಯಾದಿ ಕ್ಷೇತ್ರಗಳಿಗೆ ಸಂಭಂಧಿಸಿದಂತೆ ಅತೀ ಸಣ್ಣ ಪ್ರಮಾಣದಲ್ಲಿ ವೈಜ್ಞಾನಿಕ ಸಂಶೋಧನೆ, ಸಾಧನೆ ಮಾಡುವಂತ ಸಣ್ಣಪುಟ್ಟ ಸಂಘ ಸಂಸ್ಥೆಗಳು ಗ್ರಾಮೀಣ ಮತ್ತು ಶಹರ ಪ್ರದೇಶದ ಯುವಕರು ನಮ್ಮಲ್ಲಿ ಲಭ್ಯವಿರುತ್ತಾರೆ. ಆದರೆ ಈ ಜನ ಸಾಮಾನ್ಯರು ಸಂಪರ್ಕಗಳ ಕೊರೆತೆಯಿಂದ, ಬಾಷಾ ಸಮಸ್ಯೆಯಿಂದ ರಾಷ್ಟ್ರೀಯ ಮಟ್ಟದ ಸಂಸ್ಥೆಗಳಾದ ಸಿ.ಎಸ್.ಐ.ಆರ್, ಐ.ಸಿ.ಎ.ಆರ್, ಎನ್.ಐ.ಎಫ್ ಇತ್ಯಾದಿ ಸಂಸ್ಥೆಗಳ ಲಕ್ಷ್ಯವನ್ನು ತಮ್ಮಡೆಗೆ ಸೆಳೆಯಲು ಮತ್ತು ಅವರೊಂದಿಗೆ ವ್ಯವಹರಿಸಲು ವಿಫಲರಾಗಿರುತ್ತಾರೆ. ಇಂತಹ ವೈಜ್ಞಾನಿಕ ಪ್ರತಿಭಾವಂತರ ಬಗ್ಗೆ ಆಗೊಮ್ಮೆ ಈಗೊಮ್ಮೆ ದಿನಪತ್ರಿಕೆಯಲ್ಲಿ ಸುದ್ದಿಗಳು ಪ್ರಕಟವಾದಾಗ ಮತ್ತು ಅವರು ಸಹಾಯ ಕೋರಿದಾಗ ಅವರಿಗೆ ಕಚೇರಿಗೆ ಬನ್ನಿರಿ ಅರ್ಜಿ ಸಲ್ಲಿಸಿ ಎಂದು ಹೇಳುವ ಬದಲು ಸ್ಥಳೀಯ ಆಡಳಿತವೇ ಅವರ ಮನೆ ಬಾಗಿಲಿಗೆ ಹೋಗಿ ಅವರ ಯೋಗಕ್ಷೇಮವನ್ನು ವಿಚಾರಿಸಿ ಅವರಿಗೆ ನೀಡಬಹುದಾದ ಎಲ್ಲ ಸೌಲಭ್ಯಗಳನ್ನು ಅವರ ಮನೆ ಬಾಗಿಲಿಗೆ ತಲುಪಿಸಬೇಕಾಗಿರುತ್ತದೆ. ಉನ್ನತ ಶಿಕ್ಷಣ ಪಡೆಯದ ನಮ್ಮ ಸ್ಥಳೀಯ ಯುವ ವಿಜ್ಞಾನಿ ತರುಣರ ಪ್ರತಿಭೆಯನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡುವ ಮತ್ತು ಅವರ ಸಂಶೋಧನೆಗೆ ನಿರಂತರ ಬೆಂಬಲ ನೀಡುವ ಕಾರ್ಯವು ಇಂದು ಸ್ಥಳೀಯ ಮಟ್ಟದಲ್ಲಿ ಅತೀ ತುರ್ತಾಗಿ ಆಗಬೇಕಾಗಿರುತ್ತದೆ. ರಾಷ್ಟ್ರವು ವಿಜ್ಞಾನದಲ್ಲಿ ಪ್ರಗತಿ ಹೊಂದಲಿ ಎಂದು ಹಾರೈಸಿದರೆ ಮಾತ್ರ ಸಾಲದು ಅದಕ್ಕಾಗಿ ಪ್ರತಿ ಹಳ್ಳಿ ಶಹರ ನಗರ ಮಹಾನಗರ ಮಟ್ಟದಲ್ಲಿ ಅದನ್ನು ಗುರುತಿಸಿ ಅವರಿಗೆ ಮಾನ, ಸನ್ಮಾನಗಳನ್ನು ನೀಡಿದಲ್ಲಿ ಮತ್ತು ಸಂಶೋಧನೆಗೆ ನಿರಂತರ ಬೆಂಬಲ ನೀಡಿದಲ್ಲಿ ಮಾತ್ರ ನಾವು ರಾಷ್ಟ್ರದ ವೈಜ್ಞಾನಿಕ ಪ್ರಗತಿಯಲ್ಲಿ ಅಮೂಲಾಗ್ರವಾಗಿ ಬದಲಾವಣೆ ತರಲು ಸಾಧ್ಯವಿದೆ. ಈ ಕಾರ್ಯದಿಂದ ಮಾತ್ರ ಸಂವಿಧಾನದ ವಿಧಿ ೫೧ ಎ[ಹೆಚ್] ರಲ್ಲಿ ಹೇಳಿದಂತೆ ಜನರಲ್ಲಿ ನಿರಂತರವಾಗಿ ವೈಜ್ಞಾನಿಕ ಮನೋಭಾವನೆಗಳನ್ನು ಸ್ಥಳಿಯವಾಗಿ ಅಂಕುರಗೊಳಿಸಲು ಸಾಧ್ಯವಾಗುತ್ತದೆ. ಈ ಗುರಿ ಸಾಧನೆಗೆ ಇಂಗ್ಲೆಂಡ್ ದೇಶದಲ್ಲಿ ೧೬೬೩ರಲ್ಲಿ ರಾಯಲ್ ಸೊಸೈಟಿ ಚಾರ್ಟರದಲ್ಲಿ ಅಲ್ಲಿಯ ಸ್ಥಳಿಯ ವಿಜ್ಞಾನಿಗಳಿಗೆ ನೀಡಲಾದ ಸ್ವಾಯತ್ತತೆಯನ್ನು ಇಂದು ನಾವು ನೀಡುವುದು ಸೂಕ್ತವಾಗಿರುತ್ತದೆ.

ಈ ಅಧಿನಿಯಮವನ್ನು ಭಾರತದ ಪ್ರಜಾರಾಜ್ಯೋತ್ಸವ ೫೫ನೇ ವರ್ಷದಲ್ಲಿ ಜಾರಿಗೊಂಡಿರುತ್ತದೆ.

೧. **ಸಂಕ್ಷಿಪ್ತ ಹೆಸರು: ಈ ಅಧಿನಿಯಮವನ್ನು "ಕರ್ನಾಟಕ ರಾಜ್ಯ ಸ್ಥಳೀಯ ವೈಜ್ಞಾನಿಕ ಪ್ರತಿಭೆಗಳನ್ನು ಗುರುತಿಸುವ ಮತ್ತು ನಿರಂತರ ಪ್ರೋತ್ಸಾಹಿಸುವ ಅಧಿನಿಯಮ ೨೦೦೫ ಎಂದು ಕರೆಯಲಾಗುವುದು.**

೨. ಈ ಅಧಿನಿಯಮವು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆಬರುವುದು.

೩. **ವ್ಯಾಪ್ತಿ** : ಈ ಅಧಿನಿಯಮವು ಕರ್ನಾಟಕ ರಾಜ್ಯದ ವ್ಯಾಪ್ತಿಗೆ ಮಾತ್ರ ಅನ್ವಯವಾಗುತ್ತದೆ.

೪. ವ್ಯಾಖ್ಯೆಗಳು: [೧] ಅಕಾಡೆಮಿ: ಈ ಅಧಿಸೂಚನೆ ಅಡಿಯಲ್ಲಿ ರಚಿತವಾದ ಅಕಾಡೆಮಿ ಅದು ಜಿಲ್ಲಾ ಅಕಾಡೆಮಿ ಅಥವಾ ರಾಜ್ಯ ಅಕಾಡೆಮಿ ಆಗಿರಬಹುದು.

[೨]

[೩]

೫. **ಉದ್ದೇಶ ಮತ್ತು ಗುರಿಗಳು**: ನಿಸರ್ಗದತ್ತವಾದ ಎಲ್ಲ ಜ್ಞಾನದ ಆಯಾಮಗಳನ್ನು ಅಭಿವೃದ್ಧಿಪಡಿಸುವುದು ಅಂದರೆ ಯಾವದೇ ಹಂತದಲ್ಲಿ ತಾತ್ವಿಕ ಸಿದ್ಧಾಂತಗಳನ್ನು ಅಂದರೆ ಜ್ಞಾನ, ವಿಜ್ಞಾನ, ತಂತ್ರಜ್ಞಾನ ಅಂಶಗಳನ್ನು ಅಧಿಕೃತವಾಗಿ ಪ್ರಯೋಗದಿಂದ ದೃಡಪಡಿಸುವುದು ಮತ್ತು ಅವುಗಳನ್ನು ಪರಿಪೂರ್ಣಗೊಳಿಸಲು ಸತತವಾಗಿ ಪ್ರಯತ್ನಿಸಲು ಕ್ರಮ ಜರುಗಿಸುವುದು.

I ಯಾವುದು ಯಾವಾಗ ಸತ್ಯ ಯಾವುದು ಯಾವಾಗ ಮಿಥ್ಯ ಎಂಬುದನ್ನು ದೃಡೀಕರಿಸುವುದು. ಈಗಾಗಲೇ ಯಾವುದೇ ಗ್ರಂಥದಲ್ಲಿ ಧಾಖಲೆಗೊಂಡ ಯಾವುದೇ ವಿಷಯ/ಅಂಶವನ್ನು ಸ್ವಯಂಸ್ಪೂರ್ತಿಯಿಂದ ಕೈಗೆತ್ತಿಕೊಂಡು ಆ ಬಗ್ಗೆ ತನ್ನ ಇತಿಮಿತಿಯಲ್ಲಿ ಸಾಧ್ಯವಿರುವ ಎಲ್ಲ ಬಗೆಯ ಪ್ರಯೋಗಗಳನ್ನು ನಡೆಸಿ ಸತ್ಯಾಸತ್ಯತೆ ಬಗ್ಗೆ ವರದಿ ಮಾಡುವುದು.

II ಸ್ಥಳೀಯ ಜನರ ಜೀವನವನ್ನು ಉತ್ತಮ ಪಡಿಸುವ ಸಲುವಾಗಿ ಜನರ ಅವಶ್ಯಕತೆಗಳನ್ನು ಗುರುತಿಸಿ ಆ ಬಗ್ಗೆ ಜನಸಾಮಾನ್ಯರಲ್ಲಿ ನಡೆಯುತ್ತಿರುವ ಸಂಶೋಧನೆಗಳನ್ನು ಗುರುತಿಸುವುದು ಮತ್ತು ಅಂತ: ಪ್ರತಿಭಾನ್ವಿತರನ್ನು ನಿರಂತರವಾಗಿ ಪ್ರೋತ್ಸಾಹಿಸುವುದು.

III ಪ್ರತಿ ವರ್ಷದ ವೈಜ್ಞಾನಿಕ ನಿಭಂದ ಸ್ಪರ್ದೆ ಏರ್ಪಡಿಸುವುದು / ವೈಜ್ಞಾನಿಕ ಶಿಬಿರಗಳನ್ನು ಏರ್ಪಡಿಸುವುದು. ಜನ ಸಾಮಾನ್ಯರನ್ನು ಜ್ಞಾನ, ವಿಜ್ಞಾನ, ತಂತ್ರಜ್ಞಾನದತ್ತ ಆಕರ್ಷಿಸುವುದು.

IV ಸಹಜ ಪ್ರತಿಭೆಯುಳ್ಳ ಜನರನ್ನು ಗುರುತಿಸುವುದು [gifted persons] ಮತ್ತು ಪ್ರೋತ್ಸಾಹಿಸುವುದು.

V ಜನರ ಆರೋಗ್ಯಕ್ಕೆ ಮತ್ತು ಕೃಷಿಗೆ ಸಂಭಂಧಿಸಿದಂತೆ ಸ್ಥಳೀಯ ಸಂಪ್ರದಾಯಿಕ ವೈವಿದ್ಯತೆ ಜ್ಞಾನಗಳನ್ನು ಧಾಖಲೆಗೊಳಿಸುವುದು ಮತ್ತು ಅದರಲ್ಲಿ ಪ್ರಗತಿ/ಅಭಿವೃದ್ದಿಗಾಗಿ ಸತತ ಪ್ರಯತ್ನಿಸುವುದು.

VI ಸ್ಥಳಿಯ ವಿವಿದ ವೃತ್ತಿಪರ ಸಂಘಟನೆಗಳನ್ನು ಸ್ಥಾಪಿಸಲು ಸಹಾಯ ಸಹಕಾರ ನೀಡುವುದು ಮತ್ತು ಅವರ ವೃತ್ತಿಯಲ್ಲಿ ಅವರು ಪರಿಪೂರ್ಣತೆಗೆ ತಲುಪಲು ಸಹಾಯ ಸಹಕಾರ ನೀಡುವುದು, ಪ್ರೋತ್ಸಾಹಿಸುವುದು

VII ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಗುರುತಿಸಿದ ಪ್ರತಿಭಾವಂತರಿಗೆ ಮತ್ತು ವಿಜ್ಞಾನಿಗಳಿಗೆ ಸಾರ್ವಜನಿಕವಾಗಿ ಸನ್ಮಾನ ಪೂರ್ವಕವಾಗಿ ಬಹುಮಾನ ನೀಡುವುದು.

VIII ಸ್ಥಳೀಯ ಸರ್ಕಾರಗಳಿಗೆ, ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಸರ್ಕಾರಗಳಿಗೆ ವೈಜ್ಞಾನಿಕ ವಿಷಯಕ್ಕೆ ಸಂಭಂಧಿಸಿದಂತೆ ಸಲಹೆ ಸೂಚನೆ ನೀಡುವುದು. ಪ್ರತ್ಯಾಕ್ಷಿಕೆ ಕಮ್ಮಟ ಕಾರ್ಯಾಗಾರ ಏರ್ಪಡಿಸುವುದು.

IX ಜೀವನದ ಮೇಲೆ, ಜೀವನ ವಿಧಾನ ಆಹಾರ ಮತ್ತು ಆಹಾರ ವಿಧಾನಗಳ ಪರಿಣಾಮಗಳ ಬಗ್ಗೆ ಸತತ ಅಧ್ಯಯನ ಪ್ರಯೋಗಗಳನ್ನು ಮಾಡುವುದು ಮತ್ತು ಪರಿಣಾಮ ಪ್ರಕಟಿಸುವುದು.

X ಸ್ಥಳಿಯ ಹವಾಮಾನ ಬೌಗೋಳಿಕ ಸನ್ನಿವೇಶಕ್ಕೆ ತಕ್ಕಂತೆ ಸಹಜ ಆರೋಗ್ಯಕರ ಜೀವನದ ಬಗ್ಗೆ ಸಂಶೋಧನೆಗಳನ್ನು ನಡೆಸುವುದು ಮತ್ತು ಸಾರ್ವಜನಿಕರಿಗೆ ನ್ಯಾಯೋಚಿತ ಸಲಹೆಗಳನ್ನು ಪ್ರಚಾರ ಮಾಧ್ಯಮದ ಮೂಲಕ ನೀಡುವುದು.

XI ಸ್ಥಳೀಯ ವಿಜ್ಞಾನಿಗಳಿಗೆ ಜೀವನಾವಶ್ಯಕ ಸೌಲಭ್ಯಗಳನ್ನು ಒದಗಿಸುವುದು.

XII ನೇರ ವಿದೇಶಿ ಸಂಪರ್ಕವಿಲ್ಲದೇ ತನ್ನದೇ ಆದ ಪ್ರಯೋಗಾಲಯಗಳನ್ನು ತನ್ನ ಸದಸ್ಯರ ಉಪಯೋಗಕ್ಕಾಗಿ ಸ್ಥಾಪಿಸುವುದು.

XIII ಸಾರ್ವಜನಿಕರು ನಿತ್ಯ ಉಪಯೋಗಿಸುವ ಸಿದ್ದಪಡಿಸಿದ ವಸ್ತುಗಳ ಗುಣಮಟ್ಟದ ಬಗ್ಗೆ ಮತ್ತು ಅವುಗಳ ದುಷ್ಪರಿಣಾಮಗಳ ಬಗ್ಗೆ ಕಾಲಕಾಲಕ್ಕೆ ಸಾರ್ವಜನಿಕರಿಗೆ ತಿಳುವಳಿಕೆ ನೀಡುವುದು.

XIV. ಈ ಮೇಲೆ ತಿಳಿಸಲಾದ ಉದಾಹರಣೆಗಳಂತೆ ಇತರ ಯಾವುದೇ ವಿಷಯದ ಬಗ್ಗೆ ಅಧಯಯನ ಮಾಡುವುದು ಸಮಾಜದ ದೃಷ್ಟಿಯಿಂದ ಸರಿ ಎಂದು ಬಹುಮತದಲ್ಲಿ ಅಕಾಡೆಮಿಯ [ಜಿಲ್ಲಾ] [ರಾಜ್ಯ ಸದಸ್ಯರು ನಿರ್ಧರಿಸುವ ಯಾವುದೇ ವಿಷಯದ ಬಗ್ಗೆ ಸಂಶೋಧನೆಗಳನ್ನು ಅಕಾಡೆಮಿ ಕೈಗೆತ್ತಿಕೊಳ್ಳಬಹುದು.

**೬. ಅಕಾಡೆಮಿಯ ಸದಸ್ಯರು:**

೬. [I] **(a) ರಾಜ್ಯ ಅಕಾಡೆಮಿಯ ಪ್ರಥಮ ಸದಸ್ಯರು:** ರಾಜ್ಯ ಸರ್ಕಾರವು ಕನಿಷ್ಟ ೨೧ ಅಥವಾ ಅದಕ್ಕಿಂತ ಹೆಚ್ಚಿನ ಸದಸ್ಯರನ್ನು ಪ್ರಥಮ ಹಂತದಲ್ಲಿ ನಾಮಕರಣ ಮಾಡುತ್ತದೆ ಪ್ರತಿಯೊಬ್ಬ ಸದಸ್ಯರ ಬೇರೆ ಬೇರೆ ಕಾರ್ಯಕ್ಷೇತ್ರಕ್ಕೆ ಸೇರಿದವರಾಗಿರುತ್ತಾರೆ. ಹೀಗೆ ನೇಮಕ ಹೊಂದಿದವರು ತಮ್ಮ ಜೀವಿತ ಅವಧಿಯವರೆಗೆ ಅಕಾಡೆಮಿಯ ಸದಸ್ಯರಾಗಿರುತ್ತಾರೆ. ಈ ಸದಸ್ಯರು ತದನಂತರ ಅವರ ಕಾರ್ಯ ವ್ಯಾಪ್ತಿ ಪ್ರದೇಶದ ಅರ್ಹ ಸಂಶೋಧಕರನ್ನು/ಪ್ರತಿಭಾವಂತರನ್ನು ಗುರುತಿಸಿ ಹೆಚ್ಚಿನ ಸದಸ್ಯರನ್ನು ಆಯ್ಕೆ ಮಾಡಿಕೊಳ್ಳಬಹುದು ಮತ್ತು ಅದು ನಿರಂತರ ಮುಂದುವರೆಯುವುದು.

೬ [I](b). **ಜಿಲ್ಲಾ ಅಕಾಡೆಮಿಯ ಪ್ರಥಮ ಸದಸ್ಯರು:** ಕರ್ನಾಟಕದಲ್ಲಿ ಈಗಾಗಲೇ ಸುಮಾರು ೧೦೦೦ ತಳಮಟ್ಟದ ಸಂಶೋಧನಕರನ್ನು ಎನ್.ಐ.ಎಫ್ ಗುರುತಿಸಿರುತ್ತದೆ. ಹೀಗೆ ಗುರುತಿಸಿದವರನ್ನು ಅಕಾಡೆಮಿಯ ಪ್ರಾಥಮಿಕ ಸದಸ್ಯರೆಂದು ಸರ್ಕಾರ ಅವರನ್ನು ಜಿಲ್ಲಾವಾರು ಗುರುತಿಸಿ ವಿಂಗಡಿಸಿ ಅಧಿಕೃತ ಪ್ರಕಟಣೆಯನ್ನು ಹೊರಡಿಸುವುದು. ಹೀಗೆ ಸರ್ಕಾರದ ಮೊದಲ ಪ್ರಕಟಣೆಯಲ್ಲಿ ಒಳಗೊಂಡ ವ್ಯಕ್ತಿಗಳೇ ಪ್ರಥಮ ಹಂತದಲ್ಲಿ ಜಿಲ್ಲಾ ಅಕಾಡೆಮಿಯನ್ನು ಪ್ರತಿನಿಧಿಸುತ್ತಾರೆ.

**೬. [II] ಸದಸ್ಯರ ಅರ್ಹತೆ:**

[a] ಅಕಾಡೆಮಿಯ ಸದಸ್ಯರಾಗಬಯಸುವವರು ಕನಿಷ್ಟ ಒಂದಾದರೂ ಸಣ್ಣಪುಟ್ಟ ಅಂಶಗಳ ಬಗ್ಗೆ ಒಂದು ಸಂಶೋಧನೆಯನ್ನು ಮಾಡಿರಬೇಕು. ಹೀಗೆ ಮಾಡಿದ ಸಂಶೋಧನೆಯನ್ನು ಸಂಶೋಧನೆ ಎಂದು ಸ್ಥಳೀಯ ಜಿಲ್ಲಾ ಅಕಾಡೆಮಿಯು ಒಪ್ಪಿಕೊಳ್ಳಬೇಕು.

[b] ಸತ್ಪ್ರಜೆಗಳಾಗಿರಬೇಕು.

[c] ರಾಷ್ಟ್ರ ವಿರೋದಿ ಕಾರ್ಯಗಳಲ್ಲಿ ಭಾಗವಹಿಸಿದ ಬಗ್ಗೆ ಅವರ ಮೇಲೆ ಗುಮಾನಿ ಇರಬಾರದು

[d] ನೈತಿಕತೆ ಹೊಂದಿರಬೇಕು.

[e] ಬ್ರಹ್ಮಚಾರಿಗಳಾಗಿದ್ದರೆ ಉತ್ತಮ, ವಿವಾಹಿತರಾಗಿರಬಹುದು. ಆದರೆ ವಿವಾಹ ವಿಚ್ಛೇದನ ಪಡೆದವರಾಗಿರಬಾರದು ಆದರೆ ಮರು ಮದುವೆಯಾಗಿರಬಹುದು.

[f] ಮಾದಕ ದ್ರವ್ಯಗಳಿಗೆ ದಾಸರಾಗಿರಬಾರದು

[g] ಅಪ್ರಾಮಾಣಿಕ ರಾಗಿರಬಾರದು, ಯಾವುದೇ ಹಂತದಲ್ಲಿ ಈ ಅರ್ಹತೆಯನ್ನು ಕಳೆದುಕೊಂಡಲ್ಲಿ ಸರ್ಕಾರ ಅವರನ್ನು ಸದಸ್ಯತ್ವದಿಂದ ವಜಾ ಮಾಡಬಹುದು ಮತ್ತು ಹಾಗೆ ವಜಾ ಮಾಡುವ ಮೊದಲು ವಿವರಣೆ ಪಡೆಯಬಹುದು.

[h] ಯಾವುದೇ ರಾಜಕೀಯ ಪಕ್ಷದೊಂದಿಗೆ ಅಧಿಕೃತವಾಗಿ ಗುರುತಿಸಿಕೊಳ್ಳಬಾರದು.

೬ [III]. ಪ್ರಾಥಮಿಕ/ನಂತರದ ಸದಸ್ಯರು/ಜೀವ ಪರ್ಯಂತ ಅಕಾಡೆಮಿಯ ಸದಸ್ಯರಾಗಿರುತ್ತಾರೆ.

**ಸದಸ್ಯರ ಬಗೆಗಳು :**

೭ [I]. **ಸಾಮಾನ್ಯ ಸದಸ್ಯರು ಅಥವಾ ಮುಂದುವರೆದ ಸದಸ್ಯರು:** ಸ್ಥಳಿಯ ವ್ಯಕ್ತಿಯ, ತಾತ್ವಿಕ ಸಿದ್ಧಾಂತಗಳನ್ನು / ಪ್ರಯೋಗಗಳನ್ನು ಪರಿಶೀಲಿಸಿದ ತರುವಾಯ ಅವರಲ್ಲಿ ಒಂದು ವಿಶೇಷ ಜ್ಞಾನ / ಪರಿಣತಿ ಅಡಗಿದೆ ಎಂದು ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಆ ಪ್ರಕಾರ ಜ್ಞಾನ ಪರಿಣತಿ ಇನ್ಯಾರಲ್ಲಿಯೂ ಕಂಡು ಬರಲಾರದು ಎಂದು ಅಕಾಡೆಮಿ ಬಹುಮತದಿಂದ ಭಾವಿಸಿದಲ್ಲಿ ಅಂತ: ವ್ಯಕ್ತಿಯನ್ನು ಜಿಲ್ಲಾ ಸದಸ್ಯರೆಂದು ಭಾವಿಸಬಹುದು. ಹೀಗೆ ಸೇರ್ಪಡೆಗೊಳ್ಳುವ ಸದಸ್ಯರ ಸಂಖ್ಯೆಗೆ ಇತಿಮಿತಿ ಇರುವುದಿಲ್ಲ ಇವರನ್ನು ಸಾಮಾನ್ಯ ಸದಸ್ಯ ಎಂದು ಕರೆಯಲಾಗುವುದು. ಹೀಗೆ ಆಯ್ಕೆಯಾಗುವ ಮೊದಲು ೧೦ ವರ್ಷ ಜಿಲ್ಲಾ ವ್ಯಾಪ್ತಿಯಲ್ಲಿ ವಾಸವಾಗಿರಬೇಕು.

೭ [II]. **ಕಾರ್ಯಕಾರಿ ಸದಸ್ಯರು:** ಪ್ರಾಥಮಿಕ ಸದಸ್ಯರು ಮತ್ತು ಸಾಮಾನ್ಯ ಸದಸ್ಯರನ್ನು ಒಳಗೊಂಡ ಸಭೆಯು ಪ್ರಥಮ ಹಂತದಲ್ಲಿ ೧೩ ರಿಂದ ೧೫, ೧೭, ೧೯, ೨೧ ರ ಸಂಖ್ಯೆಯಲ್ಲಿ ಕಾರ್ಯಕಾರಿ ಸದಸ್ಯರನ್ನು ಆಯ್ಕೆ ಮಾಡುತ್ತಾರೆ

೭ [III] **ಕಾರ್ಯಾಧ್ಯಕ್ಷರು:** ಹೀಗೆ ಆಯ್ಕೆಗೊಂಡ ಸದಸ್ಯರು ತಮ್ಮಲ್ಲಿ ಒಬ್ಬನನ್ನು ಅಧ್ಯಕ್ಷನೆಂದು ಆಯ್ಕೆ ಮಾಡಿಕೊಳ್ಳಬೇಕು. ಇನ್ನೊಬ್ಬರನ್ನು ಉಪಾಧ್ಯಕ್ಷರೆಂದು ಆಯ್ಕೆಮಾಡಿಕೊಳ್ಳಬೇಕು. ಈ ಕಾರ್ಯಧ್ಯಕ್ಷರು ಜಿಲ್ಲಾ ಅಕಾಡೆಮಿಯ ಮುಖ್ಯಸ್ಥರಾಗಿರುತ್ತಾರೆ. ಇವರು ಅಧಿಕಾರದ ಅವಧಿ ೫ ವರ್ಷ ಮಾತ್ರವಾಗಿರುತ್ತದೆ. ಈ ಅವಧಿಯ ನಂತರ ಇವರು ಆಜೀವ ಪರ್ಯಂತ ಗೌರವ ಕಾರ್ಯಧ್ಯಕ್ಷರಾಗಿ ಮುಂದುವರೆಯುತ್ತಾರೆ.

೭ [IV]. ಹೀಗೆ ಕಾರ್ಯಕಾರಿ ಸದಸ್ಯರಾಗಿ ಆಯ್ಕೆ ಹೊಂದಿದ ಸದಸ್ಯರಲ್ಲಿ ೧/೩ ಜನರು ಪ್ರತಿ ಎರಡು ವರ್ಷಕ್ಕೆ ಒಮ್ಮೆ ಕಾರ್ಯಕಾರಿ ಸದಸ್ಯತ್ವದಿಂದ ರಾಜ್ಯ ಸಭೆ ಮಾದರಿಯಲ್ಲಿ ನಿವೃತ್ತಿ ಹೊಂದುತ್ತಾರೆ. ಆ ಸ್ಥಳಕ್ಕೆ ಸಾಮಾನ್ಯ ಸದಸ್ಯರಿಂದ ನಿವೃತ್ತಿ ಹೊಂದಿದ ಕಾರ್ಯಕಾರಿ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಹೊಸ ಕಾರ್ಯಕಾರಿ ಸದಸ್ಯರನ್ನು ನಿವೃತ್ತಿ ಹೊಂದುವ ಕಾರ್ಯಕಾರಿ ಸದಸ್ಯರು ಸೇರಿದಂತೆ ಬಹುಮತದಿಂದ ಆಯ್ಕೆಮಾಡುತ್ತಾರೆ. ಕಾರ್ಯಕಾರಿ ಸದಸ್ಯರ ಪೂರ್ಣಾವಧಿಯು ೬ ವರ್ಷದ ಅವಧಿಗೆ ಇರುತ್ತದೆ. ಈ ಆಯ್ಕೆ ಎಲ್ಲ ಕಾರ್ಯಕಾರಿ ಸದಸ್ಯರು ಮತದಾನದ ಮೂಲಕ ಆಯ್ಕೆ ಮಾಡುತ್ತಾರೆ.

೮. **ಸಭೆ ನಡೆಸುವ ವಿಧಾನ:** ಮೊದಲ ಸಭೆ ಸೇರಿದ ತರುವಾಯ, ಅಧ್ಯಕ್ಷರ ಆಯ್ಕೆಯಾದ ತರುವಾಯ, ಅಕಾಡೆಮಿಯಲ್ಲಿ ೩ ತಿಂಗಳಿಗೆ ಒಂದು ಸಲ ಕಾರ್ಯಕಾರಿ ಸಭೆಯನ್ನು ಕಡ್ಡಾಯವಾಗಿ ಕರೆಯಬೇಕು. ವರ್ಷಕ್ಕೆ ಒಮ್ಮೆ ಮಹಾಸಭೆ ಕರೆಯಬೇಕು. ಹೀಗೆ ಸಭೆ ಕರೆಯುವಾಗ ಪ್ರತಿಸಲ ಅಧ್ಯಕ್ಷರು ದಿನಾಂಕ ನಿಗದಿ ಪಡಿಸಬಾರದು. ಮೊದಲ ಸಭೆಯಲ್ಲಿ ಸಾರ್ವಾನುಮತದಿಂದ ಆಯಾ ಜಿಲ್ಲೆಯಲ್ಲಿ ಸಹಜವಾಗಿ ಜನರು ಸಂಪ್ರದಾಯವಾಗಿ ಸೇರುವ ದಿನಗಳನ್ನು ಆಯ್ಕೆ ಮಾಡಿ ಸಂತೆಯ ದಿನಗಳನ್ನು ತ್ರೈಮಾಸಿಕ ಸಭೆಗೆ ಆಯ್ಕೆ ಮಾಡಿಕೊಳ್ಳಬೇಕು. ಪ್ರತಿ ತಿಂಗಳು ೧ನೇ, ೨, ೩, ೪ನೇ ವಾರದ ಯಾವುದಾದರೂ ಒಂದು ದಿನ ಅದೇ ಪ್ರಕಾರ ವಾರ್ಷಿಕ ಸಾಮಾನ್ಯ ಸಭೆಗಾಗಿ ಆಯಾ ಜಿಲ್ಲೆಯ ಈಗಾಗಲೇ ಮನ್ನಣೆ ಪಡೆದ ಯಾವುದಾದರೂ ಜಾತ್ರೆಯ ದಿನದಂದು ದಿನಾಂಕ ನಿಗದಿಪಡಿಸಬೇಕು. ಹೀಗೆ ಕಾರ್ಯಕಾರಿ ಸಭೆ, ಸಾಮಾನ್ಯ ಸಭೆ ನಡೆಸುವುದಕ್ಕಾಗಿ ಯಾರು ಯಾರಿಗೆ ಆಮಂತ್ರಣ/ನೋಟೀಸ್ ಕಳುಹಿಸುವ ಅವಶ್ಯಕತೆ ಇರುವುದಿಲ್ಲ. ನಿಗದಿ ಮಾಡಿದ ಅಂದಿನ ದಿನ ಅವರು ಸ್ವಯಂಸ್ಫೂರ್ತಿಯಿಂದ ಖಾಯಂ ಆಗಿ ನಿರ್ದಿಷ್ಟಪಡಿಸಿದ ಸಮಯಕ್ಕೆ ನಿರ್ಧಿಷ್ಟಪಡಿಸಿದ ಸ್ಥಳದಲ್ಲಿ ಹಾಜರ್ ಆಗಬೇಕು. ಸಭೆಯಲ್ಲಿ ಅಧ್ಯಕ್ಷರು ಹಾಜರ್ ಇರಬೇಕು ಅಧ್ಯಕ್ಷರು / ಉಪಾಧ್ಯಕ್ಷರು ಹಾಜರ್ ಇಲ್ಲದೇ ಹೋದಲ್ಲಿ ಕಾರ್ಯಕಾರಿ ಸಭೆಯ ಸದಸ್ಯರು ತಮ್ಮ ಆ ಸಭೆಯ ಕಾರ್ಯನಿರ್ವಹಿಸಲು ಸಭೆಯ ಉದ್ದೇಶಕ್ಕಾಗಿ ಒಬ್ಬನನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಬೇಕು ಸಭೆ ನಡೆಯುವಾಗ ತಡವಾಗಿ ಅಧ್ಯಕ್ಷರು / ಉಪಾಧ್ಯಕ್ಷರು ಆಗಮಿಸಿದರೆ ನಂತರ ಅವರಿಗೆ ಆ ಸ್ಥಾನ ಬಿಟ್ಟುಕೊಡಬೇಕು. ಆದರೆ ಸಮಯಕ್ಕೆ ಸರಿಯಾಗಿ ಸಭೆ ಪ್ರಾರಂಭವಾಗುವಂತೆ ಮಾತ್ರ ಎಲ್ಲರೂ ಸೇರಿ ನೋಡಿಕೊಳ್ಳಬೇಕು. ಈ ಖಾಯಂ ಸಭೆಗಳಲ್ಲದೆ ತುರ್ತು ಪ್ರಸಂಗದಲ್ಲಿ ಹೆಚ್ಚುವರಿ ಸಭೆ ಕರೆಯುವ ಅವಶ್ಯಕತೆ ಇದೆ ಎಂದು ಅಧ್ಯಕ್ಷರು ಅಥವಾ ೨೫% ಸದಸ್ಯರು ಇಷ್ಟಪಟ್ಟಲ್ಲಿ ಹೆಚ್ಚುವರಿ ಸಭೆ ಕರೆಯಬಹುದು.

**೯. <u>ಸದಸ್ಯರ ಅಧಿಕಾರಗಳು ಕರ್ತವ್ಯಗಳು:</u>**

೯ [I] ಅಕಾಡೆಮಿಯ ಉದ್ದೇಶ ಸಫಲವಾಗಲು ಅಕಾಡೆಮಿಯ ಕಾರ್ಯಗಳಲ್ಲಿ ಸಕ್ರೀಯವಾಗಿ ಭಾಗವಹಿಸುವುದು.

೯ [II] ಅಕಾಡೆಮಿಗೆ ಅವರು ಸದಸ್ಯರೆಂದು ನಾಮಕರಣಗೊಂಡ ಪ್ರಯುಕ್ತ ಅವರ ಸಂಶೋಧನೆ /ಸಿದ್ದಾಂತಗಳಿಗಾಗಿ ಅವರು ಈ ಅಕಾಡೆಮಿ ಮನ್ನಣೆಯಿಂದ ಅವರು ಯಾವುದೇ ಮೂಲದಿಂದ ಆದಾಯವನ್ನು [ಗೌರವಧನ ಇತ್ಯಾದಿ] ಪಡೆದಿದ್ದಲ್ಲಿ ಸದರಿ ಆದಾಯದ ೫% ಹಣವನ್ನು ಅಕಾಡೆಮಿಗೆ ನಿತ್ಯವೆಚ್ಚಕ್ಕೆ ದಾನವಾಗಿ ನೀಡುವುದು.

೯ [III] **ಅಧಿಕಾರ:** ಅಕಾಡೆಮಿಯಲ್ಲಿ ಲಭ್ಯವಿರುವ ಪ್ರಯೋಗಾಲಯ ಪುಸ್ತಕಾಲಯ ಇತ್ಯಾದಿಗಳನ್ನು ತಮ್ಮ ಸಂಶೋಧನೆಗಾಗಿ ಅಧ್ಯಕ್ಷರ ಅನುಮತಿಯೊಂದಿಗೆ ಉಪಯೋಗಿಸಿಕೊಳ್ಳುವುದು. ಚರ್ಚೆಯಲ್ಲಿ ಭಾಗವಹಿಸುವುದು ಸಲಹೆ ಸೂಚನೆ ನೀಡುವುದು.

೯ [IV]: ಅಕಾಡೆಮಿ ಸದಸ್ಯತ್ವಕ್ಕಾಗಿ ನಿಗದಿಪಡಿಸಿರುವ ವಾರ್ಷಿಕ ಶುಲ್ಕವನ್ನು ತಪ್ಪದೇ ಪಾವತಿಸಬೇಕು.

೯ [V]. ಅಂದರೆ ಕಾರ್ಯಕಾರಿ ಸದಸ್ಯರು ವಯಸ್ಸು ಕನಿಷ್ಟ ೪೦ ವರ್ಷವಾಗಿರಬೇಕು ಇವರನ್ನು ಸಾಮಾನ್ಯ ಸದಸ್ಯರಿಂದ ಬಹುಮತದಿಂದ ಆಯ್ಕೆ ಮಾಡಬೇಕು.

೯ [VI]. ವಿಶೇಷ ಸಂದರ್ಭದಲ್ಲಿ ಒಟ್ಟು ಸದಸ್ಯರ ಸ್ನಾತಕೋತ್ತರ ಪದವಿ ಪಡೆದ ಸದಸ್ಯರ ಸಂಖ್ಯೆ ೫% ಕ್ಕಿಂತ ಹೆಚ್ಚಿಗೆ ಇರಬಾರದು. ಈ ಅಕಾಡೆಮಿಯ ಮೂಲ ಉದ್ದೇಶ ತಳಮಟ್ಟದ ವಿಜ್ಞಾನಿಗಳ ಪ್ರತಿಭೆಯನ್ನು ಗುರುತಿಸುವುದು ಮತ್ತು ಪ್ರೋತ್ಸಾಹಿಸುವುದು ಆಗಿರುವುದರಿಂದ ಸದಸ್ಯರನ್ನು ನೇಮಿಸುವಾಗ ಆಯ್ಕೆ ಮಾಡುವಾಗ ಅವರು ವಿಶ್ವವಿದ್ಯಾಲಯ ಸ್ನಾತಕೋತ್ತರ ಪದವಿಯನ್ನು ಹೊಂದಿರಬಾರದು.  ಈ ನಿರ್ಭಂದವು ಕನಿಷ್ಟ ೧೫ ವರ್ಷ ಮುಂದುವರಿಯಬೇಕು. ನಂತರ ಇದನ್ನು ಸಡಿಲಿಸಬಹುದು.

೯ [VII]. ಕಾರ್ಯಕಾರಿ ಸದಸ್ಯರು ಪೂರ್ಣ ಪ್ರಮಾಣದ ಸದಸ್ಯರಾಗಿರುತ್ತಾರೆ.  ಗರಿಷ್ಟ ೬ ವರ್ಷ ಅವರಿಗೆ ಅವರು ಕಾರ್ಯ ನಿರ್ವಹಿಸುತ್ತಾರೆ.  ಇತರ ಸದಸ್ಯರು ಗೌರವ ಸದಸ್ಯರಾಗಿರುತ್ತಾರೆ. ಅವರು ಕಾಲಕಾಲಕ್ಕೆ ಅಕಾಡೆಮಿಗೆ ಹಾಜರ ಆಗಿ ಸಲಹೆ ಸೂಚನೆ ನೀಡಬಹುದು ಅಥವಾ ನಿರ್ದಿಷ್ಟವಾದ ಪ್ರಯೋಗ / ಸಂಶೋಧನೆಗೆ ಅವರ ಭಾಗವಹಿಸುವಿಕೆ ಸೀಮಿತವಾಗಿರಬಹುದು. ಪೂರ್ಣ ಪ್ರಮಾಣದ ಸದಸ್ಯರಿಗೆ ಸೂಕ್ತ ಸಂಭಾವನೆಯನ್ನು ಅಕಾಡೆಮಿ ನಿರ್ಧರಿಸಬಹುದು.

೧೦. ಅಕಾಡೆಮಿಯ ತನ್ನ ಹೆಸರಿನಲ್ಲಿ ಯಾವುದೇ ಚರ ಮತ್ತು ಸ್ಥಿರ ಸ್ವತ್ತುಗಳನ್ನು ಖರೀದಿಸಬಹುದು ಅಥವಾ ಮಾರಾಟ ಮಾಡಬಹುದು.  ದೇಣಿಗೆ ಸ್ವೀಕರಿಸಬಹುದು, ದೇಣಿಗೆ ನೀಡಬಹುದು.

೧೧. ಅಕಾಡೆಮಿಯು ಸ್ವತಂತ್ರವಾಗಿ ಯಾರದೇ ವಿರುದ್ದ ಸಾರ್ವಜನಿಕ ಹಿತದೃಷ್ಟಿಯಿಂದ ನ್ಯಾಯಾಲಯದಲ್ಲಿ ದಾವಾ ಹಾಕಬಹುದುಉ ಅಥವಾ ದಾವಾ ಹಾಕಿಸಿಕೊಳ್ಳಬಹುದು.

೧೨. ಪ್ರತಿಜ್ಞಾವಿಧಿ:  ಪ್ರಥಮ ಸದಸ್ಯರಿಗೆ ರಾಜ್ಯಪಾಲರು ಪ್ರತಿಜ್ಞಾ ವಿಧಿ ಭೋಧಿಸುವುದು ನಂತರದ ಸದಸ್ಯರಿಗೆ ರಾಜ್ಯದ ಅಕಾಡಮಿಯ ಅಧ್ಯಕ್ಷರು ಪ್ರತಿಜ್ಞಾವಿಧಿ ಭೋಧಿಸುವುದು.

**೧೩. ಪ್ರಯೋಗಳ ಬಗ್ಗೆ ನಿಯಮ:** ನಾಮ ನಿರ್ದೇಶನಗೊಂಡ ಅಥವಾ ನಂತರ ಅಕಾಡೆಮಿಯ ಆಯ್ಕೆ ಮಾಡಿದ ಸದಸ್ಯರುಗಳಲ್ಲಿ ಕನಿಷ್ಟ ೯ ಅಥವಾ ಅದಕ್ಕೂ ಹೆಚ್ಚಿನ ಕಾರ್ಯಕಾರಿ ಅನುಮೋದನೆಯೊಂದಿಗೆ ಅಕಾಡೆಮಿಯು ಯಾವುದೇ ಪ್ರಯೋಗಗಳನ್ನು ಕೈಗೊಳ್ಳಲು ಸ್ವಾತಂತ್ರ್ಯ ನೀಡಲಾಗಿದೆ.  ಜಿಲ್ಲಾ ಅಕಾಡೆಮಿಗಳು ಜಿಲ್ಲೆ ವ್ಯಾಪ್ತಿಯಲ್ಲಿ ಸ್ವತಂತ್ರವಾಗಿ ಪ್ರಯೋಗಗಳನ್ನು ಮಾಡಲು ಆದಿಕಾರ ನೀಡಲಾಗಿದೆ. ರಾಜ್ಯ ಅಕಾಡಮಿ ರಾಜ್ಯ ವ್ಯಾಪ್ತಿಯಲ್ಲಿ ಸ್ವತಂತ್ರ್ಯವಾಗಿ ಪ್ರಯೋಗಗಳನ್ನು ಮಾಡಲು ಅಧಿಕಾರ ಸ್ವಾತಂತ್ರ್ಯ ನೀಡಲಾಗಿದೆ. ಆದರೆ ಸರ್ಕಾರವು ಅಕಾಡೆಮಿಯು ನಿರ್ದಿಷ್ಟವಾದ ಪ್ರಯೋಗಗಳನ್ನು ನಿರ್ದಿಷ್ಟವಾದ ಅವಧಿಯ ವರೆಗೆ ಮಾಡಬಾರದು ಎಂದು ನಿರ್ಬಂದ ವಿಧಿಸಬಹುದು ಮತ್ತು ಈ ಅವಧಿಯನ್ನು ಕಾಲ ಕಾಲಕ್ಕೆ ವಿಸ್ತರಿಸಬಹುದು.

೧೪. ಅಕಾಡೆಮಿ ನಡೆಸುವ ಯಾವುದೇ ಪ್ರಯೋಗಗಳ ಸಮಯದಲ್ಲಿ ಅಕಾಡೆಮಿಯ ಕನಿಷ್ಟ ೭ ಜನ ಸದಸ್ಯರು ಕಡ್ಡಾಯವಾಗಿ ಹಾಜರ್ ಇರಬೇಕು ಮತ್ತು ಅವರ ಹಾಜರಾತಿ ಧಾಖಲಿಸಬೇಕು.

<u>ನಿಯಮ ಮತ್ತು ಉಪ ನಿಯಮಗಳ ರಚನೆ :</u>

೧೫. ಜಾರಿಯಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರ ಕಾರ್ಯ ಚಟುವಟಿಕೆಗಳಿಗೆ ಮತ್ತು ಸಮಾಜದ ಸಂಪ್ರದಾಯ ಕಾನೂನುಗಳಿಗೆ ವಿರೋದವಾಗದಿದ್ದಲ್ಲಿ ಅಕಾಡೆಮಿಯ ತನ್ನ ಆಡಳಿತಕ್ಕೆ ಬೇಕಾಗುವ ನಿಯಮಗಳನ್ನು ಅದು ರಚಿಸಿ ಪ್ರಕಟಿಸಿ ಜಾರಿಗೊಳಿಸುವ ಅಧಿಕಾರ ನೀಡಲಾಗಿದೆ.

೧೬. ಅಕಾಡೆಮಿಯು ತನ್ನದೇ ಆದ ಪತ್ರಿಕೆಯನ್ನು ಹೊಂದಿರಬಹುದು. ಆದರೆ ಸದರಿ ಪತ್ರಿಕೆಯಲ್ಲಿ ಪ್ರಕಟವಾಗುವ ಯಾವುದೇ ವೈಜ್ಞಾನಿಕ ಪ್ರಕಟಣೆಗಳನ್ನು ೭ ಜನ [ಪ್ರಕಟಣಾ] ಕಾರ್ಯಕಾರಿ ಸದಸ್ಯರ, ಉಪ ಸಮಿತಿಯಿಂದ ಅನುಮೋದನೆ ಪಡೆದಿರಬೇಕು.

೧೭. ಅಕಾಡಮಿಯು ತನ್ನ ಪ್ರಯೋಗ ನಡೆಸಲು ಮರಣದಂಡನೆಹೊಂದಿ ಪ್ರಾಣ ಕಳೆದುಕೊಂಡ ಅಪರಾಧಿಗಳ ದೇಹವನ್ನು ಪ್ರಯೋಗಕ್ಕಾಗಿ ಪಡೆಯಬಹುದು.

೧೮. ಸರ್ಕಾರದ ಯಾವುದೇ ನಿರ್ಬಂದ ವಿಲ್ಲದೆ ನಿರ್ದೇಶನವಿಲ್ಲದೆ ಜಗತ್ತಿನ ಯಾವುದೇ ವ್ಯಕ್ತಿಯೊಂದಿಗೆ, ಜ್ಞಾನ ವಿಜ್ಞಾನ ತಂತ್ರಜ್ಞಾನಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂದಿಸಿದಂತೆ ಅಕಾಡೆಮಿಯ ೯ ಜನರ ಉಪ ಸಮಿತಿ ಒಪ್ಪಿಗೆಯೊಂದಿಗೆ ವ್ಯಹರಿಸಬಹುದು.

೧೯. ಈ ಸಮಿತಿಯಲ್ಲಿ ಆಡಳಿತಕ್ಕೆ ಸಂಭಂದಿಸಿದಂತೆ ಬಹುಮತದಿಂದ ಯಾವುದೇ ವಿಷಯದ ಬಗ್ಗೆ ನಿರ್ಣಯಕ್ಕೆ ಬರಲು ಸಾಧ್ಯವಿಲ್ಲದೇ ಹೋದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಅನುಕ್ರಮವಾಗಿ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯದರ್ಶಿಗಳು ತೀರ್ಮಾನಕೈಗೊಂಡು ತಿಳಿಸುವರು.

೨೦. ಕರ್ನಾಟಕ ಸರ್ಕಾರವು ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಗಳ ಅಧಿಕಾರಿ ಸಿಬ್ಬಂದಿಗಳು ಸರ್ಕಾರಿ ಮತ್ತು ಅರೇ ಸರ್ಕಾರಿ ಸಂಘ ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಜನ ಸಾಮಾನ್ಯರು ಸೇರಿದಂತೆ. ನ್ಯಾಯಾಲಯದ ಅಧಿಕಾರಿ ಸಿಬ್ಬಂದಿಗಳು ಅಕಾಡೆಮಿಯ ಸಂಶೋಧನಾ ಕಾರ್ಯ ಚಟುವಟಿಕೆಗಳಿಗೆ ಕಾಲ ಕಾಲಕ್ಕೆ ಅಕಾಡೆಮಿ ಕೊರಿಕೆ ಸಲ್ಲಿಸಿದಾಗ ಸಾಧ್ಯವಿರುವ ಎಲ್ಲ ಸಹಾಯ ಸಹಕಾರಿಗಳನ್ನು ನೀಡುವುದು ಅವರ ಕರ್ತವ್ಯವಾಗಿರುತ್ತದೆ. ಆದೇ ಪ್ರಕಾರ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ಇದೇ ಮಾದರಿಯಲ್ಲಿ ಸಹಾಯ ಸಹಕಾರ ಸಲ್ಲಿಸಬಹುದು.

೨೧. ಅಕಾಡೆಮಿಯ ಅಧಿಕೃತ ಆಡಳಿತ ಭಾಷೆ ಕನ್ನಡವಾಗಿರಬೇಕು.

೨೨. ಅಕಾಡೆಮಿಯ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯಕಾರಿ ಸದಸ್ಯರು ಸದಸ್ಯರು ಮತ್ತು ಅಧಿಕಾರಿಗಳು ಸಿಬ್ಬಂದಿ ಇತ್ಯಾದಿ ಅವರು ಅಕಾಡೆಮಿಯ ವೆಚ್ಚದಲ್ಲಿ ವಿದೇಶ ಪ್ರವಾಸ ಮಾಡಬಾರದು.

೨೩. ವಿದೇಶಿ ನಿರ್ಮಿತ ವೈಜ್ಞಾನಿಕ ಮತ್ತಿತರ ವಸ್ತುಗಳನ್ನು ನೇರವಾಗಿ ಖರೀದಿಸಬಾರದು. ಆದರೆ ಅವು ಅತೀ ಸುಲಭವಾಗಿ ಸ್ಥಳಿಯ ಮಾರುಕಟ್ಟೆಯಲ್ಲಿ ಲಭ್ಯವಿದ್ದಾಗ ಅವುಗಳನ್ನು ಪಡೆಯಬಹುದು.

೨೪. ಅಕಾಡೆಮಿಯು ತನ್ನ ಆಂತರಿಕ ಆಡಳಿತದಲ್ಲಿ ಸಂಪೂರ್ಣವಾಗಿ ಸ್ವಾಯತ್ತತೆಯನ್ನು ಪಡೆದಿರುತ್ತದೆ. ತನ್ನ ಸಿಬ್ಬಂದಿಗಳನ್ನು ನೇಮಿಸಕೊಳ್ಳುವುದು ಅವರಿಗೆ ನೀಡಬಹುದಾದ ವೇತನ ಇತರ ಸೌಲಭ್ಯಗಳ ಬಗ್ಗೆ ತನ್ನದೇ ನಿಯಮಗಳನ್ನು ತಾನು ರಚಿಸಿಕೊಳ್ಳಬಹುದಾಗಿದೆ.

೨೫. ಅಕಾಡೆಮಿಯ ಎಲ್ಲ ಆರ್ಥಿಕ ವ್ಯವಹಾರಗಳು ಪಾರದರ್ಶಕವಾಗಿರುತ್ತವೆ. ಅವುಗಳನ್ನು ಪ್ರತಿ ವರ್ಷ ಚಾರ್ಟಟೆಡ್ ಅಕೌಂಟೆಂಟ್ ಅವರಿಂದ ಆಡಿಟ್ ಮಾಡಿಸಿ ಸಾರ್ವಜನಿಕ ಮಾಹಿತಿಗಾಗಿ ತನ್ನ ಪತ್ರಿಕೆಯಲ್ಲಿ ಪ್ರಕಟಗೊಳಿಸಬೇಕು.

೨೬. ಅಕಾಡೆಮಿಯ ನಿರ್ಣಯಗಳು ಯಾವಾಗಲೂ ಬಹುಮತದ ನಿರ್ಣಯಗಳಾಗಿರುತ್ತವೆ.

<u>**೨೭. ಆರ್ಥಿಕ ಸಂಪನ್ಮೂಲಗಳು:**</u> ಪ್ರಾರಂಭದಲ್ಲಿ ಕರ್ನಾಟಕ ರಾಜ್ಯದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿಗಳು ಮತ್ತು ನಗರಾಭಿವೃದ್ಧಿ ಇಲಾಖೆಯ ಮಹಾನಗರ ಪಾಲಿಕೆ ನಗರ ಸಭೆ ಪುರಸಭೆ ಪಟ್ಟಣ ಪಂಚಾಯ್ತಿಗಳು ಕಡ್ಡಾಯವಾಗಿ ತಮ್ಮ ಆಯವ್ಯಯದ ೦.೫% ಹಣವನ್ನು ಅನುದಾನ ರೂಪದಲ್ಲಿ ನಿರಂತರವಾಗಿ ಅಕಾಡೆಮಿಗೆ ನೀಡಬೇಕು ಅಕಾಡೆಮಿಯ ಕಾರ್ಯಚಟುವಟಿಕೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಹೆಚ್ಚಿನ ಹಣ ಒದಗಿಸುವುದು ಸೂಕ್ತ ಎನಿಸಿದಲ್ಲಿ ಹಾಗೆ ನೀಡಬಹುದು. ಆದರೆ ೦.೫%ಕ್ಕಿಂತ

ಅನುದಾನ ಕಡಿಮೆ ಮಾಡಬಾರದು. ಹೀಗೆ ಸ್ಥಳೀಯ ಸರ್ಕಾರಗಳ ಅಕಾಡೆಮಿಗೆ ಹಣ ನೀಡಿದರೂ ಅಕಾಡೆಮಿಯ ಆಡಳಿತದಲ್ಲಿ ಯಾವುದೇ ಬಗೆಯ ಹಸ್ತಕ್ಷೇಪ ಮಾಡಲು ಬಾರದು. ಹೀಗೆ ಸ್ವೀಕರಿಸಿದ ಹಣವನ್ನು ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ರಚಿತವಾದ ಅಕಾಡೆಮಿಗಳ ಚಟುವಟಿಕೆಗಳಿಗೆ ವೆಚ್ಚ ಮಾಡಬೇಕು ವಿಶೇಷ ಸಂಧರ್ಬದಲ್ಲಿ ಸ್ಥಳೀಯ ಅಕಾಡೆಮಿಯು ಸದರಿ ಮೊತ್ತವನ್ನು ಸಂಶೋಧನೆಗಾಗಿ ಇತರ ಜಿಲ್ಲಾ ಅಕಾಡೆಮಿಗಳಿಗೆ ಉಚಿತವಾಗಿ ವರ್ಗಾಯಿಸಬಹುದು. ಇದೇ ಮಾದರಿಯಲ್ಲಿ ರಾಜ್ಯ ಸರ್ಕಾರವು ರಾಜ್ಯ ಅಕಾಡೆಮಿಗೆ ತನ್ನ ಆಯವ್ಯಯದ ಶೇ. ೦.೧% ಹಣವನ್ನು ಬಿಡುಗಡೆ ಮಾಡಬೇಕು. ರಾಜ್ಯ ಸರ್ಕಾರವು ತನ್ನ ವಿವೇಚನಾತ್ಮಕ ನಿರ್ಣಯಕ್ಕೆ ಒಳಪಟ್ಟು ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬಹುದು.

**<u>ಅಕಾಡೆಮಿಯ ಅಧಿಕಾರಿ ಸಿಬ್ಬಂದಿಗಳು:</u>**

೨೮ [I]. ಬಹುಮತದ ನಿರ್ಣಯದ ಮೇಲೆ ಅಕಾಡೆಮಿಯ ಸದಸ್ಯರ ಸೂಕ್ತ ಸರ್ಕಾರಿ ಅಧಿಕಾರಿಗಳ ಸಿಬ್ಬಂದಿಗಳ ಸೇವೆಯನ್ನು ಅಕಾಡೆಮಿಗೆ ಎರವಲು ಪಡೆದುಕೊಳ್ಳಬಹುದು.

೨೮ [II]. ಸ್ಥಳೀಯ ಸರ್ಕಾರಗಳು ಮತ್ತು ಗ್ರಾಮೀಣಾಭಿವೃದ್ಧಿ ಪಂಚಾಯ್ತಿ ರಾಜ್ ಇಲಾಖೆ ಸೇರಿದಂತೆ ಇತರ ಇಲಾಖೆಗಳಿಂದ ಆಡಳಿತ ಸಿಬ್ಬಂದಿಯನ್ನು ಅಕಾಡೆಮಿಯು ಪ್ರತಿನಿಯೋಜನೆ ಮೇಲೆ ಪಡೆದುಕೊಳ್ಳ ಬಹುದು ಹಾಗೆ ಪಡೆದುಕೊಂಡ ಸಮಯದಲ್ಲಿ ಆಯಾ ಅಧಿಕಾರಿ/ಸಿಬ್ಬಂದಿಯ ವೇತನವನ್ನು ಮಾತ್ರ ಇಲಾಖೆಯು ಭರಿಸಬೇಕು ಹೀಗೆ ಪ್ರತಿನಿಯೋಜನೆಗೊಂಡ ಅಧಿಕಾರಿ ಸಿಬ್ಬಂದಿಗಳ ಭತ್ತೆ ಇತ್ಯಾದಿಗಳನ್ನು ಅಕಾಡೆಮಿಯು ಪಾವತಿಸಬೇಕಾಗುತ್ತದೆ ಅಥವಾ ಅಕಾಡೆಮಿಯು ಆರ್ಥಿಕವಾಗಿ ಸಬಲವಾಗಿದ್ದರೆ ಎಲ್ಲವನ್ನು ಅಕಾಡೆಮಿ ಆದಾಯದಿಂದ ನೀಡಬಹುದು.

೨೮ [III]. ಅಕಾಡೆಮಿಯಿಂದ ನೇರ ನೇಮಕಹೊಂದಿದ ಅಧಿಕಾರಿ ಸಿಬ್ಬಂದಿಗಳು ಸರ್ಕಾರಿ ನೌಕರರಾಗಿರುವುದಿಲ್ಲ. ಅವರು ಸಂಪೂರ್ಣವಾಗಿ ಖಾಸಗಿ ಕಂಪನಿಯ ಹಾಗೆ ಅಕಾಡೆಮಿ ನೌಕರರಾಗಿರುತ್ತಾರೆ. ಅವರ ಸೇವಾ ವಿಷಯದ ಬಗ್ಗೆ ಜಿಲ್ಲಾ ಅಕಾಡೆಮಿಗಳ ಕೈಗೊಳ್ಳುವ ನಿರ್ಣಯಗಳ ಅಂತಿಮವಾಗಿರುತ್ತವೆ ಮತ್ತು ಸ್ಥಳೀಯ ನ್ಯಾಯಾಲಯದ ವಿಮರ್ಷೆಗೆ ಒಳಪಟ್ಟಿರುತ್ತವೆ.

೨೯. ಅಕಾಡೆಮಿಯು ತನ್ನ ವಿಷಯ ವ್ಯಾಪ್ತಿಯು ಅಧಿಕವೆಂದು ಕಂಡುಬಂದಲ್ಲಿ ಪ್ರತಿ ವಿಷಯಕ್ಕೆ ಸಂಭಂಧಿಸಿದಂತೆ ಉಪ ಅಕಾಡೆಮಿಯನ್ನು ರಚಿಸಿಕೊಳ್ಳಬಹುದು ಮತ್ತು ಅದರ ನೀತಿ ನಿಯಮಗಳನ್ನು ನಿರ್ಣಯಿಸಿಕೊಳ್ಳಬಹುದು.

**<u>೩೦. ರಾಜ್ಯ ಅಕಾಡೆಮಿಯ ಮತ್ತು ಜಿಲ್ಲಾ ಅಕಾಡೆಮಿಗಳ ಸಂಭಂದಗಳು:</u>**

I. ರಾಜ್ಯ ಅಕಾಡೆಮಿ ಮತ್ತು ಜಿಲ್ಲಾ ಅಕಾಡೆಮಿಗಳು ಸ್ವತಂತ್ರವಾದ ಘಟಕಗಳಾಗಿರುತ್ತವೆ ರಾಜ್ಯ ಅಕಾಡೆಮಿ ಜಿಲ್ಲಾ ಅಕಾಡೆಮಿಯ ಮೇಲೆ ಯಾವುದೇ ಆಡಳಿತಾತ್ಮಕ ನಿಯಂತ್ರಣವನ್ನು ಹೊಂದಿರುವುದಿಲ್ಲ. ಆದರೆ ಜಿಲ್ಲಾ ಅಕಾಡೆಮಿಗಳ ಪ್ರಕಟಣೆಗೊಳಿಸುವ / ಮನ್ನಣೆ ನೀಡುವ ಪ್ರಯೋಗಗಳು / ಸಿದ್ಧಾಂತಗಳು / ವಿಚಾರಗಳನ್ನು ಮರು ಪರಿಶೀಲನೆ ಮಾಡಿ ವಿಮರ್ಷೆಯನ್ನು ಮಾಡಿ ಪುನ: ಪ್ರಯೋಗಗಳನ್ನು ಮಾಡಿ ದೃಡೀಕರಿಸುವುದು ಇಲ್ಲವೇ ನಿರಾಕರಿಸುವ ಕಾರ್ಯವನ್ನು ರಾಜ್ಯ ಅಕಾಡೆಮಿ ಮಾಡಬೇಕು.

II. ಸಾರ್ವಜನಿಕ ಹಿತದೃಷ್ಟಿಯಿಂದ ಜ್ಞಾನ, ವಿಜ್ಞಾನ, ತಂತ್ರಜ್ಞಾನ ಅಭಿವೃದ್ಧಿಯ ಹಿತದೃಷ್ಟಿಯಿಂದ ರಾಜ್ಯ ಮಟ್ಟದ ಸಮ್ಮೇಳನವನ್ನು ಜಿಲ್ಲಾ ಅಕಾಡೆಮಿಗಳ ಸಹಾಯ, ಸಹಕಾರದಿಂದ ಸಂಘಟಿಸುವುದು.

೩೧. ಈ ಅಧಿನಿಯಮಗಳನ್ನು ಜಾರಿಗೊಳಿಸುವಾಗ ತೊಂದರೆಗಳು ಉದ್ಭವಿಸಿದರೆ ಈ ಅಕಾಡೆಮಿಯ ನೀತಿ ರೂಪಕ ಟಿಪ್ಪಣಿ "ಜನಸಾಮಾನ್ಯರಿಂದ ವಿಜ್ಞಾನ" ಮತ್ತು ೧೬೬೩ರ ರಾಯಲ್ ಚಾರ್ಟರ್‌ನಲ್ಲಿ ವಿವರಿಸಲಾದ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಿ ಅದರಲ್ಲಿ ತಿಳಿಸಲಾದ ದ್ಯೇಯೋದ್ದೇಶಗಳ ಗುರಿ ಸಾಧನೆಗೆ ವ್ಯತಿರಿಕ್ತವಾಗದಂತೆ ಸೂಕ್ತ ತಿದ್ದುಪಡಿಗಳನ್ನು ಅಕಾಡೆಮಿಯು 75% ಬಹುಮತದಿಂದ ಮಾಡಿಕೊಳ್ಳಬಹುದಾಗಿದೆ.

# ಅಧ್ಯಾಯ 15

## ಅಧ್ಯಾಯ 7 ಮತ್ತು 9ಕ್ಕೆ ಸಂಭಂದಿಸಿದಂತೆ
## ಹೆಚ್ಚುವರಿ ಟಿಪ್ಪಣಿ

ಅಧ್ಯಾಯ 7ರಲ್ಲಿ ಈ–ಟಿವಿಯಲ್ಲಿ ಭಾನಾಮತಿಯ ವಿಚಿತ್ರ ಅಂಶಗಳ ಬಗ್ಗೆ ತಿಳಿಸಲಾಗಿದೆ. ದಿನಾಂಕ 06.11.2005 ರಂದು ರಾತ್ರಿ 10.00 ಗಂಟೆಗೆ ಪ್ರಸಾರವಾದ ಭಾನಾಮತಿ ಕಾರ್ಯಕ್ರಮದಲ್ಲಿ ಇನ್ನೂ ಕೆಲವು ಕೌತುಕ ವಿಷಯಗಳು ಪ್ರಕಟಗೊಂಡವು ಅಲ್ಲಿ ಮೋಡಿ ವಿದ್ಯೆಯ ಪ್ರವೀಣರಾದ ಮಲ್ಲೋರ ಹಳ್ಳಿಯ ಶ್ರೀ ಕುಂಟ ಗೌಡರ ಬಗ್ಗೆ ಪ್ರಚಾರ ಮಾಡಲಾಯಿತು ಮತ್ತು ಇಂದಿಗೂ ಅವರ ಕೆಲವು ಶಿಷ್ಯರು ಇರುವುದಾಗಿ ಆದರೆ ಅವರು ಆ ವಿಧ್ಯೆಯನ್ನು ಈಗ ಮಾಡುತ್ತಿಲ್ಲ. ಮನಸ್ಸು ಮಾಡಿದರೆ ಈಗಲೂ ಮಾಡಲು ಸಾದ್ಯವೆಂದು ಟಿ.ವಿ.ಯಲ್ಲಿ ಹೇಳಿದರು. ಶ್ರೀ ಕುಂಟಗೌಡರ ಬಗ್ಗೆ ಅವರು ಹೇಳಿದ ಅದ್ಭುತವೇನೆಂದರೆ ಒಂದು ಸಲ ನ್ಯಾಯಾಲಯಕ್ಕೆ ಅವರು ಸಾಕ್ಷಿ ಹೇಳಬೇಕಾಗಿ ಬಂದಾಗ ಅವರು ನ್ಯಾಯಾಲಯಕ್ಕೆ ಸ್ವಂತ ಹಾಜರು ಆಗದೆ ತಮ್ಮ ಪೇಠಾ, ಕೋಲು ಮತ್ತು ಕೋಟನ್ನು ಮಾತ್ರ ಕಳುಹಿಸಿದರು ನ್ಯಾಯಾಧೀಶರ ಎದುರಿಗೆ ವ್ಯಕ್ತಿ ಇರಲಿಲ್ಲ ನಿರ್ಜೀವ ವಸ್ತುಗಳು ನ್ಯಾಯಾಧೀಶರು ಕೇಳಿದ ಪ್ರಶ್ನೆಗೆ ಉತ್ತರ ನೀಡಿದವು ಎಂದು ತಿಳಿಸಿದರು ಇಂದಿಗೂ ಅವರ ಮಕ್ಕಳು ಜೀವಂತದಿಂದ ಇರುತ್ತಾರೆ ಅವರನ್ನು ಸಂದರ್ಶನದಲ್ಲಿ ತೋರಿಸಲಾಯಿತು.

ಮುಂದುವರೆದು ಅವರು 1986ರಲ್ಲಿ ನಿಧನರಾದರೆಂದು, ಅವರು ಕೆಲವು ಸಲ ಬ್ರಿಟೀಷರಿಗೆ ಸ್ವಾತಂತ್ರ ಹೋರಾಟದಲ್ಲಿ ಕಪ್ಪು ವಿದ್ಯೆಯಿಂದಲೇ ಪ್ರತೀಕಾರ ಮಾಡಿದರು ಎಂದು ಹೇಳಿದರು. ಅವರು ಮೋಡಿ ವಿದ್ಯೆಯಲ್ಲಿ ಎಷ್ಟು ಪರಿಣಿತಿ ಹೊಂದಿದ್ದರು ಎಂದರೆ ಒಂದು ಸಲ ಒಬ್ಬ ಮೋಡಿಗಾರನು ತನ್ನ ಸ್ವಂತ ಮಗುವನ್ನು ಕತ್ತರಿಸಿ ಬೇರೆ ಬೇರೆಯಾಗಿ ಮಾಡಿ ಜನರಿಗೆ ತೋರಿಸಿ ಪುನ: ಅದಕ್ಕೆ ಜೀವ ಭರಿಸುವುದಾಗಿ ತಿಳಿಸಿದರು ಆಗ ಈ ಶ್ರೀ ಕುಂಟಗೌಡರು ಸಣ್ಣ ಕಲ್ಲನ್ನು ಮಂತ್ರಿಸಿ ಎಸೆಯಲಾಗಿ ಆ ಕಲ್ಲು ಗರುಡ ಪಕ್ಷಿಯಾಗಿ ಕತ್ತರಿಸಿ ಮಗುವಿನ ಮಾಂಸದ ತುಂಡುಗಳಲ್ಲಿ ಒಂದು ಸಣ್ಣ ಮಾಂಸದ ತುಂಡನ್ನು ಮೇಲಕ್ಕೆ ಎತ್ತಿಕೊಂಡು ಹೋಯಿತು. ಆಗ ಆ ಮಾಂತ್ರಿಕನು ತನ್ನ ತಪ್ಪಾಯಿತು ಕ್ಷಮಿಸಬೇಕು ವಿಧ್ಯೆಯಲ್ಲಿ ನಾನು ಸೋತೆ ಎಂದು ಶರಣಾಗತನಾದಾಗ ಪುನ: ಆ ಗರುಡಪಕ್ಷಿಯಿಂದ ಮಾಂಸದ ತುಂಡನ್ನು ಹಿಂದಕ್ಕೆ ನೀಡಿ ಮಗುವಿನ ಜೀವ ಪಡೆಯಲಾಯಿತು ಎಂದು ಶ್ರೀ ಕುಂಟಗೌಡರ ಮಗನು ಸಂದರ್ಶನದಲ್ಲಿ ತಿಳಿಸಿದನು. ಮುಂದುವರೆದು ಶ್ರೀ ಕುಂಟಗೌಡರು ಒಂದು ಕಲ್ಲನ್ನು ಮಂತ್ರಿಸಿ ಒಂದು ವ್ಯಕ್ತಿಯ ಹೆಸರಿನಲ್ಲಿ ಎಸೆದರೆ ಅದು ಆ ವ್ಯಕ್ತಿ ಎಲ್ಲಿಯೇ ಇರಲಿ ಅವನಲ್ಲಿಗೆ ಹೋಗಿ ಅವನನ್ನು ಕೊಂದು ಹಿಂದಕ್ಕೆ ಬರುವುದು ಅಂತಹ ಶಕ್ತಿ ಅವರಲ್ಲಿ ಇತ್ತು ಎಂದು ಹೇಳಿದರು. ಇಂದು ಆಧುನಿಕ ಕ್ಷಿಪಣಿಗಳು ಈ ಕೆಲಸವನ್ನು ಮಾಡಲು ಸಮರ್ಥವಾಗಿದೆ ಇವುಗಳನ್ನು ನಾವು ಮಹಾ ಅತ್ಯಾಧುನಿಕ ಸಾಧನೆಗಳೆಂದು ಕೊಂಡಾಡುತ್ತೇವೆ. ಈ ಕ್ಷಿಪಣಿಗಳ ತಂತ್ರಜ್ಞಾನವು ಇಂದು ಅಮೇರಿಕಾ, ರಷ್ಯಾ ಮುಂತಾದ ಮುಂದುವರಿದ ದೇಶಗಳ ನಿಯಂತ್ರಣದಲ್ಲಿದೆ. ನಾವು ಆ ಸರ್ಕಾರದವರ ಆ ಸಾಮರ್ಥ್ಯವನ್ನು ಕಂಡು ದಂಗಾಗಿ ಹೋಗಿದ್ದೇವೆ. ಅವರಿಗೆ ಶರಣಾಗತರಾಗಿದ್ದೇವೆ. ನಾವು ಹಿಂದುಳಿದವರು ಎಂದು ಒಪ್ಪಿಕೊಳ್ಳುತ್ತೇವೆ. ನಮ್ಮ ಹಿಂದುಳಿವಿಕೆಯಲ್ಲಿಯೇ ಪರಮಾನಂದವನ್ನು ಕಂಡುಕೊಳ್ಳುತ್ತೇವೆ. ಕೌಟಿಲ್ಯನ ಅರ್ಥಶಾಸ್ತ್ರ ಗ್ರಂಥದಲ್ಲಿ ರಾಜ ಮಾಂತ್ರಿಕರು ಯುದ್ಧಗಳಲ್ಲಿ ವಿಜಯ ಸಾಧಿಸಲು ಮಹತ್ತರವಾದ ಪಾತ್ರವಹಿಸುತ್ತಿದ್ದರು. ಕೃತ್ರಿಮವಾಗಿ ಹಾವು, ಹುಲಿ, ಸಿಂಹಗಳನ್ನು ಸೃಷ್ಟಿಮಾಡುತ್ತಿದ್ದರು ಎಂದು ಉಲ್ಲೇಖಿಸಲಾಗಿದೆ. ಅದೇ ಪ್ರಕಾರ ಬೌದ್ಧರ ಉನ್ನತಿಯ ಕಾಲದಲ್ಲಿ ಯಾವುದೇ ಬೌದ್ಧ ರಾಜನು ರಾಜ್ಯಭಾರವನ್ನು ನಿರ್ವಹಣೆ ಮಾಡಲು ಸೈನ್ಯವನ್ನು ಇಟ್ಟಿರಲಿಲ್ಲ ಬದಲಾಗಿ ಬೌದ್ಧ ಧರ್ಮದ ಬಿಕ್ಷುಗಳು ಈ ತಾಂತ್ರಿಕ ವಿಧ್ಯೆಯಿಂದಲೇ ದೇಶದ ಆಗುಹೋಗುಗಳನ್ನು ನಿಯಂತ್ರಿಸುತ್ತಿದ್ದರು ಎಂದು ಹೇಳಲಾಗಿದೆ. ವಿಶೇಷವಾಗಿ ಬೌದ್ಧಧರ್ಮವು ಟಿಬೇಟಿಯನ್ ಪ್ರದೇಶದಲ್ಲಿ ಪ್ರಸರಿಸುವಾಗ ಭಾರತದಲ್ಲಿ ತರಬೇತಿ ಹೊಂದಿದ ಬೌದ್ಧರು ತಮ್ಮ ಪವಾಡ ಸದೃಶ ತಾಂತ್ರಿಕ ವಿಧ್ಯೆಯಿಂದಲೇ ಅಲ್ಲಿ ತಮ್ಮ ಧರ್ಮವನ್ನು ಸ್ಥಾಪಿಸಿದರು ಎಂದು ಹೇಳಲಾಗುತ್ತಿದೆ.

ಆದರೆ ಸಾಮಾಜಿಕ ಅಸಮಾನತೆಯಿಂದ ಈ ವಿಧ್ಯೆಗಳು ಕಾಲಕಾಲಕ್ಕೆ ಅವನತಿ ಹೊಂದಿದವು. ನಂತರ ದೇಶವು 1000 ವರ್ಷ ವಿದೇಶಿ ದಾಸ್ಯಕ್ಕೆ ಒಳಗಾದಾಗ ಈ ವಿಧ್ಯೆಗಳಿಗೆ ರಾಜಾಶ್ರಯ ದೊರೆಯಲಿಲ್ಲ ಆಗ ನಮ್ಮ ರಾಜರು ಗುಲಾಮ ರಾಜರಾಗಿದ್ದರು ಈ ವಿಧ್ಯೆಯನ್ನು ಹೊಂದಿದ ಖಾಸಗೀ ವ್ಯಕ್ತಿಗಳು ತಮ್ಮ ಉಪ ಜೀವನಕ್ಕಾಗಿ ಯಾರದೋ ಒಳಿತಿಗಾಗಿ ಯಾರದೋ ವಿರುದ್ಧ ಈ ವಿಧ್ಯೆಯನ್ನು ಬಳಸಿದಾಗ ಅದು ಕೆಲವರಿಗೆ ಕೇಡನ್ನು ಉಂಟುಮಾಡಿತು ಆಗ ಅದಕ್ಕೆ ಕಪ್ಪು ವಿಧ್ಯೆ ಎಂದು ಪಟ್ಟಕಟ್ಟಲಾಯಿತು. ಈ ವಿಧ್ಯೆ ಕಳ್ಳತನಕ್ಕಾಗಿ ಉಪಯೋಗಿಸುವ ಹಂತಕ್ಕೆ ಬಂದಿತು. ಕೆಲವು ವರ್ಷಗಳ ಹಿಂದೆ ನನ್ನ ಊರಲ್ಲಿ ಹಿರಿಯರು ಹೇಳುತ್ತಿದ್ದರು ಮಂತ್ರವಿಧ್ಯೆಯಿಂದ ಒಬ್ಬ ರೈತನ ಕಣದಲ್ಲಿ ಇರುವ ಧಾನ್ಯವನ್ನು ಇನ್ನೊಬ್ಬರ ರೈತನ ಹೊಲಕ್ಕೆ ವರ್ಗಾಯಿಸುವ ಮಾಂತ್ರಿಕರು ಇದ್ದಾರೆ. ಯಾರಾದರು ಮನೆ ಕಟ್ಟುತ್ತಿದ್ದರೆ ಅಂದು ಎಷ್ಟೇ

ಕಟ್ಟಡ ಕಟ್ಟಿದರೂ ಅದು ಮರು ದಿನ ತನ್ನಿಂದ ತಾನೇ ಬೀಳುವಂತೆ ಮಾಡುವ ಮಂತ್ರಶಕ್ತಿ ಪರಿಣತಿ ಹೊಂದಿದ್ದರು ಎಂದು ಹೇಳುತ್ತಿದ್ದರು. ನನಗೆ ಪರಿಚಯದ ಒಬ್ಬರು ಯಾವುದೇ ಕಟ್ಟಡವನ್ನು ಒಂದು ದಿನದಲ್ಲಿ ಮಂತ್ರಶಕ್ತಿಯಿಂದ ಕೆಡುವಬಹುದು ಅಂತಹ ಮಾಂತ್ರಿಕರು ಇಂದಿಗೂ ಲಭ್ಯವಿರುತ್ತಾರೆ ಎಂದು ತಿಳಿಸಿದರು. ಕೆಲವು ಆದಿ ಜನಾಂಗದವರು ಹಸು ಮತ್ತು ಹಮ್ಮೆಗಳು ಹಾಲು ನೀಡದಂತೆ ಮಂತ್ರ ಮಾಡುತ್ತಾರೆ. ಆ ಆದಿ ಜನಾಂಗದವರ ಮನೆಯಿಂದ ಹುಲ್ಲು ತಂದು ದೂಪ ಹಾಕಿದಾಗ ಹಸುಗಳು ಪುನ: ಹಾಲು ಕೊಡುತ್ತವೆ ಎಂದು ತಿಳಿಸಿದರು. ಸುಮಾರು 50 ವರ್ಷಗಳ ಹಿಂದೆ ಬೆಳಗಾಂವ ಜಿಲ್ಲೆಯ ಕೆಲವು ಹಳ್ಳಿಯಲ್ಲಿ ಮದುವೆ ಸಮಾರಂಭಗಳು ನಡೆದಾಗ ಅಲ್ಲಿಯ ಸ್ಥಳೀಯ ಮಾಂತ್ರಿಕರು ತಮಾಷೆಗಾಗಿ ತಮ್ಮ ಮಂತ್ರ ಪ್ರಯೋಗಿಸಿ 'ಹತ್ತಂಡೆ' ಎಂದು ಹೇಳುತ್ತಿದ್ದರು. ಆಗ ಮದುವೆಗೆ ಆಗಮಿಸಿದ ವ್ಯಕ್ತಿಗಳು ಮುಟ್ಟಿದ ಯಾವುದೇ ವಸ್ತುಗಳು ಅವರಿಗೆ ಖಾಯಂ ಆಗಿ ಅಂಟಿಕೊಳ್ಳುತ್ತಿದ್ದವಂತೆ ಅಂದರೆ ಅವರು ಹಿಡಿದ ಲೋಟ ಅವರ ಕೈಯನ್ನು ಬಿಡುತ್ತಿರಲಿಲ್ಲ. ಅವರು ಕುಳಿತ ಮಣೆ ಅವರು ಎದ್ದಾಗಲೂ ಅವರ ಕುಂಡಿಗೆ ಅಂಟಿಕೊಂಡೇ ಇರುವಂತೆ ಮಾಡುತ್ತಿದ್ದರು. ಮದುವೆಯ ಮನೆಯ ಮುಖ್ಯಸ್ಥನು ಆ ಮಾಂತ್ರಿಕರಲ್ಲಿ ಹೋಗಿ ಗೌರವ ಸೂಚಿಸಿ ಅವರಿಗೆ ಅಲ್ಪ ದಕ್ಷಿಣೆ ನೀಡಿದಾಗ ಆ ಮಾಂತ್ರಿಕನು 'ಬಿತ್ತಂಡೆ' ಎಂದು ಉಚ್ಚರಿಸುತ್ತಿದ್ದನು ಆಗ ಮೊದಲಿನಂತೆ ಆಯಾ ವಸ್ತುಗಳು ಅವರನ್ನು ಬಿಟ್ಟುಬಿಡುತ್ತಿದ್ದವು ಎಂದು ಹೇಳುತ್ತಿದ್ದರು.

ಇಂದು ಸರ್ಕಾರ ಮನಸ್ಸು ಮಾಡಿದರೆ ಈ ಕಳ್ಳರನ್ನು ಒಳ್ಳೆಯವರನ್ನಾಗಿ ಮಾಡಬಹುದು. ಒಬ್ಬ ರೈತನ ಕಣದಿಂದ ಇನ್ನೊಬ್ಬ ರೈತನ ಕಣಕ್ಕೆ ಧಾನ್ಯವನ್ನು ಮಂತ್ರಶಕ್ತಿಯಿಂದ ಕಳವು ಮಾಡಬಹುದಾದರೆ ಅದೇ ರೈತನು ತನ್ನ ಕಣದಿಂದ ತನ್ನ ಧಾನ್ಯವನ್ನು ಎತ್ತು ಚಕ್ಕಡಿ ಸಹಾಯವಿಲ್ಲದೆ ತನ್ನ ಮನೆಗೆ ಧಾನ್ಯಗಳನ್ನು ತರಬಹುದು ಇಲ್ಲಿ ಕಳ್ಳತನ ಪ್ರಶ್ನೆ ಉದ್ಭವಿಸುವುದಿಲ್ಲ. ಅದೇ ಪ್ರಕಾರ ರೈತನ ಮನೆಯಿಂದ ಮಾರುಕಟ್ಟೆಗೆ ಧಾನ್ಯ ಸಾಗಿಸಬಹುದು ಅದೇ ಪ್ರಕಾರ ಒಂದು ಮಾರುಕಟ್ಟೆಯಿಂದ ಇನ್ನೊಂದು ಮಾರುಕಟ್ಟೆಗೂ ಮಾಂತ್ರಿಕ ಶಕ್ತಿಯಿಂದಲೇ ಧಾನ್ಯಗಳನ್ನು ವರ್ಗಾಯಿಸಬಹುದು ಆದರೆ ಈ ಬಗೆಯಾಗಿ ಪ್ರಯೋಗಗಳನ್ನು ಮಾಡಬೇಕಾದರೆ ಅದಕ್ಕೆ ಸಮಾಜದ ಮನ್ನಣೆಬೇಕು. ಆದರೆ ಇಂದು ಆ ಬಗ್ಗೆ ಚಿಂತಿಸುವುದೇ ಅಪರಾಧ ಎಂಬಂತೆ ನಡೆದುಕೊಳ್ಳುತ್ತೇವೆ.

ಈ ಜಗತ್ತಿನಲ್ಲಿ ಜೀವಿಗಳ ಸಾಲಿನಲ್ಲಿ ಹುಲಿ, ಸಿಂಹ, ಹಾವು, ಚೇಳು ಮುಂತಾದ ಕೆಟ್ಟ ಪ್ರಾಣಿಗಳು ಇವೆ ಅವುಗಳ ಸಂರಕ್ಷಣೆಗಾಗಿ ನಾವು ಪ್ರಯತ್ನಪಡುತ್ತಲಿದ್ದೇವೆ. ಅದೇ ಮಾದರಿಯಲ್ಲಿ ವಿಧ್ಯೆಯ ಸಾಲಿನಲ್ಲಿ ಈ ತಂತ್ರವಿಧ್ಯೆಯೂ ಒಂದು ವಿಭಾಗವಾಗಿದೆ. ಅದಕ್ಕೂ ಸೂಕ್ತ ಸ್ಥಾನಮಾನ ನೀಡುವುದು ತಪ್ಪು ಆಗಿರಲಾರದು ಇಲ್ಲದೇಹೋದಲ್ಲಿ ಎಲ್ಲ ಹುಲಿ, ಸಿಂಹ, ಹಾವು, ಚೇಳುಗಳನ್ನು ನಾಶಮಾಡಬೇಕಾಗಬಹುದು.

**ಕಾಕತಾಳಿಯವೋ ಎಂಬಂತೆ ದಿನಾಂಕ 06.11.2005 ಹಿಂದುಸ್ತಾನ ಪತ್ರಿಕೆಯಲ್ಲಿ** 'Indian in B-2 Scam may lose home' ಎಂಬ ಸುದ್ದಿ ಪ್ರಕಟವಾಯಿತು. ಅದೇ ಸುದ್ದಿಯನ್ನು ಸಂಕ್ಷಿಪ್ತಗೊಳಿಸಿ ದಿನಾಂಕ 12.11.2005ರ ಪ್ರಜಾವಾಣಿಯಲ್ಲಿ 'ರಹಸ್ಯ ದಾಖಲೆ ಮಾರಾಟ ಭಾರತೀಯ ಸಂಜಾತನ ವಂಚನೆ ಸಾಬೀತು' ಎಂದು ಪ್ರಕಟಿಸಲಾಯಿತು. ಈ ಸುದ್ದಿಯು ಈ ಲೇಖನದ 9ನೇ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ ಇದು Sealth Bomber ವಿಮಾನದ ಬಗ್ಗೆ ಸಂಬಂಧಿಸಿದೆ. ಈ ವಿಮಾನವನ್ನು ಅಭಿವೃದ್ಧಿ ಪಡಿಸುವಲ್ಲಿ ಭಾರತದೇಶ ಬೊಂಬಾಯಿ ನಗರದಲ್ಲಿ ಜನಿಸಿದ ಶ್ರೀ ನೋಶಿರ್ ಎಸ್. ಗೋವಾಡಿಯಾ ಅವರು ಪ್ರಮುಖ ಪಾತ್ರವನ್ನು ವಹಿಸಿದ್ದರು. ಈ ವಿಮಾನ ತಂತ್ರಜ್ಞಾನವು ಅತೀ ರಹಸ್ಯಜ್ಞಾನವಾಗಿದೆ. ಅದನ್ನು ವಿದೇಶಿಗಳಿಗೆ ಹಸ್ತಾಂತರ ಮಾಡಿದ್ದಕ್ಕಾಗಿ ಈಗ ಅವರ ವಿರುದ್ಧ ಅಮೇರಿಕಾ ಸರ್ಕಾರವು ಕ್ರಮಜರುಗಿಸುತ್ತಾ ಇದೆ ಎಂದು ತಿಳಿಸಲಾಯಿತು. ಕನ್ನಡ ಪತ್ರಿಕೆಯಲ್ಲಿ ಅವರು ಸಂಶೋಧಕರಾಗಿದ್ದರು ಎಂದು ತಿಳಿಸದೇ ಅಮೇರಿಕಾದಲ್ಲಿ ಒಬ್ಬ ಭಾರತೀಯ ಅಪರಾಧಿ ಎಂಬಂತೆ ಪ್ರಚಾರ ನೀಡಲಾಯಿತು. ಇಲ್ಲಿ ಇದನ್ನು ಉಲ್ಲೇಖಿಸುವ ಅವಶ್ಯಕತೆ ಏನೆಂದರೆ ಶ್ರೀ ನೋಶಿರ್. ಎಸ್. ಗೋವಾಡಿಯಾ ಅವರು ಆಧುನಿಕ ತಂತ್ರವಿದ್ಯಾ ಪ್ರವೀಣರಾಗಿರುತ್ತಾರೆ. ಈ ವಿದ್ಯೆಯಿಂದ ಒಂದು ದೇಶವು ಇನ್ನೊಂದು ದೇಶವನ್ನು ಅಧೀನಕ್ಕೆ ಒಳಪಡಿಸಿಕೊಳ್ಳುತ್ತದೆ. ಅದೇ ಸಮಯಕ್ಕೆ ಸಂಶೋಧಕರನ್ನು ಮತ್ತು ಅದರ ತಂತ್ರವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುತ್ತದೆ. ಇದೇ ಪ್ರಕಾರವಾಗಿ ಅಣ್ವಸ್ತ್ರ ವಿದ್ಯೆಯನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಇಂದು 'ಬಂದೂಕು' ಹೊಂದಿದ ವ್ಯಕ್ತಿಗೆ ಕೆಲವು ಕಟ್ಟುಪಾಡುಗಳನ್ನು ವಿಧಿಸಿ ಅವನನ್ನು ನಿಯಂತ್ರಣದಲ್ಲಿ ಇಡಲಾಗಿದೆ. ಸಮಾಜದ ಹಿತದೃಷ್ಟಿಯಿಂದ ಅವನಿಗೆ ಬಂದೂಕು ಇಟ್ಟುಕೊಳ್ಳುವ ಸ್ವಾತಂತ್ರ್ಯವನ್ನು ನೀಡಲಾಗಿದೆ. ಅದೇ ಪ್ರಕಾರ ಈ ಭಾನಾಮತಿ ತಂತ್ರವಿದ್ಯೆಯವರನ್ನು ಗುರುತಿಸಿ ಅವರಿಗೆ ಯೋಗ್ಯಸ್ಥಾನಮಾನವನ್ನು ನೀಡುವುದು ಅವಶ್ಯಕವಾಗಿದೆ ಮತ್ತು ಅದೇ ಸಮಯಕ್ಕೆ ಅವರ ಮೇಲೆ ಸಮಾಜದ ಹಿತದೃಷ್ಟಿಯಿಂದ ಸೂಕ್ತ ನಿಯಂತ್ರಣವನ್ನು ವಿಧಿಸುವುದು ಅವಶ್ಯಕವಿರುತ್ತದೆ. ಇದಕ್ಕೆ ಸೂಕ್ತ ನಿಯಮಗಳನ್ನು

ರಚಿಸಬಹುದು ತಂತ್ರ ವಿಧ್ಯೆಯಿಂದ ಧಾನ್ಯಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸಿದಲ್ಲಿ ಅದು ಒಂದು ಮಹತ್ತರ ಸಂಶೋಧನೆಯಾಗಬಹುದಾಗಿದೆ. ಸಾಗಾಣಿಕೆ ವೆಚ್ಚದಲ್ಲಿ ಗಣನೀಯ ಉಳಿತಾಯವಾಗುತ್ತದೆ. ಈ ಬಗ್ಗೆ ಸರ್ಕಾರ ತೆರೆದ ಮನಸ್ಸಿನಿಂದ ಗಂಭೀರವಾಗಿ ಯೋಚಿಸಲಿ ಎಂದು ಬಯಸುತ್ತೇನೆ.

# ಅಧ್ಯಾಯ 16

# ಮೈತುಂಬಿ ಹೇಳುವುದು ಮತ್ತು ಅಪರಾಧ ನಿಯಂತ್ರಣ

ಸಾಮಾನ್ಯವಾಗಿ ನಾವು ಮೈತುಂಬಿ ಹೇಳುವವರು, ದೇವರ ಬಗ್ಗೆ ಹೇಳುವವರನ್ನು ನಾವು ಗೇಲಿ ಮಾಡುತ್ತೇವೆ. ಹೀಗೆ ಗೇಲಿ ಮಾಡುವವರನ್ನು ಬುದ್ಧಿವಂತರು ಎನ್ನುವಂತೆ ನಮ್ಮಲ್ಲಿ ಸಾಮಾಜಿಕ ಮೌಲ್ಯಗಳನ್ನು ಬೆಳೆಸಲಾಗಿದೆ. ಹೀಗೆ ಗೇಲಿ ಮಾಡುವ ಮೊದಲು ಈ ಮೈತುಂಬಿ ಹೇಳುವವರ ಹೇಳಿಕೆಯಲ್ಲಿ ಸತ್ಯಾಸತ್ಯತೆ ಇದೆಯೇ ಎಂಬುದನ್ನು ನಾವು ಸಮಾಧಾನದಿಂದ ಪರೀಕ್ಷಿಸಿರುತ್ತೇವೆಯೇ? ಇಲ್ಲ. ಪರೀಕ್ಷಿಸುವ ಪ್ರಯತ್ನವನ್ನು ನಾವು ಮಾಡುವುದಿಲ್ಲ. ಏಕೆಂದರೆ ನಾವು ಅದನ್ನು ಪರೀಕ್ಷೆ ಮಾಡದೇ ನಿರ್ಣಯ ಹೇಳಲು ಸಮರ್ಥರು ಎಂದು ಭಾವಿಸಿರುತ್ತೇವೆ. ಇದಕ್ಕಾಗಿ ಈ ಬುದ್ಧಿವಂತರನ್ನೂ ಕೆಲವೊಮ್ಮೆ ಗೇಲಿ ಮಾಡಬೇಕಾಗುತ್ತದೆ. ಈ ಬಗ್ಗೆ ಅಧ್ಯಾಯ-7ರಲ್ಲಿ ಪರೋಕ್ಷವಾಗಿ ಉಲ್ಲೇಖಿಸಲಾಗಿದೆ.

ದಿನಾಂಕ 18.06.2006ರ ಮಧ್ಯಾಹ್ನ ನಾನು ಡಿಸ್ಕವರಿ ಚಾನಲ್ ನೋಡುತ್ತಿದ್ದೆನು. ಅದರಲ್ಲಿ ಆಗ ಸೈಕಿಕ್ ವಿಟ್ನೆಸ್ (**Psychic Witness**) ಎಂಬ ಧಾರಾವಾಹಿ ಪ್ರಸಾರವಾಗುತ್ತಿತ್ತು. ಆ ಧಾರಾವಾಹಿಯಲ್ಲಿ ಅಲ್ಲಿ ವ್ಯಕ್ತಿಯೊಬ್ಬರು ಕಳೆದುಹೋಗಿದ್ದಾರೆ ಎಂದು ಪೋಲೀಸರಿಗೆ ದೂರು ನೀಡಲಾಗುತ್ತದೆ. ಆ ವ್ಯಕ್ತಿಯ ಬಗ್ಗೆ 24 ಗಂಟೆ ತಿಳಿದುಬರುವುದಿಲ್ಲ. ಆಗ ಪೋಲೀಸರು ಈ ಮೈತುಂಬಿ ಹೇಳುವವರಿಗೆ ಕಳೆದುಹೋದ ವ್ಯಕ್ತಿಯ ಬಗ್ಗೆ ಕೇಳುತ್ತಾರೆ. ಆಗ ಮೈತುಂಬಿ ಹೇಳುವವಳು, ಕಳೆದುಹೋದ ವ್ಯಕ್ತಿಯ ಕೊಲೆಯಾಗಿದೆ ಎಂದು ತಿಳಿಸುತ್ತಾರೆ ಮತ್ತು ಕೊಲೆಯಾಗಿರಬಹುದಾದ ಪ್ರದೇಶದ ಬಗ್ಗೆಯೂ ಸೂಚನೆ ನೀಡುತ್ತಾಳೆ, ಆಗ ಪೋಲೀಸರು ಸದರಿ ಸ್ಥಳ ಪರಿಶೀಲನೆ ಮಾಡಿದ ತರುವಾಯ ಅಲ್ಲಿಯ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವಾಗ ಒಂದು ಚಪ್ಪಲಿ, ಬ್ಯಾಗು ಸಿಗುತ್ತವೆ ಇವುಗಳನ್ನು ಮೈತುಂಬಿ ಹೇಳುವವರಿಗೆ ನೀಡಿದಾಗ ಮೈತುಂಬಿ ಹೇಳುವವಳು ಆರೋಪಿಯ ವಾಸವಾಗಿರುವ ಸ್ಥಳವನ್ನು ತಿಳಿಸುತ್ತಾಳೆ. ಆರೋಪಿ ತನ್ನ ವಾಸದ ಮನೆ ಸಮೀಪ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಒಂದು ಚೀಟಿ ಬರೆದು ಇಟ್ಟಿರುತ್ತಾನೆ. ಆ ಚೀಟಿಯನ್ನು ಪುನ: ಮೈತುಂಬಿ ಹೇಳುವವರಿಗೆ ನೀಡಿದಾಗ ಆರೋಪಿ ಈಗ ತನ್ನ ಮನೆಗೆ ಬರುವವನಿದ್ದು ಕೆಲವು ಸಮಯದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎಂದು ತಿಳಿಸುತ್ತಾರೆ. ಆಗ ಪೋಲೀಸರು ಅಲ್ಲಿಗೆ ಹೋಗಿ ಆರೋಪಿ ಆತ್ಮಹತ್ಯೆ ಮಾಡಿಕೊಳ್ಳುವ ಮೊದಲು ಅವನನ್ನು ಬಂಧಿಸುತ್ತಾರೆ.

ನ್ಯಾಯಾಲಯದಲ್ಲಿ ಪ್ರಕರಣ ನಡೆದು ಆರೋಪಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗುತ್ತದೆ ಮತ್ತು ನ್ಯಾಯಾಲಯವು ಈ ಪ್ರಕಾರ ಮೈತುಂಬಿ ಹೇಳುವವರ ಹೇಳಿಕೆಯನ್ನು ನಂಬಬೇಕು ಎಂದು ತಿಳಿಸುತ್ತದೆ. ಈ ಧಾರಾವಾಹಿ ಕಾರ್ಯಕ್ರಮದಲ್ಲಿ ಮೈತುಂಬಿ ಹೇಳುವವಳ ಅಭಿಪ್ರಾಯ ಕೇಳಿದಾಗ ನಮ್ಮಲ್ಲಿ ದೈವತ್ವ ಎಂಬುದಿಲ್ಲ. ಆದರೆ ಸಾಮಾನ್ಯ ಮನುಷ್ಯರಿಗಿಂತಲೂ ನಾವು ಹೆಚ್ಚಿನದನ್ನು ನೋಡುವ ಶಕ್ತಿ ಹೊಂದಿದ್ದೇವೆ. ಆದರೆ ನಾವು ಸಾಮಾನ್ಯ ಜನರಾಗಿದ್ದೇವೆ ಎಂದು ಹೇಳಿದಳು.

ಈ ಬಗ್ಗೆ ಇಂಟರ್‌ನೆಟ್‌ನಲ್ಲಿ ಹೆಚ್ಚಿನ ವಿವರ ಸಿಗುವುದೇ ಎಂದು ನೋಡಲಾಗಿ, ಈ ಬಗ್ಗೆ ಸುಮಾರು 15 ಜನ ಪ್ರಸಿದ್ದ ''ಮೈತುಂಬಿ ಹೇಳುವವರು'' ಅಮೇರಿಕಾದಲ್ಲಿ ಇದ್ದಾರೆ ಅವರು ಪೋಲೀಸ್ ಇಲಾಖೆಯೊಂದಿಗೆ ಸಹಕರಿಸಿ ಅಪರಾಧಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತಾರೆ ಎಂಬ ಆಶ್ಚರ್ಯಕರ ಅಂಶ ತಿಳಿದುಬಂತು (ಅನುಬಂದ-12 ನೋಡಿರಿ) ಅಮೇರಿಕಾ ದೇಶವು ಆಧುನಿಕ ತಂತ್ರಜ್ಞಾನದಲ್ಲಿ ಮುಂದುವರಿದ ದೇಶವಾಗಿದ್ದರೂ ಈ ಮೈತುಂಬಿ ಹೇಳುವವರ ಸೇವೆಯನ್ನು ಸರ್ಕಾರ

/ ಪೋಲೀಸರು ನ್ಯಾಯಾಲಯಗಳು ಸಮರ್ಥವಾಗಿ ಬಳಸಿಕೊಳ್ಳುತ್ತಲಿವೆ ಮತ್ತು ಅವರಿಗೆ ಮನ್ನಣೆ ನೀಡಿರುತ್ತವೆ.

ಭಾರತದ ಆಡಳಿತದಲ್ಲಿ ನಾವು ''ಮೈತುಂಬಿ ಹೇಳುವವರ'' ಸೇವೆಗೆ ಮನ್ನಣೆ ನೀಡಿರುತ್ತೇವೆಯೇ? ಅವರ ಸೇವೆಯನ್ನು ನಿತ್ಯ ಆಡಳಿತದಲ್ಲಿ ಉಪಯೋಗಿಸಿರುತ್ತೇವೆಯೇ? ಎಂಬ ಬಗ್ಗೆ ಪೋಲೀಸ್ ಇಲಾಖೆ ಉತ್ತರಿಸಬೇಕು ಎಂದು ವಿನಂತಿಸುತ್ತೇನೆ. ಒಂದು ಪಕ್ಷ ಮೈತುಂಬಿ ಹೇಳುವವರ ಸೇವೆ ಉಪಯೋಗಿಸಿಕೊಳ್ಳುತ್ತಾ ಇದ್ದರೆ ಸಂತೋಷ ಆದರೆ ಅವರಿಗೆ ಮನ್ನಣೆ ನೀಡುವುದು ಅವಶ್ಯವಿದೆ.

ಆದರೆ ನಾನು ತಿಳಿದಂತೆ ಅವರಿಗೆ ನಮ್ಮ ಆಡಳಿತ ಮತ್ತು ನ್ಯಾಯಾಲಯಗಳು ಅವರ ಶಕ್ತಿಗೆ ಮನ್ನಣೆ ನಿಡುತ್ತಿಲ್ಲ ಮತ್ತು ಪರೀಕ್ಷೆ ಮಾಡುವ ಸಮಾಧಾನ ಹೊಂದಿರುವುದಿಲ್ಲ ಈ ಸೂಕ್ಷ್ಮ ವಿಜ್ಞಾನವನ್ನು ಗುರುತಿಸಲು ನಮ್ಮ ಆಡಳಿತ ವಿಫಲವಾಗಿದೆ. ಇದು ವಿಷಾದನೀಯ ಈಗಲಾದರೂ ನಮ್ಮ ಆಡಳಿತ/ಪೋಲೀಸ್/ನ್ಯಾಯಾಲಯಗಳು ಎಚ್ಚೆತ್ತುಕೊಂಡು ಭಾರತದ ಕೆಲವು ಸಾಮಾನ್ಯರಲ್ಲಿ ಇರುವ ಈ ಅಮೂಲ್ಯವಾದ ಶಕ್ತಿಯನ್ನು ಸಮಾಜದ ಹಿತಕ್ಕಾಗಿ ಅಂದರೆ ಅಪರಾಧಗಳನ್ನು ತಡೆಗಟ್ಟುವುದಕ್ಕಾಗಿ ನಾವು ಉಪಯೋಗಿಸಬೇಕಾಗಿದೆ.